بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّي عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 03

ಸಂಚಿಕೆ: 01–02

ವಾರ್ಷಿಕ ಶುಲ್ಕ ರೂ.575/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

06–13 ಜನವರಿ 2022, 06, 13 ಸುಲಹ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
02–09 ಜಮಾದಿ ಉಸ್ಸಾನಿ 1443 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَلَقَدِ اسْتُهْزِئَ بِرُسُلٍ مِّنْ قَبْلِكَ فَحَاقَ بِالَّذِيْنَ سَخِرُوْا مِنْهُمْ مَّا كَانُوْا بِهٖ يَسْتَهْزِءُوْنَ

**(ಅಲ್‌ಅನ್‌ಆಂ : 11)**

**ಅಂದರೆ: (ಎಲೈ ಪ್ರವಾದಿಯೇ,) ನಿನಗೆ ಮುಂಚೆ ಸಹ ಪ್ರವಾದಿಗಳು ಅಪಹಾಸ್ಯಕ್ಕೆ ಗುರಿಯಾಗಿದ್ದಾರೆ. ಅದರ ಫಲವಾಗಿ, ಅವರು ಏನನ್ನು ಅಪಹಾಸ್ಯ ಮಾಡುತ್ತಿದ್ದರೋ ಅದು (ಆ ಶಿಕ್ಷೆ) ಅವರಲ್ಲಿ ಅಪಹಾಸ್ಯ ಮಾಡಿದವರನ್ನೇ ಸುತ್ತುವರಿಯಿತು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಹಜ್ರೆ ಅಸ್ವದನ್ನು ಛಡಿಯಿಂದ ಸ್ಪರ್ಶಿವುದು.

(1607) ಹಝ್‌ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ. ನಬಿ(ಸ) ಹಜ್ಜತುಲ್ ವಿದಾ (ಅಂತಿಮ ಹಜ್ಜ್) ಸಮಯ ತನ್ನ ಒಂಟೆಯ ಮೇಲೆ ಸವಾರರಾಗಿ ತವಾಫ್ ಮಾಡಿದರು. ಅವರು ಹಜರೆ ಅಸ್ವದನ್ನು (ಕಪ್ಪು ಕಲ್ಲನ್ನು) ಛಡಿಯಿಂದ ಸ್ಪರ್ಶಿಸುತ್ತಿದ್ದರು.

### ಹಜ್ರೆ ಅಸ್ವದೆಡೆ ಸಂಕೇತಿಸುವುದು.

(1632) ಹಝ್‌ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಬೈತುಲ್ಲಾಹ್) ರವರ (ಕಅಬದ) ತವಾಫ್ ಮಾಡಿದರು. ಆಗ ಅವರು ಒಂಟೆಯ ಮೇಲೆ ಸವಾರರಾಗಿದ್ದರು.

ಅವರು ಹಜ್ರೆ ಅಸ್ವದ್ ಮುಂದೆ ಬರುವಾಗ ಅವರ ಆ ಕಡೆ ಒಂದು ವಸ್ತುವಿನಿಂದ ಸಂಕೇತಿಸುತ್ತಿದ್ದರು ಮತ್ತು ಅಲ್ಲಾಹು ಅಕ್ಬರ್ ಎನ್ನುತ್ತಿದ್ದರು.

**(ಸಹೀಹ್ ಬುಖಾರಿ, ಸಂಪುಟ–3, ಕಿತಾಬುಲ್ ಹಜ್ಜ್, ಮುದ್ರಣ ಖಾದಿಯಾನ್)**

**ಪ್ರಶಂಸನಿಯವಾಗಿದ್ದಾನೆ. ಆ ಸತ್ಯಸಂಧಕ, ಅವನು ಅಲ್ಲಾಹನ ಯಾವ ಆಜ್ಞೆಗಳ ಸೀಮೆಯನ್ನು ಉಲ್ಲಂಘಿಸಲು ಬಯಸಲಿಲ್ಲ. ಅದರ ಬದಲು ಅವನ ಮಾರ್ಗದಲ್ಲಿ ಬಂದ ಎಲ್ಲಾ ಆಪತ್ತುಗಳನ್ನು ಮತ್ತು ದುಃಖಗಳನ್ನು ಎದುರಿಸಲು ಸಿದ್ಧನಾದನು.**

**ಯೂಸೂಫ್(ಅ) ಅವರು ಅಲ್ಲಾಹನ ಸೌಂಧರ್ಯ ಮತ್ತು ಉಪಕಾರಗಳ ಮೇಲೆ ಸೋತುಹೊಗುತ್ತಿದ್ದರು ಮತ್ತು ಅಲ್ಲಾಹನ ಪ್ರೇಮದಲ್ಲಿ ಮುಳುಗಿದವರಾಗಿದ್ದರು. ಅವರು ಎಂದೂ ಅಲ್ಲಾಹನ ಪರಿಮಿತಿಗಳನ್ನು ಉಲ್ಲಂಘಿಸಬಯಸುತ್ತಿರಲಿಲ್ಲ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಹಿಂದಿನ ಕಾಲದಲ್ಲಿ ಅವಲೋಕಿಸಿ ನೊಡಿದರೆ ಯೂಸೂಫ್‌ರಂತಹ ಸತ್ಯಸಂಧಕರನ ಉದಾಹರಣೆ ಕಾಣಸಿಗುವುದು ತುಂಬಾ ವಿರಳ ಯೂಸುಫರು ಎಂತಹ ಸತ್ಯವಂತಿಕೆಯನ್ನು ತೋರ್ಪಡಿಸಿದರು ಎಂದರೆ ಸತ್ಯಸಂಧಕರೆನಿಸಿಕೊಂಡರು. ಓರ್ವ ಸುಂದರಿ, ಗೌರವಯುತೆ ಮತ್ತು ಯೌವ್ವನ ತುಂಬಿದ ಮಹಿಳೆ, ಅವಳು ದೊಡ್ಡ ದೊಡ್ಡ ದಾವೆಗಳನ್ನು ಸಾರುವವಳಾಗಿದ್ದಳು. ಅಪ್ಪಟ ಏಕಾಂತದಲ್ಲಿ, ಗೌಪ್ಯವಾಗಿ ವ್ಯಭಿಚಾರ ಮಾಡಬಯಸುತ್ತಿದ್ದಳು. ಆದರೆ ಪ್ರಶಂಸನೀಯವಾಗಿದ್ದಾನೆ. ಆ ಸತ್ಯಸಂಧಕ, ಅವನು ಅಲ್ಲಾಹನ ಯಾವ ಆಜ್ಞೆಗಳ ಸೀಮೆಯನ್ನು ಉಲ್ಲಂಘಿಸಲು ಬಯಸಲಿಲ್ಲ. ಅದರ ಬದಲು ಅದರ ಎದುರಾಗಿ ಬಂದ ಎಲ್ಲಾ ಆಪತ್ತುಗಳನ್ನು ದುಃಖಗಳನ್ನು ಎದುರಿಸಲು ಸಿದ್ಧಗೊಂಡರು. ಅದಕ್ಕಾಗಿ ಬಂಧಿಯಾಗಿ ಜೀವಿಸಲು ಸಿದ್ಧರಾದರು. ಅಂದಹಾಗೆ ಹೇಳಿದರು: **ರಬ್ಬಿಸ್ಸಿಜ್‌ನು ಅಹಬ್ಬು ಇಲೈಯ ಮಿಮ್ಮಾ ಯದ್‌ಊನನಿ ಇಲೈಹಿ** (ಯೂಸೂಫ್–34) ಅಂದರೆ ಯೂಸೂಫ್(ಅ)ರು ಹೀಗೆ ದುಆ ಮಾಡಿದರು. ನನ್ನ ಪ್ರಭೂ ಇವರು ನನ್ನನ್ನು ಯಾವುದರ ಕಡೆಗೆ ಕರೆಯುತ್ತಾರೋ ಅದಕ್ಕಿಂತಲೂ ಸೆರೆಮನೆವಾಸವೇ ನನಗಿಷ್ಟ. ಅದರಿಂದ ಹಝ್‌ರತ್ ಯೂಸೂಫ್(ಅ) ರವರ ಸಜ್ಜನ ಸ್ವಭಾವ ಹಾಗೂ ಪ್ರವಾದಿತ್ವದ ಅಭಿಮಾನ ವ್ಯಕ್ತವಾಗುತ್ತದೆ. ಬೇರೆ ಯಾವ ಕಾರ್ಯದ ಪ್ರಸ್ತಾವನೆಯೂ ದೊರೆಯುವುದಿಲ್ಲ. ಅದರ ಹೆಸರು ತೊಗೊಳದೇ ಇರುವ ಕಾರಣವೇನು. ಯೂಸೂಫರು ಅಲ್ಲಾಹನ ಸೌಂದರ್ಯ ಹಾಗೂ ಉಪಕಾರಗಳಿಗೆ ಬಲಿಯಾಗಿದ್ದರು ಮತ್ತು ಅವರು ಅಲ್ಲಾಹನ ಪ್ರೇಮದಲ್ಲಿ ಮುಳುಗಿದವರಾಗಿದ್ದರು. ಅವರ ದೃಷ್ಟಿಯಲ್ಲಿ ತನ್ನ ಪ್ರಿಯಕರನ ಹೊರತು ಯಾರ ಮಾತೂ ಸಹ ಹಿಡಿಸುತ್ತಿರಲಿಲ್ಲ. ಅವರು ಯಾವ ಮಾತಿಗೂ ಅಲ್ಲಾಹನ ಪರಿಮಿತಿಗಳನ್ನು ಉಲ್ಲಂಘಿಸಲು ಬಯಸುತ್ತಿರಲಿಲ್ಲ.

ಅವರು ಸುಮಾರು 12 ವರ್ಷಗಳ ಸಮೀಪ ಸೆರೆವಾಸದ ಜೀವನ ನಡೆಸಿದರು ಎನ್ನಲಾಗುತ್ತದೆ. ಆದರೆ ಆ ಅವಧಿಯಲ್ಲಿ ನಾಲಿಗೆಯ ಮೇಲೆ ಯಾವ ದೂರು ಸುಳಿಯಲಿಲ್ಲ. ಅಲ್ಲಹನ ಮತ್ತು ಅವನ ವಿಧಿಯ ಮೇಲೆ ಸಂಪೂರ್ಣ ರೀತಿಯಲ್ಲಿ ತೃಪ್ತರಾಗಿದ್ದರು. ಈ ಅವಧಿಯಲ್ಲಿ ತನ್ನ ಒಡೆಯನಾದ ದೊರೆಯನಿಗೆ ಒಂದು ಅರ್ಜಿ ಸಹ ಸಲ್ಲಿಸಿಲ್ಲ. ನನ್ನ ಬಗ್ಗೆ ವಿಚಾರ ಮಾಡಿ ಎಂದು ಅಥವಾ ಬಿಡುಗಡೆಗೊಳಿಸಿರಿ ಎಂದು. ಬದಲು ಹೇಳಲಾಗುತ್ತದೆ. ಆ ಸ್ವಾರ್ಥಿ ಮಹಿಳೆ ಅವರ ಮೇಲೆ ಕಷ್ಟಗಳನ್ನು ಇನ್ನಷ್ಟು ಹೆಚ್ಚಿಸಿದಳು. ಹೇಗಾದರೂ ತನ್ನ ಬಳಿ ಬರಲಿ ಎಂದು. ಆದರೆ ಆ ಸತ್ಯವಂತನು ತನ್ನ ಸತ್ಯವನ್ನು ಬಿಡಲಿಲ್ಲ. ಅಲ್ಲಾಹನು ಅವರಿಗೆ “ಸತ್ಯಸಂಧಕ” ನೆಂದನು. ಇದು ಸಹ ಸತ್ಯಸಂಧಕದ ಒಂದು ಶ್ರೇಷ್ಠ ಸ್ಥಾನವಾಗಿದೆ. ಲೋಕದ ಯಾವ ಆಪತ್ತು, ಯಾವ ಕಷ್ಟ ಮತ್ತು ಯಾವ ಅವಮಾನ ಅವರನ್ನು ಅಲ್ಲಾಹನ ಪರಿಮಿತಿಗಳನ್ನು ಉಲ್ಲಂಘಿಸುವಂತೆ ಮಾಡಲಿಲ್ಲ. ಎಷ್ಟೆಲ್ಲಾ ಕಷ್ಟಗಳನ್ನು ದುಃಖಗಳನ್ನು ಹೆಚ್ಚು ಮಾಡುತ್ತಿದ್ದರು. ಅಷ್ಟೇ ಅವರ ಸತ್ಯತೆಯ ಸ್ಥಾನವನ್ನು ಬಲಪಡಿಸುತ್ತಿತ್ತು ಮತ್ತು ಅದರಲ್ಲೇ ಅವರು ಸಂತೋಷ ಅನುಭವಿಸುತ್ತಿದ್ದರು.

ಒಟ್ಟಾರೆ ನಾನು ಹೇಳಿದಂತೆ ಮನುಷ್ಯನು **ಇಯ್ಯಾಕ ನಅಬುದು** ಎಂದು ಹೇಳಿ ಸತ್ಯ ಮತ್ತು ನಿಷ್ಠೆಯ ಹೆಜ್ಜೆ ಮುಂದು ಹಾಕಿದರೆ ಅಲ್ಲಾಹನು ಸತ್ಯದ ಹೇಳಿಕೆಯ ಒಂದು ದೊಡ್ಡ ನದಿಯು ಅವನಿಗಾಗಿ ಹರಿಸಿಬಿಡುತ್ತಾನೆ. ಅದು ಅವನ ಹೃದಯ ಮೇಲೆ ಬಂದು ಬೀಳುತ್ತದೆ ಮತ್ತು ಅವನಿಗೆ ಸತ್ಯದಿಂದ ಮೇಲೆತ್ತುತ್ತದೆ. ಅವನು ತನ್ನ ಕಡೆಯಿಂದ ದುಃಖಪಡುತ್ತಾನೆ. ಆದರೆ ಅಲ್ಲಾಹನು ಅವನಿಗೆ ಅಮೂಲ್ಯವಾದ ವಸ್ತುವನ್ನು ದಯಪಾಲಿಸುತ್ತಾನೆ. ಅದರಿಂದ ನಮ್ಮ ಉದ್ದೇಶ ಮನುಷ್ಯನು ಸತ್ಯಸಂಧಕ ಗುಣಗಳಲ್ಲಿ ಪವಾಡ ರೀತಿಯ ಬಲ ನೀಡುವುದಾಗಿರುತ್ತದೆ. ಅವನ ಮೇಲೆ ಎಷ್ಟೊಂದು ಸಾಕ್ಷ್ಯಗಳ ಹಾಗೂ ಆಧ್ಯಾತ್ಮಿಕ ಜ್ಞಾನಗಳ ಬಾಗಿಲು ತೆರೆಯಲ್ಪಡುತ್ತದೆ ಮತ್ತು ಎಂತಹ ಬಲ ನೀಡಲಾಗುತ್ತದೆಂದರೆ ಯಾರೂ ಸಹ ಅದರ ಎದುರು ನಿಲ್ಲಲಾರರು.

**(ಮಲ್ಫೂಝಾತ್, ಸಂಪುಟ–1, ಪುಟ–345 ಮುದ್ರಣ 2018, ಖಾದಿಯಾನ್)**

## ಹಝ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್‌ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ."

***(ಅರ್‌ಬಈನ್ ನಂಪುಟ–1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

# ಖುತ್‌ಬ ಜುಮುಅ

ಅಬ್ದುಲ್ಲಾಹ್ ಬಿನ್ ಶಹ್‌ರ್‌ಝ಼ಾದ್ ಹೇಳುತ್ತಾರೆ: ಹಝ್ರ಼ತ್ ಉಮರ್(ರ) ಬಿಕ್ಕಿಬಿಕ್ಕಿ ಅಳುವುದು ನನಗೆ ಕೇಳಿಸಿತು. ನಾನು ಕೊನೆಯ ಪಂಕ್ತಿಯಲ್ಲಿದ್ದೆ. ಅವರು ಹೀಗೆ ತಿಲಾವತ್ ಮಾಡುತ್ತಿದ್ದರು: **ಇನ್ನಮಾ ಅಶ್‌ಕೂ ಬಸ್ಸೀ ವ ಹುಝ್ನ಼ೀ ಇಲಲ್ಲಾಹ್**. ಎಂದರೆ, ನಾನು ನನ್ನ ದುಃಖ ಮತ್ತು ನೋವನ್ನು ಅಲ್ಲಾಹನು ಮುಂದೆ ಮಾತ್ರ ಇರಿಸುತ್ತೇನೆ.

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝ಼ಮ್ ಹಝ್ರ಼ತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ಼ತ್ ಮಿರ್ಝ಼ಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **19-11-2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಸಹಾಬರ ಹಿಂದಿನ ಸ್ಥಿತಿ ಮತ್ತು ಇಸ್ಲಾಮ್ ಸ್ವೀಕಾರದ ನಂತರ ಅವರ ಸ್ಥಿತಿಗಳಲ್ಲಿ ಉಂಟಾದ ಬದಲಾವಣೆಗಳ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರ಼ತ್ ಮುಸ್ಲಿಹ್ ಮೌಊದ್(ರ) ಅದರ ಒಂದು ಉದಾಹರಣೆ ಬಗ್ಗೆಯೂ ಹೇಳಿರುವರು. ಈ ಉದಾಹರಣೆಯನ್ನು ನಾನು ಮುಂಚೆಯೂ ಪ್ರಸ್ತಾಪಿಸಿದ್ದೇನೆ. ಆದರೆ ವಿಷಯಕ್ಕೆ ಸಂಬಂಧಪಟ್ಟು ಇಲ್ಲೂ ಪ್ರಸ್ತಾಪಿಸುತ್ತೇನೆ. ಅವರು ಬರೆಯುತ್ತಾರೆ: ಸಹಾಬರು ಹೇಗೆ ಹಝ್ರ಼ತ್ ಪೈಗಂಬರರ(ರ) ಸಹಾಬರಾದರು ಮತ್ತು ಅವರು ಹೇಗೆ ಮಹತ್ತಾದ ಪದವಿಗಳನ್ನು ಗಳಿಸಿದರು ಹಾಗೂ ಅವರು ಎಂತಹ ಪ್ರಯತ್ನಗಳನ್ನು ಮಾಡಿದ್ದರು ಎಂದು ನೋಡಿರಿ. ಮೊದಲು ಅವರು ಹಝ್ರ಼ತ್ ಪೈಗಂಬರರ(ಸ) ಕಠಿಣ ವಿರೋಧಿಗಳಾಗಿದ್ದರು ಮತ್ತು ಅವರನ್ನು ಬೈಯ್ಯುತ್ತಿದ್ದರು. ಹಝ್ರ಼ತ್ ಉಮರ್(ರ) ಹಝ್ರ಼ತ್ ಪೈಗಂಬರರ(ಸ) ನಂತರ ಎರಡನೇ ಖಲೀಫರಾದರು. ಆರಂಭದಲ್ಲಿ ಅವರು ಎಂತಹ ಕಠಿಣ ಶತ್ರುವಾಗಿದ್ದರು ಎಂದರೆ, ಹಝ್ರ಼ತ್ ಪೈಗಂಬರರನ್ನು(ಸ) ವಧಿಸಲು ಮನೆಯಿಂದ ಹೊರಟಿದ್ದರು. ಮಾರ್ಗ ಮಧ್ಯೆ ಭೇಟಿಯಾದ ಒಬ್ಬ ವ್ಯಕ್ತಿಯು ಅವರೊಡನೆ 'ಎಲ್ಲಿಗೆ ಹೋಗುತ್ತಿದ್ದೀರಿ' ಎಂದು ಕೇಳಿದರು. ಮುಹಮ್ಮದನ್ನು ಕೊಲ್ಲಲು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಹೋಗುತ್ತಿದ್ದೇನೆ ಎಂದು ಅವರು ಹೇಳಿದರು. ಮೊದಲು ನಮ್ಮ ಸಹೋದರಿ ಮತ್ತು ಅಳಿಯನನ್ನು ಕೊಲ್ಲಿರಿ, ಆಮೇಲೆ ಮುಹಮ್ಮದನ್ನು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಕೊಲ್ಲುವ ಬಗ್ಗೆ ಚಿಂತಿಸಿರಿ ಎಂದು ಆ ವ್ಯಕ್ತಿ ಹೇಳಿದರು. ಇದನ್ನು ಕೇಳಿ ಹಝ್ರ಼ತ್ ಉಮರ್(ರ) ಬಹಳ ಕೋಪಗೊಂಡರು ಮತ್ತು ತನ್ನ ಸಹೋದರಿಯ ಮನೆಯ ಕಡೆಗೆ ಹೊರಟರು. ಮುಂದೆ ಹೋಗಿ ನೋಡಿದಾಗ ಬಾಗಿಲು ಮುಚ್ಚಲಾಗಿತ್ತು. ಒಬ್ಬ ವ್ಯಕ್ತಿ ಪವಿತ್ರ ಖುರ್‌ಆನ್ ಓದಿಹೇಳುತ್ತಿದ್ದನು. ಉಮರರ ಸಹೋದರಿ ಮತ್ತು ಭಾವ ಅದನ್ನು ಆಲಿಸುತ್ತಿದ್ದರು. ಆ ವರೆಗೂ ಪರ್ದಾದ ಆದೇಶ ಅವತೀರ್ಣವಾಗಿರಲಿಲ್ಲ. ಆ ಸಹಾಬಿಯು ಮನೆಯೊಳಗೆ ಇದ್ದರು. ಹಝ್ರ಼ತ್ ಉಮರ್(ರ) ಬಾಗಿಲನ್ನು ತಟ್ಟಿಕೊಂಡು ತೆರೆಯಲು ಹೇಳಿದರು. ಅವರು ಬಂದು ಹೊಡೆಯುವರು ಎಂದು ಮನೆಯಲ್ಲಿದ್ದವರು ಹೆದರಿದರು. ಆದ್ದರಿಂದ ಅವರು ಬಾಗಿಲನ್ನು ತೆರೆಯಲಿಲ್ಲ. ಬಾಗಿಲನ್ನು ತೆರೆಯದಿದ್ದರೆ ಬಾಗಿಲನ್ನು ಒಡೆದು ಹಾಕುವೆನು ಎಂದು ಹಝ್ರ಼ತ್ ಉಮರ್ ಹೇಳಿದರು. ಆಗ ಅವರಿಬ್ಬರೂ ಪವಿತ್ರ ಖುರ್‌ಆನ್ ಓದಿಹೇಳುತ್ತಿದ್ದ ಸಹಾಬಿಯನ್ನು ಅಡಗಿಸಿದರು ಮತ್ತು ಅಳಿಯನು ಸಹ ಅಡಗಿ ಕುಳಿತರು. ಸಹೋದರಿ ಮಾತ್ರ ಮುಂದೆ ಬಂದು ಬಾಗಿಲನ್ನು ತೆರೆದರು. ಹಝ್ರ಼ತ್ ಉಮರ್(ರ) ಕೇಳಿದರು: ನೀವು ಏನು ಮಾಡುತ್ತಿದ್ದೀರಿ? ಏನೋ ಓದಿ ಹೇಳುತ್ತಿದ್ದ ವ್ಯಕ್ತಿ ಯಾರಾಗಿದ್ದನು? ಅವರು ಭಯಗೊಂಡು ವಿಷಯವನ್ನು ಬದಲಾಯಿಸಲು ಬಯಸಿದರು. ಹಝ್ರ಼ತ್ ಉಮರ್(ರ) ಹೇಳಿದರು: ಓದಿಹೇಳುತ್ತಿದ್ದದ್ದನ್ನು ನನಗೂ ಓದಿ ಹೇಳಿರಿ. ಸಹೋದರಿ ಹೇಳಿದರು: ನೀವು ಅದರೊಂದಿಗೆ ಅಪಮರ್ಯಾದೆಯಿಂದ ವರ್ತಿಸುವಿರಿ. ಆದ್ದರಿಂದ ನೀವು ನಮ್ಮನ್ನು ಕೊಂದರೂ ನಾವು ಅದನ್ನು ಓದಿ ಹೇಳಲಿಕ್ಕಿಲ್ಲ. ಹಝ್ರ಼ತ್ ಉಮರ್(ರ) ಹೇಳಿದರು: ಇಲ್ಲ, ನಾನು ಅದರೊಂದಿಗೆ ಅಪಮರ್ಯಾದೆಯಿಂದ ವರ್ತಿಸುವುದಿಲ್ಲವೆಂದು ನಾನು ವಾಗ್ದಾನ ಮಾಡುತ್ತೇನೆ. ಎಂದರೆ ಪವಿತ್ರ ಖುರ್‌ಆನಿನೊಂದಿಗೆ ಅಗೌರವಭಾವ ತೋರಿಸುವುದಿಲ್ಲ. ಆಗ ಅವರು ಪವಿತ್ರ ಖುರ್‌ಆನ್ ವಚನಗಳನ್ನು ಓದಿಹೇಳಿದರು. ಅವುಗಳನ್ನು ಆಲಿಸಿ ಹಝ್ರ಼ತ್ ಉಮರ್(ರ) ಅತ್ತುಬಿಟ್ಟರು. ಓಡುತ್ತಾ ಅವರು ಹಝ್ರ಼ತ್ ಪೈಗಂಬರರ(ಸ) ಬಳಿಗೆ ಹೋದರು. ಖಡ್ಗವು ಅವರ ಕೈಯಲ್ಲೇ ಇತ್ತು. ಹಝ್ರ಼ತ್ ಪೈಗಂಬರ್(ಸ) ಅವರನ್ನು ನೋಡಿ ಹೇಳಿದರು: ಉಮರ್ ಇದೇನು? ನಿನ್ನ ಈ ವಿರೋಧ ಎಲ್ಲಿಯ ತನಕ ಇರುವುದು? ಇದನ್ನು ಕೇಳಿ ಅವರು ಅತ್ತುಬಿಟ್ಟರು ಮತ್ತು ಹೀಗೆ ಹೇಳಿದರು: ನಾನು ಹೊರಟಿದ್ದು ನಿಮ್ಮನ್ನು ವಧಿಸಲಿಕ್ಕಾಗಿತ್ತು. ಆದರೆ ಈಗ ನಾನು ಸ್ವತಃ ಬೇಟೆಯಾಗಿದ್ದೇನೆ.

ಇದು ಹಿಂದೆ ಪ್ರಸ್ತಾಪಿಸಲಾಗಿದ್ದ ದೀರ್ಘವಾದ ಘಟನೆಯ ಸಂಕ್ಷೇಪವಾಗಿದೆ. ಹಝ್ರ಼ತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇದಾಗಿತ್ತು ಸಹಾಬರ ಮುಂಚಿನ ಸ್ಥಿತಿ. ಈ ಸ್ಥಿತಿಯಿಂದ ಅವರು ಅಭಿವೃದ್ಧಿಗೊಂಡು ಮೇಲೆ ಬಂದರು. ಮುಂಚೆ ಮದ್ಯಪಾನ ಮಾಡುತ್ತಿದ್ದ, ಪರಸ್ಪರ ಜಗಳಮಾಡುತ್ತಿದ್ದ ಸಹಾಬರು ಇವರೇ ಆಗಿದ್ದರು. ಅನೇಕ ವಿಧಗಳ ದೌರ್ಬಲ್ಯಗಳು ಅವರಲ್ಲಿದ್ದುವು. ಆದರೆ ಅವರು ಹಝ್ರ಼ತ್ ಪೈಗಂಬರರನ್ನು(ಸ) ನಂಬಿದ ನಂತರ ಧರ್ಮಕ್ಕಾಗಿ ಧೈರ್ಯ ಮತ್ತು ಪ್ರಯತ್ನದಿಂದ ಕೆಲಸ ಮಾಡಿದಾಗ ಅವರು ಸ್ವತಃ ಉನ್ನತ ಪದವಿಗಳನ್ನು ತಲುಪಿದರು ಎಂದು ಮಾತ್ರವಲ್ಲ, ಇತರರನ್ನು ಉನ್ನತ ಪದವಿಗಳಿಗೆ ತಲುಪಿಸಲು ಕಾರಣಕರ್ತರಾದರು. ಅವರು ಸಹಾಬಿಯರಾಗಿ ಹುಟ್ಟಿರಲಿಲ್ಲ. ಬದಲಾಗಿ ಇತರರಂತೆ ಅವರೂ ಇದ್ದರು. ಆದರೆ ಅವರು ಸತ್ಕರ್ಮಗಳನ್ನು ಮಾಡಿದಾಗ ಮತ್ತು ಧೈರ್ಯ ತೋರಿಸಿದಾಗ ಸಹಾಬರಾದರು. ಇಂದು ಸಹ ನಾವು ಹಾಗೆಯೇ ಮಾಡಿದರೆ ಸಹಾಬಿ ಆಗಬಹುದಾಗಿದೆ.(ಔರತೋಂ ಕಾ ದೀನ್ ಸೆ ವಾಖಿಫ್ ಹೋನ ಝ಼ರೂರಿ ಹೈ, ಅನ್ವಾರುಲ್ ಉಲೂಮ್, ಸಂಪುಟ-4, ಪುಟ-38-39)

ಹಝ್ರ಼ತ್ ಉಮರರ(ಸ) ದೇವಭಯದ ಸ್ಥಿತಿ ಏನಾಗಿತ್ತು ಎಂಬುದರ ಬಗ್ಗೆ ಒಂದು ವರದಿಯಿದೆ. ಹಝ್ರ಼ತ್ ಉಮರ್(ರ) ಹೇಳುತ್ತಾರೆ: ಯೂಫ್ರಟೀಸ್ ನದಿಯ ದಡದಲ್ಲಿ ಒಂದು ಆಡು ಕಾಣೆಯಾಗಿ ಸತ್ತರೆ ಕೂಡ, ಅಲ್ಲಾಹನು ಖಿಯಾಮತ್ ದಿನದಂದು ಅದರ ಬಗ್ಗೆ ಪ್ರಶ್ನಿಸುವನು ಎಂಬ ಭಯ ನನಗಿದೆ. ಮತ್ತೊಂದು ವರದಿಯಲ್ಲಿ ಹೀಗೆ ವರದಿಯಾಗಿದೆ. ಹಝ್ರ಼ತ್ ಉಮರ್(ರ) ಹೇಳುತ್ತಾರೆ: ಯೂಫ್ರಟೀಸ್ ನದಿಯ ದಡದಲ್ಲಿ ಒಂದು ಒಂಟೆ ಕಾಣೆಯಾಗಿ ಸತ್ತರೆ, ಅಲ್ಲಾಹನು ಖಿಯಾಮತ್ ದಿನದಂದು ಅದರ ಬಗ್ಗೆ ಪ್ರಶ್ನಿಸುವನು ಎಂಬ ಭಯ ನನಗಿದೆ. (ಅತ್ತಬಖಾತುಲ್ ಕುಬ್ರ, ಸಂಪುಟ-3, ಪುಟ-232. ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರ಼ತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಒಮ್ಮೆ ನಾನು ಹಝ್ರ಼ತ್ ಹಝ್ರ಼ತ್ ಉಮರ್ ಬಿನ್ ಖತ್ತಾಬ್‌ರ(ರ) ಜೊತೆಗೆ ಹೊರಗೆ ಹೋದೆನು. ಕೊನೆಗೆ ಅವರು ಒಂದು ತೋಟದಲ್ಲಿ ಪ್ರವೇಶಿಸಿದ್ದರು. ನನ್ನ ಮತ್ತು ಅವರ ನಡುವೆ ಒಂದು ಗೋಡೆ ಮರೆಯಾಗಿತ್ತು. ಅವರು ತೋಟದೊಳಗೆ ಇದ್ದರು. ಅವರು ಆಗ ಹೀಗೆ ಹೇಳುವುದಾಗಿ ನಾನು ಕೇಳಿದೆನು: ವಾಹ್ ವಾಹ್, ಎಲೈ ಖತ್ತಾಬ್‌ರ ಮಗನಾದ ಉಮರ್, ನೀನು ಸತ್ಯವಿಶ್ವಾಸಿಗಳ ನೇತಾರನಾಗಿರುವೆ. ಅಲ್ಲಾಹನಾಣೆ, ನೀನು ಖಂಡಿತವಾಗಿಯೂ ಅಲ್ಲಾಹನಿಗೆ ಹೆದರು. ಇಲ್ಲದಿದ್ದರೆ ಅವನು ನಿನ್ನನ್ನು ಶಿಕ್ಷಿಸುವನು. (ಮೌತಾ ಇಮಾಮ್ ಮಾಲಿಕ್, ಕಿತಾಬುಲ್ ಕಲಾಮ್, ಪುಟ-601, ವರದಿ ಸಂಖ್ಯೆ-1867, ದಾರುಲ್ ಫಿಕರ್ ಬೈರೂತ್)

ಹಝ್ರ಼ತ್ ಉಮರರ ಉಂಗುರದಲ್ಲಿ **"ಕಫಾ ಬಿಲ್ ಮೌತಿ ವಾಇಝ಼ನ್ ಯಾ ಉಮರ್"** ಎಂದು ಕೆತ್ತಲಾಗಿತ್ತು. ಅರ್ಥ: ಎಲೈ ಉಮರ್, ಉಪದೇಶಕನೆಂಬ ನೆಲೆಯಲ್ಲಿ ಮೃತ್ಯು ಸಾಕು. (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್‌ಹಾಬ್, ಸಂಪುಟ-3, ಪುಟ-236, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) ಎಂದರೆ, ಮನುಷ್ಯನು ಮರಣವನ್ನು ನೆನಪಿಟ್ಟರೆ, ಅದೇ ಉಪದೇಶ ಎಂಬ ರೀತಿಯಲ್ಲಿ ಸಾಕು. ತನ್ನ ಸ್ಥಿತಿಯನ್ನು ಸರಿಪಡಿಸಲು ಇದೇ ಒಂದು ಸಂಗತಿ ಸಾಕಾಗುವುದು.

ಅಬ್ದುಲ್ಲಾಹ್ ಬಿನ್ ಶಹ್‌ರ್‌ಝ಼ಾದ್ ಹೇಳುತ್ತಾರೆ: ಹಝ್ರ಼ತ್ ಉಮರ್(ರ) ಬಿಕ್ಕಿಬಿಕ್ಕಿ ಅಳುವುದು ನನಗೆ ಕೇಳಿಸಿತು. ನಾನು ಕೊನೆಯ ಪಂಕ್ತಿಯಲ್ಲಿದ್ದೆ. ಅವರು ಹೀಗೆ ತಿಲಾವತ್ ಮಾಡುತ್ತಿದ್ದರು: **ಇನ್ನಮಾ ಅಶ್‌ಕೂ ಬಸ್ಸೀ ವ ಹುಝ್ನ಼ೀ ಇಲಲ್ಲಾಹ್**. ಎಂದರೆ, ನಾನು ನನ್ನ ದುಃಖ ಮತ್ತು ನೋವನ್ನು ಅಲ್ಲಾಹನು ಮುಂದೆ ಮಾತ್ರ ಇರಿಸುತ್ತೇನೆ. (ಸಹೀಹ್ ಅಲ್‌ಬುಖಾರಿ, ಕಿತಾಬುಲ್ ಅಧ಼ಾನ್)

ಈ ವರದಿಯನ್ನು ಒಂದು ಖುತ್ಬದಲ್ಲಿ ಹಝ್ರ಼ತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಕೂಡ ಹೇಳಿದ್ದರು. ಅದರೆ ವಿವರಣೆಯನ್ನು ತನ್ನದಾದ ರೀತಿಯಲ್ಲಿ ಅವರು ಹೀಗೆ ವಿವರಿಸಿದ್ದರು: ಹಝ್ರ಼ತ್ ಅಬ್ದುಲ್ಲಾಹ್ ಬಿನ್ ಶಹ್‌ರ್‌ಝ಼ಾದ್ ಹೇಳುತ್ತಾರೆ: ಹಝ್ರ಼ತ್ ಉಮರ್(ರ) ಒಮ್ಮೆ ನಮಾಝಿ಼ನ ಇಮಾಮತ್ ವಹಿಸುತ್ತಿದ್ದರು. ನಾನು ಕೊನೆಯ ಪಂಕ್ತಿಯಲ್ಲಿದ್ದೆ. ಆದರೂ ನನಗೆ ಹಝ್ರ಼ತ್

ಉಮರ್(ರ) ಬಿಕ್ಕುತ್ತಾ ಅಳುವುದನ್ನು ಕೇಳಬಹುದಾಗಿತ್ತು. ಅವರು ಹೀಗೆ ತಿಲಾವತ್ ಮಾಡುತ್ತಿದ್ದರು: **ಇನ್ನಮಾ ಅಶ್‌ಕೂ ವ ಹುಝ್ನ್‌ೀ ಇಲಲ್ಲಾಹ್**. ಎಂದರೆ, ನಾನಂತು ನನ್ನ ಅಲ್ಲಾಹನ ಮುಂಚೆ ಮಾತ್ರ ನನ್ನ ಎಲ್ಲ ದುಃಖವನ್ನು ಇರಿಸಿ ಅಳುವೆನು. ಬೇರೆ ಯಾರ ಮುಂದೆ ಅದನ್ನು ಇರಿಸುವ ಆವಶ್ಯಕತೆಯಿಲ್ಲ. ಒಟ್ಟಿನಲ್ಲಿ ದೇವಸ್ಮರಣೆಯಲ್ಲಿ ಮುಳುಗಿರುವವರಿಗೆ ತಮ್ಮ ದುಃಖ ಮತ್ತು ವೇದನೆಯನ್ನು ಇರಿಸಿ ಅಳಲು ಮತ್ತು ಹೃದಯದ ಭಾರವನ್ನು ಹಗುರಗೊಳಿಸಲು ಅಲ್ಲಾಹನಲ್ಲದೆ ಬೇರೆ ಯಾರ ದರ್ಬಾರು ಸಿಗುವುದೇ ಇಲ್ಲ. ಹಿಂದಿನ ಪಂಕ್ತಿಯಲ್ಲಿದ್ದರೂ ನನಗೆ ಹಝ್ರತ್ ಉಮರ್(ರ) ಬಿಕ್ಕಿ ಬಿಕ್ಕಿ ಅಳುವ ಶಬ್ದ ಕೇಳಿಬರುತ್ತಿತ್ತು ಎಂದು ವರದಿಗಾರ ಹೇಳುತ್ತಾನೆ. (ಖುತ್‌ಬಾತೆ ತಾಹಿರ್, ಸಂಪುಟ–13, ಪುಟ–248–249)

ಮುಂಚೆ ಸೇವೆ ಮಾಡುತ್ತಿದ್ದ ಮತ್ತು ತ್ಯಾಗಮಾಡುತ್ತಿದ್ದ ಹಿರಿಯರ ಬಗ್ಗೆ ಹಝ್ರತ್ ಉಮರ್(ರ) ಹೇಗೆ ಕಾಳಜಿ ವಹಿಸುತ್ತಿದ್ದರು ಎಂಬುದರ ಬಗ್ಗೆ ಸಅ್‌ಲಬ ಬಿನ್ ಅಬೂ ಮಾಲಿಕ್ ಹೇಳುತ್ತಾರೆ: ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಮದೀನವಾಸಿಗಳಾದ ಮಹಿಳೆಯರಲ್ಲಿ ಕೆಲವರಿಗೆ ಹೊದಿಕೆಗಳನ್ನು ವಿತರಣೆ ಮಾಡಿದರು. ಉತ್ತಮ ಗುಣಮಟ್ಟದ ಹೊದಿಕೆಗಳು ಬಂದಿದ್ದುವು. ಅವುಗಳಲ್ಲಿ ಒಂದು ಹೊದಿಕೆ ಬಾಕಿಯಾಯಿತು. ಹಝ್ರತ್ ಉಮರ್‌ರ(ರ) ಸಮೀಪವಿದ್ದ ಜನರಲ್ಲಿ ಒಬ್ಬರು ಹೇಳಿದರು: ಹೇ ಅಮೀರಲ್ ಮೂಮಿನೀನ್, ನಿಮ್ಮ ಬಳಿಯಲ್ಲಿರುವ ಹಝ್ರತ್ ಪೈಗಂಬರರ(ಸ) ಪುತ್ರಿಗೆ ಇದನ್ನು ಕೊಡಿರಿ. ಅವರು ಹಝ್ರತ್ ಅಲಿಯರ(ರ) ಮಗಳಾದ ಉಮ್ಮೇ ಕುಲ್ಸುಮ್ ಬಗ್ಗೆ ಹೇಳುತ್ತಿದ್ದರು. ಹಝ್ರತ್ ಉಮರ್(ರ) ಹೇಳಿದರು: ಬೇಡ, ಉಮ್ಮೇ ಸಲೀದ್ ಅದಕ್ಕೆ ಹೆಚ್ಚು ಅರ್ಹರು. ಉಮ್ಮೆ ಸಲೀದ್ ಎಂಬವರು ಹಝ್ರತ್ ಪೈಗಂಬರರನ್ನು(ಸ) ಬೈಅತ್ ಮಾಡಿದ ಮಹಿಳೆಯಾಗಿದ್ದರು. ಉಹದ್ ಯುದ್ಧದ ದಿನಗಳಲ್ಲಿ ಅವರು ನಮಗೆ ಚರ್ಮದ ಚೀಲಗಳಲ್ಲಿ ನೀರನ್ನು ಎತ್ತಿ ತರುತ್ತಿದ್ದರು. (ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ, ಹದೀಸ್–4071)

ತ್ಯಾಗ ಮಾಡಿದವರ ಸಂಬಂಧಿಕರಿಗೂ ಕೊಡುಗೆಗಳನ್ನು ಕೊಡುವ ಬಗ್ಗೆ ವರದಿಯಿದೆ. ಝೈದ್ ಬಿನ್ ಅಸ್ಲಂ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ನಾನು ಹಝ್ರತ್ ಉಮರ್ ಬಿನ್ ಖತ್ತಾಬ್‌ರ(ರ) ಜೊತೆಗೆ ಮಾರುಕಟ್ಟೆಗೆ ಹೋದೆನು. ಒಬ್ಬಳು ಯುವತಿ ಹಝ್ರತ್ ಉಮರ್‌ರನ್ನು(ರ) ಹಿಂಬಾಲಿಸಿ ಭೇಟಿಯಾದಳು ಮತ್ತು ಹೀಗೆ ಹೇಳಿದಳು: ನನ್ನ ಪತಿ ಮೃತಪಟ್ಟಿರುವರು. ಸಣ್ಣ ಸಣ್ಣ ಮಕ್ಕಳನ್ನು ಅವರು ಅಗಲಿ ಹೋಗಿರುವರು. ಅಲ್ಲಾಹನಾಣೆ, ಆಡಿನ ಕಾಲು ಕೂಡ ಮಕ್ಕಳಿಗೆ ಸಿಗುತ್ತಿಲ್ಲ. ಅವರಿಗೆ ಯಾವುದೇ ಕೃಷಿಭೂಮಿಯೂ ಇಲ್ಲ, ಹಾಲು ಕೊಡುವ ಯಾವುದೇ ಜಾನುವಾರುಗಳೂ ಇಲ್ಲ. ಬರಗಾಲದಿಂದ ನನ್ನ ಮಕ್ಕಳು ಸಾವನ್ನಪ್ಪುವರೋ ಎಂಬ ಭಯ ನನಗಿದೆ. ನಾನು ಖ಼ಫ಼ಾಫ಼್ ಬಿನ್ ಈಮಾ ಗ಼ಫ಼ಾರಿಯ ಮಗಳಾಗಿರುವೆಳು. ನನ್ನ ತಂದೆ ಹುದೈಬಿಯದಲ್ಲಿ ಹಝ್ರತ್ ಪೈಗಂಬರರ(ಸ) ಜೊತೆಗೆ ಇದ್ದರು. ಇದನ್ನೆಲ್ಲ ಕೇಳಿ ಹಝ್ರತ್ ಉಮರ್(ರ) ಅಲ್ಲೇ ನಿಂತರು, ಮುಂದೆ ಹೋಗಲಿಲ್ಲ ಮತ್ತು ಹೀಗೆ ಹೇಳಿದರು: ವಾಹ್ ವಾಹ್, ಇದು ಬಹಳ ಸಮೀಪದ ಸಂಬಂಧವಾಗಿದೆ. ಅನಂತರ ಹಝ್ರತ್ ಉಮರ್(ರ) ಮರಳಿ ಹೋಗಿ ಮನೆಯಲ್ಲಿ ಕಟ್ಟಿಡಲಾದ ಒಂದು ಗಟ್ಟಿಮುಟ್ಟಾದ ಒಂಟೆಯ ಮೇಲೆ ಎರಡು ಗೋಣಿಗಳಷ್ಟು ಧಾನ್ಯವನ್ನು ಮೇಲೆ ಇಟ್ಟರು. ಎರಡು ಗೋಣಿಗಳ ನಡುವೆ ಇಡೀ ವರ್ಷದ ಖರ್ಚಿಗಾಗಿ ಬೇಕಾಗುವಷ್ಟು ಹಣ ಮತ್ತು ಬಟ್ಟೆಗಳನ್ನು ಇರಿಸಿದರು. ಅನಂತರ ಆ ಒಂಟೆಯ ಲಗಾಮನ್ನು ಆ ಯುವತಿಯ ಕೈಗೆ ಕೊಟ್ಟು ಹೀಗೆ ಹೇಳಿದರು: ಇದನ್ನು ತೆಗೆದುಕೊಂಡು ಹೋಗು, ಇದು ಮುಗಿಯುವಷ್ಟರಲ್ಲಿ ಅಲ್ಲಾಹನು ನಿನಗೆ ಇನ್ನೂ ಕೊಡುವೆನು. ಒಬ್ಬ ವ್ಯಕ್ತಿ ಹೇಳಿದರು: ಹೇ ಅಮೀರಲ್ ಮೂಮಿನೀನ್, ನೀವು ಅವಳಿಗೆ ಬಹಳಷ್ಟು ಕೊಟ್ಟಿದ್ದೀರಿ. ಅವರ ಈ ಮಾತನ್ನು ಇಷ್ಟಪಡದೇ ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನಾಣೆ, ನಾನಂತು ಅವಳ ತಂದೆ ಮತ್ತು ಸಹೋದರನನ್ನು ಈಗಲೂ ನೋಡುತ್ತಿದ್ದೇನೆ. ಎಂದರೆ ನನ್ನ ಕಣ್ಣಮುಂದೆ ಆ ದೃಶ್ಯ ಬರುತ್ತಿದೆ. ಅವರಿಬ್ಬರೂ ಒಂದು ದೀರ್ಘಕಾಲದ ವರೆಗೆ ಒಂದು ಕೋಟೆಗೆ ಮುತ್ತಿಗೆ ಹಾಕಿದ ನಂತರ ಅದರ ಮೇಲೆ ವಿಜಯ ಸಾಧಿಸಿದ್ದರು. ಅವರಿಬ್ಬರ ಜಯಿಸಿದ ಕೋಟೆಯ ಯುದ್ಧಸಂಪತ್ತು ಬೆಳಗ್ಗೆ ಆಗುವಷ್ಟರಲ್ಲಿ ಮುಸ್ಲಿಮರಿಗೆ ಲಭಿಸಿತ್ತು. ಹೀಗೆ ಅವರ ಪಾಲನ್ನು ಮುಸ್ಲಿಮರಿಗೆ ವಿತರಿಸಿದಂತಾಯಿತು. (ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ, ಬಾಬ್ ಗಝ್ವತುಲ್ ಹುದೈಬೀಯ, ಹದೀಸ್–4160,4161) ಆದ್ದರಿಂದ ಅವರ ಮಗಳಾದ ಈ ಯುವತಿಗೆ ಏನಾದರೂ ಕೊಡಲೇ ಬೇಕಾಗಿತ್ತು. ಅವಳು ಅದಕ್ಕೆ ಅರ್ಹಳು.

ವೃದ್ಧ, ದುರ್ಬಲ ಮತ್ತು ನಿರ್ಗತಿಕ ಮಹಿಳೆಯರ ಮತ್ತು ಜನರ ಬಗ್ಗೆ ಹಝ್ರತ್ ಉಮರ್(ರ) ಹೇಗೆ ಕಾಳಜಿವಹಿಸುತ್ತಿದ್ದರು ಎಂಬುದರ ಬಗ್ಗೆ ವರದಿಯಿದೆ – ಹಝ್ರತ್ ತಲ್‌ಹ ಹೇಳುತ್ತಾರೆ: ಒಮ್ಮೆ ರಾತ್ರಿಯ ಇರುಳಲ್ಲಿ ಹಝ್ರತ್ ಉಮರ್(ರ) ಮನೆಯಿಂದ ಹೊರಟದ್ದನ್ನು ನಾನು ಕಂಡೆನು. ಹಝ್ರತ್ ಉಮರ್(ರ) ಒಂದರ ನಂತರ ಇನ್ನೊಂದರಂತೆ ಮನೆಗಳಿಗೆ ಪ್ರವೇಶಿಸುತ್ತಿದ್ದರು. ಹಝ್ರತ್ ಉಮರ್(ರ) ಪ್ರವೇಶಿಸಿದ್ದ ಮನೆಗಳಲ್ಲಿ ಒಂದು ಮನೆಗೆ ನಾನು ಬೆಳಿಗ್ಗೆ ಆದಾಗ ಹೋದೆನು. ಅಲ್ಲಿ ಮುದುಕಿಯಾದ ಕಣ್ಣಿಗೆ ದೃಷ್ಟಿಯಿಲ್ಲದ ಒಬ್ಬಳು ಕುಳಿತಿದ್ದಳು. ನಾನು ಮುದುಕಿಯೊಡನೆ ಕೇಳಿದೆ: ನಿಮ್ಮ ಬಳಿಗೆ ರಾತ್ರಿ ಸಮಯದಲ್ಲಿ ಬರುವ ವ್ಯಕ್ತಿ ಏನು ಮಾಡುತ್ತಾರೆ? ಮುದುಕಿ ಹೇಳಿದಳು: ಅವರು ಬಹಳ ದೀರ್ಘಕಾಲದಿಂದ ನನ್ನ ಸೇವೆ ಮಾಡುತ್ತಿದ್ದಾರೆ. ನನ್ನ ಕೆಲಸಗಳನ್ನು ಮಾಡುತ್ತಾರೆ, ನನ್ನನ್ನು ಶುಚಿಗೊಳಿಸುತ್ತಾರೆ, ಇದನ್ನು ಕೇಳಿ ಹಝ್ರತ್ ತಲ್‌ಹ ನಾಚಿಕೆಗೊಂಡು ತನಗೆ ತಾನೆ ಹೀಗೆ ಹೇಳಿಕೊಂಡರು: ಎಲೈ ತಲ್‌ಹಾ, ನಿನಗೆ ನಾಶವಾಗಲಿ, ಇದೆಷ್ಟು ದುಃಖಕರವಾದ ಸಂಗತಿಯಾಗಿದೆ. ನೀನು ಉಮರರ ತಪ್ಪುಗಳನ್ನು ಹುಡುಕಲು ಹೋಗುತ್ತಿದ್ದೀಯ. ಇಲ್ಲಾದರೋ ವಿಷಯವೇ ಬೇರೆ. (ಸೀರತ್ ಉಮರ್ ಬಿನ್ ಖತ್ತಾಬ್, ಪುಟ–58, ಅಲ್‌ಮುತ್‌ಬತುಲ್ ಮಿಸ್ರೀಯ ಅಲ್‌ಅಝ್‌ಹರ್) ಪ್ರಜೆಗಳ ಸೇವೆ ಮಾಡುವ ಉನ್ನತವಾದ ಮಟ್ಟವನ್ನು ಹಝ್ರತ್ ಉಮರ್(ರ) ಸ್ಥಾಪಿಸಿದ್ದರು.

ಹಝ್ರತ್ ಉಮರ್(ರ) ಹೇಗೆ ಅಲ್ಲಾಹನಿಗೆ ಹೆದರಿಕೊಂಡು ಜನರ, ನಿರ್ಗತಿಕರ, ಮಹಿಳೆಯರ, ಮಕ್ಕಳ ಆವಶ್ಯಕತೆಗಳನ್ನು ಪೂರೈಸುತ್ತಿದ್ದರು ಹಾಗು ಅದರ ಬಗ್ಗೆ ಎಷ್ಟು ಚಿಂತಿತರಾಗುತ್ತಿದ್ದರು ಎಂಬುದರ ಅನೇಕ ವರದಿಗಳು ಇವೆ. ಅವರ ಪ್ರಜೆಗಳಲ್ಲಿ ಯಾರದಾದರೂ ಆವಶ್ಯಕತೆ ಈಡೇರದಿದ್ದರೆ ಬಹಳ ಚಿಂತಿತರಾಗುತ್ತಿದ್ದರು. ಕೆಲವು ಉದಾಹರಣೆಗಳನ್ನು ಕಳೆದ ಖುತ್ಬಗಳಲ್ಲಿ ಹೇಳಿದ್ದೆ. ಉದಾಹರಣೆಗೆ, ರಾತ್ರಿ ಸಮಯದಲ್ಲಿ ಒಬ್ಬಳು ಮಹಿಳೆಯ ಮಗುವಿನ ಅಳು ಕೇಳಿಬಂದಾಗ, ಅಳುವುದರ ಕಾರಣವೇನೆಂದು ಪ್ರಶ್ನಿಸಿದಾಗ ಅವಳು ಹೀಗೆ ಹೇಳಿದಳು: ಏಕೆಂದರೆ, ಉಮರ್ ತಾಯಿಹಾಲು ಕುಡಿಯುವ ಮಗುವಿಗೆ ರೇಶನ್ ನಿಶ್ಚಯಿಸಿಲ್ಲ. ಆದ್ದರಿಂದ ಮಗುವಿಗೆ ಆಹಾರ ತಿನ್ನುವ ಅಭ್ಯಾಸ ಉಂಟಾಗಲಿಕ್ಕಾಗಿ ನಾನು ಹಾಲನ್ನು ಕೊಡುತ್ತಿಲ್ಲ. ಆದ ಕಾರಣ ಮಗು ಹಸಿವೆಯಿಂದ ಅಳುತ್ತಿದೆ. ಇದನ್ನು ಆಲಿಸಿ ಹಝ್ರತ್ ಉಮರ್(ರ) ಕಳವಳಗೊಂಡರು ಮತ್ತು ಬೇಗನೇ ಆಹಾರ ಪಾನೀಯದ ವ್ಯವಸ್ಥೆಯನ್ನು ಮಾಡಿದರು ಹಾಗೂ ಹೀಗೆ ಘೋಷಿಸಿದರು: ಹುಟ್ಟಿದ ಪ್ರತಿಯೊಂದು ಮಗುವಿಗೂ ರೇಶನ್ ಲಭಿಸುವುದು. (ಅಲ್‌ಬಿದಾಂಯ ವನ್ನಹಾಯ ಲಿಇಬ್ನೆ ಕಸೀರ್, ಭಾಗ–10, ಪುಟ–185–186, ದಾರುಲ್ ಹಿಜರ್ 1997)

ಅದೇ ರೀತಿಯಲ್ಲಿ ಒಂದು ಸಂದರ್ಭದಲ್ಲಿ ಯಾತ್ರಿಕಳಾದ ಒಬ್ಬಳು ಸ್ತ್ರೀಗೆ ರಾತ್ರಿ ತಿನ್ನಲಿಕ್ಕೆ ಏನೂ ಇರಲಿಲ್ಲ. ರಾತ್ರಿ ಅವಳಿಗೆ ಡೇರೆ ಹಾಕಿ ಅಲ್ಲಿ ತಂಗಬೇಕಾಯಿತು. ಅವಳ ಮಕ್ಕಳು ಹಸಿವೆಯಿಂದ ಅಳುತ್ತಿದ್ದರು. ರಾತ್ರಿ ಸಮಯದಲ್ಲೇ ಹಝ್ರತ್ ಉಮರ್‌ರಿಗೆ(ರ) ಇದರ ಬಗ್ಗೆ ಗೊತ್ತಾದಾಗ ಅವರು ಬೇಗನೇ ಸ್ಟೋರ್‌ನಿಂದ ಆಹಾರ ಪಾನೀಯದ ಸಾಮಾನುಗಳನ್ನು ಎತ್ತಿ ಅವಳಿಗೆ ತಲುಪಿಸಿದರು. ಅವರು ಎಷ್ಟು ಕಳವಳಗೊಂಡಿದ್ದರು ಎಂದರೆ, ಆಹಾರ ತಯಾರಿಸಿ ಮಕ್ಕಳಿಗೆ ಕೊಟ್ಟ ನಂತರ ಮಕ್ಕಳು ಸಂತೋಷಗೊಳ್ಳುವ ತನಕ ಅವರು ಸಮಾಧಾನಗೊಂಡಿರಲಿಲ್ಲ. ಮಕ್ಕಳು ಸಂತೋಷದಿಂದ ನಗುವುದನ್ನು ಕಂಡ ನಂತರ ಅವರು ಅಲ್ಲಿಂದ ಹೊರಟು ಹೋದರು. (ತಾರೀಖ್ ಅತ್ತಿಬರಿ ಲಿಇಬ್ನೆ ಜರೀರ್, ಭಾಗ–5, ಪುಟ–62, ದಾರುಲ್ ಫಿಕರ್ ಬೈರೂತ್ 1998)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರ್‌ರನ್ನು(ರ) ನೋಡಿರಿ, ಅವರ ಪ್ರತಾಪ ಮತ್ತು ವೈಭವದಿಂದ ಒಂದೆಡೆ ಲೋಕದ ದೊಡ್ಡ ದೊಡ್ಡ ಅರಸರು ನಡುಗುತ್ತಿದ್ದರು. ಇರಾನ್ ಮತ್ತು ರೋಮಿನ ಆಡಳಿತಗಳು ಹೆದರಿ ಅಲುಗಾಡುತ್ತಿದ್ದುವು. ಆದರೆ ಮತ್ತೊಂದೆಡೆ ಒಬ್ಬ ಗ್ರಾಮೀಣ ಮಹಿಳೆಯನ್ನು ಹಸಿವಿನಿಂದ ಕಂಡು ಹಝ್ರತ್ ಉಮರ್‌ರಂತಹ(ರ) ಮಹೋನ್ನತವಾದ ಪದವಿಯನ್ನು ಹೊಂದಿರುವ ವ್ಯಕ್ತಿ ಕಳವಳಗೊಂಡರು ಮತ್ತು ತನ್ನ ಬೆನ್ನ ಮೇಲೆ ಗೋಧಿಹಿಟ್ಟಿನ ಗೋಣಿಯನ್ನು ಇಟ್ಟುಕೊಂಡು ತುಪ್ಪದ ಡಬ್ಬವನ್ನು ಕೈಯಲ್ಲಿ ಎತ್ತಿಕೊಂಡು ಅವರ ಬಳಿಗೆ ತಲುಪಿದರು. ತನ್ನ ಕೈಗಳಿಂದ ಊಟ ತಯಾರಿಸಿ ಆ ಮಕ್ಕಳಿಗೆ ತಿನ್ನಿಸಿದ ನಂತರ ಆ ಮಕ್ಕಳು ಸಮಾಧಾನದಿಂದ ನಿದ್ದೆಹೋಗುವ ವರೆಗೆ ಹಝ್ರತ್ ಉಮರ್(ರ) ಅಲ್ಲಿಂದ ಮರಳಲಿಲ್ಲ.
(ಸೇರೆ ರೂಹಾನಿ (6), ಅನ್ವಾರುಲ್ ಉಲೂಮ್, ಸಂಪುಟ–22, ಪುಟ–596)

ಇನ್ನೊಂದು ಘಟನೆ ಹಝ್ರತ್ ಇಬ್ನು ಉಮರ್(ರ) ವರದಿ ಮಾಡುತ್ತಾರೆ: ಸಿರಿಯದಿಂದ ಮದೀನಕ್ಕೆ ಮರಳಿ ಬರುವಾಗ ಹಝ್ರತ್ ಉಮರ್(ರ) ಜನರ ಸಂಘದಿಂದ ಬೇರ್ಪಟ್ಟು ಜನರ ಸ್ಥಿತಿಗತಿಗಳನ್ನು ಅರಿಯಲಿಕ್ಕಾಗಿ ಹೊರಟರು. ಹೀಗೆ ಅವರು ಡೇರೆಯಲ್ಲಿದ್ದ ಒಬ್ಬ ಮುದುಕಿಯ ಬಳಿಯಿಂದ ಸಾಗಿದರು. ಅವರು ಮುದುಕಿಯೊಂದಿಗೆ ಕೇಳಿದಾಗ ಅವಳು ಹೇಳಿದಳು: ಎಲೈ ವ್ಯಕ್ತಿ ಉಮರ್ ಏನು ಮಾಡಿರುವರು? ಹಝ್ರತ್ ಉಮರ್(ರ) ಹೇಳಿದರು: ಅವರು ಇಲ್ಲೇ ಇರುವರು. ಅವರು ಸಿರಿಯದಿಂದ ಮರಳಿ ಬಂದಿರುವರು. ಆ ಮಹಿಳೆ ಹೇಳಿದಳು: ಅಲ್ಲಾಹನು ನನ್ನ ವತಿಯಿಂದ ಉಮರ್‌ರಿಗೆ ಪ್ರತಿಫಲ ಕೊಡದಿರಲಿ. ನೀನೇಕೆ ಹೀಗೆ ಹೇಳುತ್ತಿದ್ದೀಯ ಎಂದು ಹಝ್ರತ್ ಉಮರ್(ರ) ಕೇಳಿದರು. ಆ ಮಹಿಳೆ ಹೇಳಿದಳು: ಅವರು ಖ಼ಲೀಫರಾದ ಅಂದಿನಿಂದ ನನಗೆ ಅವರ ಕಡೆಯಿಂದ ಯಾವುದೇ ದಾನ, ಯಾವುದೇ ದೀನಾರ್ ಅಥವಾ ದಿರ್ಹಂ ಸಿಕ್ಕಿಲ್ಲ. ಹಝ್ರತ್ ಉಮರ್(ರ) ಕೇಳಿದರು: ಬಹಳ ದೂರದ ಪ್ರದೇಶದಲ್ಲಿ, ಕಾಡಿನ ಸಮೀಪದಲ್ಲಿ ಕುಳಿತಿರುವ ನಿನ್ನ ಸ್ಥಿತಿಯ ಬಗ್ಗೆ ಉಮರ್‌ರಿಗೆ ಹೇಗೆ ಗೊತ್ತಾಗುವುದು? ಆ ಮಹಿಳೆ ಹೇಳಿದರು: **ಸುಬ್‌ಹಾನಲ್ಲಾಹ್,** ಒಬ್ಬ ವ್ಯಕ್ತಿ ಜನರ ಅಧಿಕಾರಿಯಾಗಿಕೊಂಡು ಅವನ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಏನಾಗುತ್ತಿವೆ ಎಂದು ಅವನಗೆ ಗೊತ್ತಿಲ್ಲದೇ ಇರುವುದನ್ನು ನನಗೆ ಊಹಿಸಲು ಕೂಡ ಸಾಧ್ಯವಲ್ಲ. ಇದನ್ನು ಕೇಳಿ ಹಝ್ರತ್ ಉಮರ್(ರ) ಅಳುತ್ತಾ ಹೀಗೆ ಹೇಳಿದರು: ಅಕಟಕಟಾ (ಅಯ್ಯೋಯ್ಯೋ) ಎಲೈ ಉಮರ್, ನಿನಗಿಂತ ಹೆಚ್ಚು ದೀನನ್ನು ಅರಿಯುವವರು ಎಷ್ಟೆಲ್ಲ ಜನರಿದ್ದಾರೆ. ಅನಂತರ ಆ ಮಹಿಳೆಯೊಡನೆ ಹೀಗೆ ಹೇಳಿದರು: ನೀನು ನಿನಗೆ ಉಂಟಾದ ದೌರ್ಜನ್ಯದ ಬದಲಾಗಿ ಸಿಗಬೇಕಾದ ಹಕ್ಕನ್ನು ಎಷ್ಟು ಬೆಲೆಗೆ ಮಾರಾಟ ಮಾಡುತ್ತೀಯ? ನಾನು ಉಮರ್‌ರನ್ನು ನರಕದಿಂದ ರಕ್ಷಿಸಲು ಬಯಸುತ್ತೇನೆ. ಆ ಮಹಿಳೆ ಹೇಳಿದಳು: ನೀನು ನಮ್ಮೊಂದಿಗೆ ತಮಾಷೆ ಮಾಡಬೇಡ. ಅಲ್ಲಾಹನು ನಿನ್ನ ಮೇಲೆ ಕೃಪೆದೋರಲಿ. ಹಝ್ರತ್ ಉಮರ್(ರ)

ಹೇಳಿದರು: ಇದು ತಮಾಷೆಯಲ್ಲ. ಹಝ್ರತ್ ಉಮರ್(ರ) ಒತ್ತಾಯಪಡಿಸಿಕೊಂಡು ಅವಳಿಗೆ ಉಂಟಾದ ಯಾತನೆಗೆ ಪ್ರಾಯಶ್ಚಿತವಾಗಿ ಸಿಗಬೇಕಾದ ಹಕ್ಕನ್ನು 25 ದೀನಾರ್‌ಗೆ ಖರೀದಿ ಮಾಡಿದರು. ಈ ಮಾತುಕತೆ ನಡೆಯುತ್ತಿರುವಾಗಲೇ ಹಝ್ರತ್ ಅಲಿ(ರ) ಮತ್ತು ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಅಲ್ಲಿಗೆ ಪ್ರವೇಶಿಸಿದರು ಮತ್ತು ಇಬ್ಬರೂ **"ಅಸ್ಸಲಾಮು ಅಲೈಕುಂ ಯಾ ಅಮೀರುಲ್ ಮೂಅ್‌ಮಿನೀನ್"** ಎಂದು ಸಂಬೋಧಿಸಿದರು. ಇದನ್ನು ಕೇಳಿ ಆ ಮಹಿಳೆ ತನ್ನ ಕೈಯನ್ನು ತಲೆಗೆ ಇಟ್ಟರು ಮತ್ತು ಹೀಗೆ ಹೇಳಿದರು: ಅಲ್ಲಾಹನು ಒಳ್ಳೆಯದು ಮಾಡಲಿ. ನಾನು ಅಮೀರುಲ್ ಮೂಮಿನೀನ್‌ರನ್ನು ಅವರ ಮುಂದೆಯೇ ಕೆಟ್ಟದಾಗಿ ಹೇಳಿದೆ. ಆಗ ಅಮೀರುಲ್ ಮೂಮಿನೀನ್ ಆದ ಹಝ್ರತ್ ಉಮರ್(ರ) ಹೇಳಿದರು: ನಿನ್ನ ಮೇಲೆ ಯಾವುದೇ ಅಪರಾಧವಿಲ್ಲ. ಅಲ್ಲಾಹನ ನಿನ್ನ ಮೇಲೆ ಕೃಪೆದೋರಲಿ. ಅನಂತರ ಹಝ್ರತ್ ಉಮರ್(ರ) ಬರೆಯಲಿಕ್ಕಾಗಿ ಚರ್ಮದ ಒಂದು ತುಂಡನ್ನು ಕೇಳಿದರು. ಆದರೆ ಅದು ಸಿಗದಿದ್ದಾಗ ಅವರು ಸ್ವತಃ ಹೊದಿಸಿದ್ದ ಹೊದಿಕೆಯಿಂದ ಒಂದು ತುಂಡನ್ನು ಕತ್ತರಿಸಿ ಹೀಗೆ ಬರೆದರು: **"ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ.** ಇದು ಇಂದು ಉಮರ್ ಒಬ್ಬಳು ಸ್ತ್ರೀಯಿಂದ ಅವಳಿಗೆ ಉಂಟಾದ ಯಾತನೆಯ ಕಾರಣದಿಂದ ಅವಳಿಗೆ ಸಿಗಬೇಕಾದ ಹಕ್ಕನ್ನು 25 ದೀನಾರುಗಳಿಗೆ ಖರೀದಿ ಮಾಡಿದ್ದಾರೆ ಎಂಬುದರ ದಸ್ತಾವೇಜು ಆಗಿದೆ. ಇನ್ನು ಪರಲೋಕದಲ್ಲಿ ಅವಳು ಇದರ ಬಗ್ಗೆ ವಾದಿಸಿದರೆ, ಉಮರ್ ಅದರಿಂದ ಮುಕ್ತರಾಗಿರುವರು. ಅಲಿ ಬಿನ್ ಅಬೀ ತಾಲಿಬ್ ಮತ್ತು ಅಬ್ದುಲ್ಲಾಹ್ ಬಿನ್ ಮಸ್‌ಊದ್ ಅದಕ್ಕೆ ಸಾಕ್ಷಿಗಳಾಗಿರುವರು." ಅನಂತರ ಹಝ್ರತ್ ಉಮರ್(ರ) ಆ ಲಿಖಿತವನ್ನು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರಿಗೆ ಕೊಟ್ಟರು ಮತ್ತು ಹೀಗೆ ಹೇಳಿದರು: ನಾನು ನಿಮಗಿಂತ ಮುಂಚೆ ಮೃತಪಟ್ಟರೆ, ಈ ಲಿಖಿತವನ್ನು ನನ್ನ ಕಫನ್‌ನಲ್ಲಿ ಇರಿಸಿರಿ. (ಇಜ಼ಾಲತುಲ್ ಖಫಾ ಅನ್ ಖಿಲಾಫತಿಲ್ ಖುಲಫಾ, ಅನುವಾದ ಸಂಪುಟ–3, ಪುಟ–276–278, ಮನಾಖಿಬ್ ಫಾರೂಖೆ ಆಝುಮ್, ಖದೀಮಿ ಕುತುಬ್ ಖಾನ ಕರಾಚಿ)

ಮಕ್ಕಳ ವಿವಾಹ ಸಂಬಂಧ ಮಾಡಿಕೊಳ್ಳಲಿಕ್ಕಾಗಿ ಜನರು ಹಿರಿದಾದ ಮಟ್ಟವನ್ನು ಇರಿಸಿರುವುದನ್ನು ನಾವು ಇಂದು ಕೂಡ ನೋಡುತ್ತೇವೆ. ಹಝ್ರತ್ ಉಮರ್(ರ) ನಿಶ್ಚಯಿಸಿದ ಮಟ್ಟವೇನಾಗಿತ್ತು ಎಂಬುದರ ಬಗ್ಗೆ ಒಂದು ವರದಿ ಹಝ್ರತ್ ಉಮರ್(ರ) ಸ್ವತಂತ್ರಗೊಳಿಸಿದ ಗುಲಾಮನಾದ ಹಝ್ರತ್ ಅಸ್ಲಮ್‌ರಿಂದ ವರದಿಯಾಗಿದೆ. ಅವರು ಹೇಳುತ್ತಾರೆ: ಒಂದು ರಾತ್ರಿ ನಾನು ಅಮೀರುಲ್ ಮೂಮಿನೀನ್‌ರೊಂದಿಗೆ ಮದೀನದ ಆಸುಪಾಸಿನಲ್ಲಿ ಸುತ್ತುತ್ತಿದ್ದೆ. ಅವರು ಸ್ವಲ್ಪ ಸಮಯ ಆರಾಮ ಮಾಡಲಿಕ್ಕಾಗಿ ಒಂದು ಗೋಡೆಗೆ ಒರಗಿ ಕುಳಿತರು. ಅದು ಒಬ್ಬ ಮುದುಕಿಯ ಮನೆಯ ಗೋಡೆಯಾಗಿತ್ತು. ಮನೆಯೊಳಗೆ ಆ ಮುದುಕಿ ತನ್ನ ಮಗಳೊಡನೆ ಹೀಗೆ ಹೇಳುತ್ತಿದ್ದಳು: ಎದ್ದೇಳು ಮತ್ತು ಹಾಲಿಗೆ ನೀರನ್ನು ಸೇರಿಸು. ಯುವತಿ ಹೇಳಿದಳು: ಹಾಲಿನಲ್ಲಿ ನೀರು ಸೇರಿಸಬಾರದು ಎಂದು ಅಮೀರುಲ್ ಮೂಮಿನೀನ್ ಘೋಷಿಸಿರುವರು ಎಂದು ನಿಮಗೆ ಗೊತ್ತಿಲ್ಲವೇ? ಮುದುಕಿಯಾದ ತಾಯಿ ಹೇಳಿದಳು: ಈಗ ಇಲ್ಲಿ ಅಮೀರುಲ್ ಮೂಮಿನೀನ್ ಇಲ್ಲ, ಘೋಷಣೆ ಮಾಡುವವನೂ ಇಲ್ಲ. ಯುವತಿ ಹೇಳಿದಳು: ಅಲ್ಲಾಹನಾಣೆ, ಅವರ ಮುಂದೆ ಅವರನ್ನು ಅನುಸರಿಸಿ, ಅವರಿಂದ ಬೇರ್ಪಡುವಾಗ ಅವರನ್ನು ಧಿಕ್ಕರಿಸುವುದು ಸರಿಯಲ್ಲ. ಇದನ್ನು ಕೇಳಿ ಹಝ್ರತ್ ಉಮರ್(ರ) ಬಹಳ ಸಂತೋಷಗೊಂಡರು ಮತ್ತು ಜೊತೆಗಿದ್ದ ನನ್ನೊಡನೆ ಹೇಳಿದರು: ಎಲೈ ಅಸ್ಲಂ ಈ ಮನೆಯ ಬಾಗಿಲಲ್ಲಿ ಒಂದು ಗುರುತು ಹಾಕು. ಮರುದಿನ ಅವರು ಒಬ್ಬರನ್ನು ಅಲ್ಲಿಗೆ ಕಳುಹಿಸಿ ಆ ಯುವತಿಯ ವಿವಾಹ ಸಂಬಂಧವನ್ನು ತನ್ನ ಮಗನಾದ ಆಸಿಮ್‌ನೊಡನೆ ಮಾಡಿಸಿದರು. ಯುವತಿಯ ಸತ್ಯಸಂಧತೆಯೆಂಬ ಒಳಿತನ್ನು ಮಾತ್ರ ನೋಡಿಕೊಂಡು ತನ್ನ ಮಗನ ವೈವಾಹಿಕ ಸಂಬಂಧವನ್ನು ಅವಳೊಂದಿಗೆ ಮಾಡಿಸಿದ್ದರು. ಅವಳಿಂದ ಆಸಿಮ್‌ರಿಗೆ ಒಬ್ಬಳು ಹೆಣ್ಣು ಮಗು ಜನಿಸಿತು. ಹಝ್ರತ್ ಉಮರ್ ಬಿನ್ ಅಬ್ದುಲ್‌ಅಝೀಝ್ ಅದೇ ಹುಡುಗಿಯ ಸಂತಾನಕ್ಕೆ ಸೇರಿದವರಾಗಿದ್ದರು. (ಇಜ಼ಾಲತುಲ್ ಖಫಾ ಅನ್ ಖಿಲಾಫತಿಲ್ ಖುಲಫಾ, ಅನುವಾದ ಸಂಪುಟ–3, ಪುಟ–281–282, ಮನಾಖಿಬ್ ಫಾರೂಖೆ ಆಝುಮ್, ಖದೀಮಿ ಕುತುಬ್ ಖಾನ ಕರಾಚಿ)

ಸಲ್ಮಾ ಒಂದು ವರದಿಯನ್ನು ಹೇಳುತ್ತಾರೆ: ಒಮ್ಮೆ ಹಝ್ರತ್ ಉಮರ್(ರ) ತನ್ನ ಯಾವುದೋ ಒಂದು ಕೆಲಸದ ಕಾರಣದಿಂದ ಮಾರುಕಟ್ಟೆಯಲ್ಲಿ ನಡೆಯುತ್ತಿದ್ದರು. ಅವರ ಕೈಯಲ್ಲಿ ಬಡಿಗೆಯಿತ್ತು. ಹಝ್ರತ್ ಉಮರ್(ರ) ಹೇಳಿದರು: ಹೇ ಸಲ್ಮಾ, ಮಾರ್ಗದ ಬದಿಯಲ್ಲಿ ನಡೆ. ಹೀಗೆ ಹೇಳುತ್ತಾ ಅವರು ಹಗುರವಾಗಿ ನನ್ನನ್ನು ಬಡಿಗೆಯಿಂದ ಹೊಡೆದರು. ಅದು ನನ್ನ ಅಂಗಿಯ ಮೂಲೆಗೆ ತಗುಲಿತ್ತು. ಹೀಗೆ ನಾನು ಮಾರ್ಗದಿಂದ ಸರಿದೆನು ಮತ್ತು ಅವರು ಸುಮ್ಮನಾದರು. ಇದು ನಡೆದು ಒಂದು ವರ್ಷವಾದ ನಂತರ ಪುನಃ ಹಝ್ರತ್ ಉಮರ್(ರ) ನನ್ನನ್ನು ಮಾರುಕಟ್ಟೆಯಲ್ಲಿ ಭೇಟಿಯಾದರು. ಅವರು ಕೇಳಿದರು: ಹೇ ಸಲ್ಮಾ, ಈ ವರ್ಷ ಹಜ್ಜಿಗೆ ಹೋಗುವ ಉದ್ದೇಶವಿದೆಯೇ? ಹೌದೆಂದು ನಾನು ಹೇಳಿದೆ. ಅನಂತರ ಅವರು ನನ್ನ ಕೈಯನ್ನು ಹಿಡಿದು ನನ್ನನ್ನು ಅವರ ಮನೆಗೆ ಕೊಂಡುಹೋದರು. ಒಂದು ಚೀಲದಿಂದ 600 ದಿರ್ಹಂ ನನಗೆ ಕೊಟ್ಟು ಹೀಗೆ ಹೇಳಿದರು: ಹೇ ಸಲ್ಮಾ, ಇದನ್ನು ನಿನ್ನ ಆವಶ್ಯಕತೆಗಳಿಗಾಗಿ ಉಪಯೋಗಿಸು. ಇದು ಒಂದು ವರ್ಷ ಹಿಂದೆ ನಾನು ಬಡಿಗೆಯಿಂದ ಹೊಡೆದದಕ್ಕೆ ಇರುವ ಪ್ರಾಯಶ್ಚಿತವಾಗಿದೆ. ಸಲ್ಮಾ ಹೇಳಿದರು: ಅಲ್ಲಾಹನಾಣೆ, ಅಮೀರಲ್ ಮೂಮಿನೀನ್, ಈ ಸಂಗತಿಯನ್ನು ನಾನು ಸಂಪೂರ್ಣವಾಗಿ ಮರೆತುಬಿಟ್ಟಿದ್ದೆ. ನೀವೀಗ ಅದನ್ನು ನೆನಪಿಸಿದ್ದೀರಿ. (ಸೀರತ್ ಉಮರ್ ಬಿನ್ ಖತ್ತಾಬ್, ಇಬ್ನುಲ್ ಜೂಜ಼ೀವ್, ಪುಟ–98, ಅಲ್‌ಮತ್‌ಬಅತುಲ್ ಮಿಸ್ರಿಯ್ಯ ಅಲ್‌ಅಝ್‌ಹರ್)

ಯಾವುದೇ ವ್ಯಕ್ತಿಯ ನಾಗರಿಕ ಹಕ್ಕುಗಳ ಮೇಲೆ ದುಷ್ಪರಿಣಾಮ ಬೀರದ ರೀತಿಯಲ್ಲಿ ಮಾರುಕಟ್ಟೆಯ ವಸ್ತುಗಳ ಬೆಲೆ ಇರುವಂತೆ ಹಝ್ರತ್ ಉಮರ್(ರ) ನೋಡಿಕೊಳ್ಳುತ್ತಿದ್ದರು. ಇದನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಕೊಡುಕೊಳ್ಳುವಿಕೆಯ ವಿಷಯದಲ್ಲಿ ಯಾವುದೇ ನ್ಯೂನತೆಗಳಿರಬಾರದು ಎಂಬುದು ನಾಗರಿಕ ಹಕ್ಕುಗಳಿಗೆ ಸೇರಿದ ಸಂಗತಿಯಾಗಿದೆ. ಇಸ್ಲಾಂ ಈ ಹಕ್ಕನ್ನು ಕೂಡ ಕಡೆಗಣಿಸಿಲ್ಲವೆಂದು ನಾವು ನೋಡುತ್ತೇವೆ. ಬೆಲೆಯೇರಿಸುವುದನ್ನು ಮತ್ತು ದುಬಾರಿ ಬೆಲೆಗೆ ಮಾರಾಟ ಮಾಡುವುದನ್ನು ಇಸ್ಲಾಂ ತಡೆಯುತ್ತದೆ. ಅದೇ ರೀತಿಯಲ್ಲಿ ಇತರ ವ್ಯಾಪಾರಿಗಳಿಗೆ ನಷ್ಟವುಂಟು ಮಾಡುವ ಉದ್ದೇಶದಿಂದ ವ್ಯಾಪಾರದಲ್ಲಿ ಬೆಲೆಯನ್ನು ಬಹಳ ಕಡಿಮೆಗೊಳಿಸುವುದನ್ನು ಕೂಡ ನಿಷೇಧಿಸಿದೆ. ಇಂದಿನ ಮಾರ್ಕಟ್ಟಿನಲ್ಲಿ ಹೀಗೆಯೇ ಆಗುತ್ತಿದೆ. ಒಂದು ಬಾರಿ ಮದೀನದಲ್ಲಿ ಒಬ್ಬ ವ್ಯಕ್ತಿಯು ಇತರ ವ್ಯಾಪಾರಸ್ತರಿಗೆ ಮಾರಾಟ ಮಾಡಲು ಸಾಧ್ಯವಿಲ್ಲದಷ್ಟು ಕಡಿಮೆ ಬೆಲೆಗೆ ದ್ರಾಕ್ಷೆಯನ್ನು ಮಾರಾಟ ಮಾಡುತ್ತಿದ್ದನು. ಹಝ್ರತ್ ಉಮರ್(ರ) ಆ ವ್ಯಕ್ತಿಯ ಸಮೀಪದಿಂದ ಸಾಗಿದಾಗ ಅವರು ಆ ವ್ಯಕ್ತಿಯನ್ನು ಗದರಿಸಿದರು. ಏಕೆಂದರೆ ಇದರಿಂದ ಇತರ ವ್ಯಾಪಾರಸ್ತರಿಗೆ ನಷ್ಟವಾಗುತ್ತಿತ್ತು. ಒಟ್ಟಿನಲ್ಲಿ ವ್ಯಾಪಾರಸ್ತರಿಗೆ ಮತ್ತು ಜನಸಾಮಾನ್ಯರಿಗೆ ನಷ್ಟವಾಗುವ ರೀತಿಯಲ್ಲಿ ಬೆಲೆಯೇರಿಸುವುದನ್ನೂ ಬೆಲೆಯನ್ನು ಬಹಳವಾಗಿ ತಗ್ಗಿಸುವುದನ್ನೂ ಇಸ್ಲಾಂ ನಿಷೇಧಿಸಿದೆ. (ತಫ್ಸೀರೆ ಕಬೀರ್, ಸಂಪುಟ–10, ಪುಟ–307)

ಆಮಿರ್ ಹೇಳುತ್ತಾರೆ: ಒಬ್ಬ ವ್ಯಕ್ತಿ ಹಝ್ರತ್ ಉಮರ್‌ರ(ರ) ಬಳಿಗೆ ಬಂದು ಹೀಗೆ ಹೇಳಿದರು: ನನಗೆ ಒಬ್ಬಳು ಮಗಳಿದ್ದಳು. ಅವಳನ್ನು ನಾನು ಜೀವಂತವಾಗಿ ಹೂಳಿದ್ದೆ. ಆದರೆ ಅವಳು ಸಾವನ್ನು ಅಪ್ಪುವುದಕ್ಕೆ ಮುಂಚಿತವಾಗಿ ನಾನು ಅವಳನ್ನು ಹೊರಗೆ ತೆಗೆದೆನು. ಅವಳು ಮುಸ್ಲಿಮಳಾದ ನಂತರ ಅವಳಿಂದ ಒಂದು ತಪ್ಪಾಯಿತು. ಅದಕ್ಕೆ ಅಲ್ಲಾಹನು ನಿಶ್ಚಯಿಸಿದ್ದ ಒಂದು ಶಿಕ್ಷೆಯೂ ಅವಳಿಗೆ ಲಭಿಸಿತ್ತು. ಆಗ ಅವಳು ಆತ್ಮಹತ್ಯೆ ಮಾಡಲಿಕ್ಕಾಗಿ ಒಂದು ಚೂರಿಯನ್ನು ತೆಗೆದಳು. ಅವಳು ಕೆಲವು ನರಗಳನ್ನು ಕತ್ತರಿಸಿದನ್ನು ಕಂಡಾಗ ನಾನು ಅವಳನ್ನು ಹಿಡಿದೆ. ಅನಂತರ ನಾನು ಅವಳ ಚಿಕಿತ್ಸೆ ನಡೆಸಿದೆ. ಅವಳು ಗುಣಮುಖವಾದ ನಂತರ ಪಶ್ಚಾತ್ತಾಪ ಮಾಡಿರುವಳು. ಈಗ ಹುಡುಗಿಗೆ ವಿವಾಹ ಸಂಬಂಧಗಳು ಬರುತ್ತಿವೆ. ಹೀಗಿರುವಾಗ ಈ ಎಲ್ಲ ಸಂಗತಿಗಳನ್ನು ವಿವಾಹ ಸಂಬಂಧದ ಸಂದೇಶದೊಂದಿಗೆ ಬರುವವರೊಡನೆ ಹೇಳಬೇಕೇ? ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನು ಅದನ್ನು ಮರೆಸಿದ್ದಾನೆ. ನೀನು ಅದನ್ನು ಬಹಿರಂಗಪಡಿಸಲು ಇಚ್ಛಿಸುತ್ತಿದ್ದೀಯ!!

ಅಲ್ಲಾಹನಾಣೆ! ನೀನು ಹಾಗೆ ಮಾಡಿದರೆ, ಪಟ್ಟಣವಾಸಿಗಳಾದ ಎಲ್ಲರ ಮುಂದೆ ನಿನ್ನನ್ನು ನಾನು ಶಿಕ್ಷಿಸುವೆನು. ಆದ್ದರಿಂದ ಅವಳ ನಿಕಾಹನ್ನು ಒಂದು ಪರಿಶುದ್ಧ ಮುಸ್ಲಿಂ ಯುವತಿಯ ರೀತಿಯಲ್ಲೇ ಮಾಡು. ಹಿಂದಿನ ಸಂಗತಿಗಳನ್ನೆಲ್ಲ ಮರೆತುಬಿಡು. (ತಫ್ಸೀರ್ ಅತ್ತಬರಿ, ಭಾಗ–6, ಸೂರ ಅಲ್‌ಮಾಇದಃ, ಪುಟ–127, ದಾರ್ ಅಹ್ಯಾಉತ್ತುರಾಸುಲ್ ಅರಬಿ, 2001)

ಅಮ್‌ವಾಸ್‌ನಲ್ಲಿ ಪ್ಲೇಗ್ ಹರಡಿದಾಗ ಜನರ ಜೀವದ ಬಗ್ಗೆ ಹಝ್ರತ್ ಉಮರ್‌ರಿಗೆ ಇದ್ದ ಚಿಂತೆಯ ಕುರಿತು ವರದಿಯಿದೆ. ರಮ್‌ಲ ಮತ್ತು ಬೈತುಲ್‌ಮಖ್‌ದಸಿನ ಮಾರ್ಗದಲ್ಲಿ ಆರು ಮೈಲುಗಳ ದೂರದಲ್ಲಿ ಅಮ್‌ವಾಸ್ ಎಂಬ ಹೆಸರಿನ ಒಂದು ಕಣಿವೆಯಿದೆ. ಇಲ್ಲಿ ಪ್ಲೇಗಿನ ಆರಂಭವಾಯಿತು ಮತ್ತು ಸಿರಿಯದಲ್ಲಿ ಹರಡಿತು ಎಂದು ಚರಿತ್ರೆಯ ಗ್ರಂಥಗಳಲ್ಲಿ ಬರೆದಿದೆ. ಆದ್ದರಿಂದ ಇದನ್ನು ತಾಊನ್ ಅಮ್‌ವಾಸ್ ಎಂದು ಕರೆಯಲಾಗುತ್ತದೆ. ಎಂದರೆ ಅಮ್‌ವಾಸ್‌ನಿಂದ ಹರಡಿದ ಪ್ಲೇಗ್. ಈ ರೋಗದಿಂದ ಸಿರಿಯದಲ್ಲಿ ಅನೇಕ ಸಾವುಗಳು ಉಂಟಾದುವು. ಕೆಲವರ ಪ್ರಕಾರ 25 ಸಾವಿರ ಜನರ ಮೃತ್ಯುವಾಯಿತು. ಹಿಜರೀ 17ರಲ್ಲಿ ಹಝ್ರತ್ ಉಮರ್(ರ) ಮದೀನದಿಂದ ಸಿರಿಯಗೆ ಹೊರಟರು. ಸರಗ್ ಎಂಬ ಪ್ರದೇಶಕ್ಕೆ ತಲುಪಿ ಸೇನಾಧಿಪತಿಯನ್ನು ಭೇಟಿಯಾದರು. ಅಮ್‌ವಾಸ್‌ನಲ್ಲಿ ರೋಗ ಹರಡಿದೆ ಎಂಬ ಮಾಹಿತಿಯನ್ನು ಹಝ್ರತ್ ಉಮರ್‌ರಿಗೆ(ರ) ನೀಡಲಾಯಿತು. ಸಮಾಲೋಚನೆಯ ನಂತರ ಅವರು ಮರಳಿ ಹೋದರು. ಇದರ ವಿಶದ ವಿವರಣೆ ಸಹೀಹ್ ಬುಖಾರಿಯ ವರದಿಯಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ:

ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್(ರ) ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ಸರಗ್ ಎಂಬ ಪ್ರದೇಶಕ್ಕೆ ತಲುಪಿದಾಗ ಅವರು ಸೇನಾಧಿಪತಿಗಳನ್ನು, ಹಝ್ರತ್ ಅಬೂ ಉಬೈದರನ್ನು ಮತ್ತು ಅವರ ಸಂಗಡಿಗರನ್ನು ಭೇಟಿಯಾದರು. ಸಿರಿಯಾದಲ್ಲಿ ಪ್ಲೇಗ್ ರೋಗ ಹರಡಿದೆ ಎಂದು ಅವರು ಹಝ್ರತ್ ಉಮರ್‌ರೊಡನೆ(ರ) ಹೇಳಿದರು. ಹಝ್ರತ್ ಉಮರ್(ರ) ಸಮಾಲೋಚನೆಗಾಗಿ ಮುಹಾಜಿರುಗಳಲ್ಲಿ ಮೊದಲಿಗರನ್ನು ಕರೆದರು. ಹಝ್ರತ್ ಉಮರ್(ರ) ಅವರೊಡನೆ ಸಮಾಲೋಚನೆ ನಡೆಸಿದರು. ಆದರೆ, ಅವರಲ್ಲಿ ಭಿನ್ನಾಭಿಪ್ರಾಯಗಳಿದ್ದುವು. ಇಲ್ಲಿಂದ ಹಿಂದೆ ಸರಿಯಬಾರದು ಎಂದು ಕೆಲವರು ಹೇಳಿದರು. ಆದರೆ ಕೆಲವರು ಹೇಳಿದರು: ಸೈನ್ಯದಲ್ಲಿ ಹಝ್ರತ್ ಪೈಗಂಬರರ(ಸ) ಸಹಾಬಿಯರು ಇರುವರು ಅವರನ್ನು ಮಾರಕ ರೋಗಕ್ಕೆ ತುತ್ತುಮಾಡುವುದು ಸರಿಯಲ್ಲ. ಹಝ್ರತ್ ಉಮರ್(ರ) ಮುಹಾಜಿರರನ್ನು ವಾಪಾಸ್ಸು ಕಳುಹಿಸಿ ಅನ್ಸಾರರನ್ನು ಕರೆದರು. ಅವರೊಡನೆ ಸಮಾಲೋಚನೆ ನಡೆಸಿದರು. ಅನ್ಸಾರರ ಅಭಿಪ್ರಾಯಗಳಲ್ಲೂ ಮುಹಾಜಿರರ ಹಾಗೆ ಭಿನ್ನತೆ ಉಂಟಾಯಿತ್ತು. ಹಝ್ರತ್ ಉಮರ್(ರ) ಅನ್ಸಾರರನ್ನು ಮರಳಿ ಕಳುಹಿಸಿದ್ದರು. ಮಕ್ಕಾ ವಿಜಯದ ಸಮಯದಲ್ಲಿ

ಇಸ್ಲಾಂ ಧರ್ಮವನ್ನು ಸ್ವೀಕರಿಸಿ ಮದೀನಕ್ಕೆ ಬಂದ ಖುರೈಶಿನ ವೃದ್ಧ ಜನರನ್ನು ಕರೆದು ಸೇರಿಸಲು ಹಝ್ರ್‌ರತ್ ಉಮರ್(ರ) ಹೇಳಿದರು. ಅವರನ್ನು ಕರೆಯಲಾಯಿತು. ಜನರನ್ನು ಕರೆದುಕೊಂಡು ಮರಳಿಹೋಗಲು ಮತ್ತು ಸಾಂಕ್ರಾಮಿಕ ರೋಗವಿರುವ ಪ್ರದೇಶಕ್ಕೆ ಜನರನ್ನು ಕರೆದುಕೊಂಡು ಹೋಗದಿರಲು ಅವರು ಒಮ್ಮತಾಭಿಪ್ರಾಯದೊಂದಿಗೆ ಸಲಹೆಕೊಟ್ಟರು. ಹಝ್ರ್‌ರತ್ ಉಮರ್(ರ) ಮರಳಿ ಹೋಗುವಂತೆ ತನ್ನೊಂದಿಗೆ ಬಂದ ಜನರಲ್ಲಿ ಘೋಷಿಸಿದರು. ಅಲ್ಲಾಹನ ವಿಧಿಯಿಂದ ರಕ್ಷೆಹೊಂದಲು ಸಾಧ್ಯವೇ ಎಂದು ಆ ಸಂದರ್ಭದಲ್ಲಿ ಹಝ್ರ್‌ರತ್ ಅಬೂ ಉಬೈದ(ರ) ಕೇಳಿದರು. ಹಝ್ರ್‌ರತ್ ಉಮರ್(ರ) ಅಬೂ ಉಬೈದರೊಡನೆ ಹೇಳಿದರು: ಹೇ ಅಬೂ ಉಬೈದ, ಈ ಪ್ರಶ್ನೆಯನ್ನು ನೀನಲ್ಲದೆ, ಬೇರೆ ಯಾರಾದರೂ ಕೇಳಿದರೆ ಒಳ್ಳೆಯದಿತ್ತು. ಹೌದು ನಾವು ಅಲ್ಲಾಹನ ವಿಧಿಯಿಂದ ಓಡುಹೋಗುತ್ತಾ ಅಲ್ಲಾಹನ ವಿಧಿಯ ಕಡೆಗೆ ಹೋಗುತ್ತಿದ್ದೇವೆ. ನಿಮ್ಮ ಬಳಿ ಒಂದು ಒಂಟೆಯಿದ್ದು, ಅದನ್ನು ಎರಡು ಬದಿಗಳಿರುವ ಕಣಿವೆಯ ಬಳಿಗೆ ಕೊಂಡುಹೋದರೆ, ಎಂದರೆ ಒಂದು ಬದಿಯಲ್ಲಿ ಹಚ್ಚ ಹಸಿರಾದ ಹುಲ್ಲುಗಳಿವೆ, ಮತ್ತೊಂದು ಬದಿ ಒಣಗಿ ಹೋಗಿದೆ ಎಂದಾದರೆ, ನೀವು ಅದನ್ನು ಒಣ ಪ್ರದೇಶದಲ್ಲಿ ಮೇಯಲು ಬಿಡುವುದಾದರೆ, ಅದೂ ಅಲ್ಲಾಹನ ವಿಧಿಯೇ ಅಲ್ಲವೇ, ಅದನ್ನು ಹಸಿರಾದ ಪ್ರದೇಶದಲ್ಲಿ ಮೇಯಲು ಬಿಡುವುದಾದರೆ, ಅದೂ ಅಲ್ಲಾಹನ ವಿಧಿಯೇ ಅಲ್ಲವೇ? ಅಷ್ಟರಲ್ಲಿ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಬಂದರು. ಮೊದಲು ಯಾವುದೋ ಕೆಲಸದ ಕಾರಣದಿಂದ ಅವರಿಗೆ ಅಲ್ಲಿ ಹಾಜರಾಗಲು ಸಾಧ್ಯವಾಗಿರಲಿಲ್ಲ. ಅವರು ಹೇಳಿದರು: ನನ್ನ ಬಳಿ ಈ ಸಮಸ್ಯೆಗೆ ಪರಿಹಾರವಿದೆ. ಹಝ್ರ್‌ರತ್ ಪೈಗಂಬರರು(ಸ) ಹೇಳಿದ್ದಾಗಿ ನಾನು ಆಲಿಸಿದ್ದೇನೆ – ಒಂದು ಸ್ಥಳದಲ್ಲಿ ಸಾಂಕ್ರಾಮಿಕ ರೋಗ ಹರಡಿದೆ ಎಂಬ ಮಾಹಿತಿ ಸಿಕ್ಕಿದರೆ, ಅಲ್ಲಿಗೆ ಹೋಗಬೇಡಿರಿ, ನೀವಿರುವ ಸ್ಥಳದಲ್ಲಿ ಸಾಂಕ್ರಾಮಿಕ ರೋಗ ಹರಡಿದರೆ, ಅಲ್ಲಿಂದ ರಕ್ಷೆಹೊಂದಲು ಹೊರಗೆ ಹೋಗಲೂ ಬಾರದು. ಇದನ್ನು ಕೇಳಿದ ನಂತರ ಹಝ್ರ್‌ರತ್ ಉಮರ್(ರ) ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿ ಸೈನ್ಯದೊಂದಿಗೆ ಸಾಂಕ್ರಾಮಿಕ ರೋಗವಿರುವ ಪ್ರದೇಶಕ್ಕೆ ಹೋಗದೆ ಮರಳಿಹೋದರು. (ಸಹೀಹ್ ಬುಖಾರಿ ಕಿತಾಬುತ್ತಿಬ್, ಹದೀಸ್–5729) (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–214–215, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990) (ಮುಜಮುಲ್ ಬಲದಾನ್, ಸಂಪುಟ–4, ಪುಟ–177–178, ಸಂಪುಟ–3, ಪುಟ–239, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಆದರೆ ಹಝ್ರ್‌ರತ್ ಅಬೂ ಉಬೈದ ಸೇನಾಧಿಪತಿಯಾಗಿದ್ದರು ಮತ್ತು ಮೊದಲೇ ಪ್ಲೇಗ್ ರೋಗ ಹರಡಿದ ಸ್ಥಳದಲ್ಲಿ ಇದ್ದರು. ಆದ್ದರಿಂದ ಅವರು ಮತ್ತು ಇಸ್ಲಾಮಿನ ಸೈನ್ಯವು ಪ್ಲೇಗ್ ಹರಡಿದ ಸ್ಥಳದಲ್ಲೇ ತಂಗಿದರು. ಹಝ್ರ್‌ರತ್ ಉಮರ್(ರ) ಮದೀನಕ್ಕೆ ಮರಳಿಹೋದರು. ಆದರೆ ಪ್ಲೇಗ್ ಹರಡಿದ್ದ ಕಾರಣದಿಂದ ತುಂಬಾ ಚಿಂತಿತರಾಗಿದ್ದರು. ಮುಸ್ಲಿಮರನ್ನು ಹೇಗೆ ಪ್ಲೇಗ್ ರೋಗದ ವಿನಾಶದಿಂದ ರಕ್ಷಿಸುವುದು ಎಂಬುದರ ಬಗ್ಗೆ ಯೋಚಿಸಲು ಶುರುಮಾಡಿದರು.

ವಿಶೇಷವಾಗಿ ಹಝ್ರ್‌ರತ್ ಉಮರ್‌ರಿಗೆ(ರ) ಹಝ್ರ್‌ರತ್ ಅಬೂ ಉಬೈದರ(ರ) ಬಗ್ಗೆ ಬಹಳ ಚಿಂತೆಯಿತ್ತು. ಒಂದು ದಿನ ಹಝ್ರ್‌ರತ್ ಉಮರ್(ರ) ಹಝ್ರ್‌ರತ್ ಅಬೂ ಉಬೈದರಿಗೆ(ರ) ಹೀಗೆ ಒಂದು ಪತ್ರವನ್ನು ಬರೆದರು: ನನಗೆ ನಿಮ್ಮಿಂದ ಒಂದು ಅತ್ಯಾವಶ್ಯಕ ಕೆಲಸವಿದೆ. ಆದ್ದರಿಂದ ಈ ಪತ್ರ ನಿಮ್ಮ ಬಳಿಗೆ ತಲುಪಿದ ಕೂಡಲೇ ಮದೀನಕ್ಕೆ ರವಾನೆ ಆಗಿರಿ. ಈ ಪತ್ರ ರಾತ್ರಿ ತಲುಪಿದರೆ, ಬೆಳಿಗ್ಗೆ ಆಗಲು ಕಾಯಬೇಡಿರಿ, ಈ ಪತ್ರ ಬೆಳಿಗ್ಗೆ ತಲುಪಿದರೆ, ರಾತ್ರಿಯಾಗಲು ಕಾಯಬೇಡಿರಿ. ಹಝ್ರ್‌ರತ್ ಅಬೂ ಉಬೈದರೊಂದಿಗೆ ಹಝ್ರ್‌ರತ್ ಉಮರ್‌ರಿಗೆ(ರ) ಅಷ್ಟೊಂದು ಪ್ರೀತಿಯಿತ್ತು. ಹಝ್ರ್‌ರತ್ ಅಬೂ ಉಬೈದರಿಗೆ(ರ) ಈ ಪತ್ರ ತಲುಪಿದಾಗ, ಅವರು ಹೇಳಿದರು: ಅಮೀರುಲ್ ಮೂಮಿನರ ಆವಶ್ಯಕತೆ ಏನೆಂದು ನನಗೆ ಗೊತ್ತಿದೆ. ಅಲ್ಲಾಹನು ಹಝ್ರ್‌ರತ್ ಉಮರರ(ರ) ಮೇಲೆ ಕರುಣೆ ತೋರಿಸಲಿ. ಅವರು ಬಾಕಿಯಾಗಿ ಉಳಿಯದ ವ್ಯಕ್ತಿಯನ್ನು ಉಳಿಸಲು ಬಯಸುತ್ತಿದ್ದಾರೆ. ಹಝ್ರ್‌ರತ್ ಉಮರರಿಗೆ(ರ) ಇದ್ದ ಭಯ ಮತ್ತು ಚಿಂತೆಯ ಕಾರಣವೇನೆಂದು ಅವರಿಗೆ ಗೊತ್ತಾಯಿತು. ಅನಂತರ ಆ ಪತ್ರಕ್ಕೆ ಹೀಗೆ ಉತ್ತರ ಬರೆದರು: ಯಾ ಅಮೀರಲ್ ಮೂಮಿನೀನ್, ನಾನು ನಿಮ್ಮ ಉದ್ದೇಶವನ್ನು ತಿಳಿದಿದ್ದೇನೆ. ನನ್ನನ್ನು ಕರೆಯಬೇಡಿರಿ. ಇಲ್ಲೇ ಇರಲು ಬಿಡಿರಿ. ನಾನು ಮುಸ್ಲಿಮ್ ಸಿಪಾಯಿಗಳಲ್ಲಿ ಒಬ್ಬನಾಗಿರುವೆನು. ವಿಧಿಸಿದ್ದು ಆಗಿಯೇ ಆಗುವುದು. ನಾನು ಅವರಿಂದ ಮುಖ ತಿರುಗಿಸಿ ಹೇಗೆ ಬರಲಿ? ಈ ಪತ್ರವನ್ನು ಓದಿದ ಹಝ್ರ್‌ರತ್ ಉಮರ್(ರ) ಅತ್ತುಬಿಟ್ಟರು. ಅವರು ಮುಹಾಜಿರರೊಡನೆ ಕುಳಿತುಕೊಂಡಿದ್ದರು. ಅವರು ಕೇಳಿದರು: ಯಾ ಅಮೀರಲ್ ಮೂಮಿನೀನ್, ಹಝ್ರ್‌ರತ್ ಅಬೂ ಉಬೈದ ನಿಧನರಾದರೇ? ಆಗ ಹಝ್ರ್‌ರತ್ ಉಮರ್(ರ) ಹೇಳಿದರು: ಇಲ್ಲ ಆದರೆ, ಬಹುಶಃ ಮರಣಹೊಂದುವರು. (ಸೈರ್ ಅಲ್‌ಲಾಮುನ್ನಬ್‌ಲ, ಸಂಪುಟ–1, ಪುಟ–18–19, ಅಬು ಉಬೈದ ಬಿನ್ ಅಲ್‌ಜರಾಹ್ 2014)

ಉತ್ತಮ ಸಲಹೆಗಾರರಾದ ಸಹಾಬಿಯರೊಂದಿಗೆ ಸಮಾಲೋಚನೆ ನಡೆಸಿದ ನಂತರ ಅವರು ಅಬೂ ಉಬೈದರಿಗೆ(ರ) ಹೀಗೆ ಪತ್ರ ಬರೆದರು: ನೀವು ಜನರನ್ನು ತಗ್ಗು ಪ್ರದೇಶಕ್ಕೆ ಕೊಂಡುಹೋಗಿರುವಿರಿ. ಆದ್ದರಿಂದ ಮುಸ್ಲಿಮರನ್ನು ಆ ಪ್ರದೇಶದಿಂದ ಹೊರಗೆತೆಗೆದು, ಯಾವುದಾದರೂ ಆರೋಗ್ಯಕರವಾದ ಉಚ್ಚ, ಶುದ್ಧ ಗಾಳಿಯಾಡುವ ಉನ್ನತ ಪರ್ವತ ಪ್ರದೇಶಕ್ಕೆ ಹೋಗಿರಿ. ಹಝ್ರ್‌ರತ್ ಅಬೂಉಬೈದ(ರ) ಇದರ ಬಗ್ಗೆ ಯೋಚಿಸುತ್ತಿರುವಾಗಲೇ ಅವರಿಗೆ ಪ್ಲೇಗ್ ರೋಗಬಂದು ಅವರು ನಿಧನರಾದರು. ಹಝ್ರ್‌ರತ್ ಅಬೂಉಬೈದ(ರ) ತನ್ನ ಉತ್ತರಾಧಿಕಾರಿಯನ್ನಾಗಿ ಹಝ್ರ್‌ರತ್ ಮುಆಧ್ ಬಿನ್ ಜಬಲ್‌ರನ್ನು(ರ) ಮಾಡಿದ್ದರು. ಆದರೆ ಅವರು ಕೂಡ ಪ್ಲೇಗ್ ರೋಗಕ್ಕೆ ತುತ್ತಾಗಿ ಮೃತಪಟ್ಟರು. ಹಝ್ರ್‌ರತ್ ಮುಆಧ್(ರ) ತನ್ನ ಪ್ರತಿನಿಧಿಯಾಗಿ ಹಝ್ರ್‌ರತ್ ಅಮ್ರ್ ಬಿನ್ ಆಸ್‌ರನ್ನು(ರ) ನಿಶ್ಚಯಿಸಿದ್ದರು. ಅವರೊಂದು ಭಾಷಣ ಮಾಡುತ್ತಾ ಜನರೊಡನೆ ಹೇಳಿದರು: ಸಾಂಕ್ರಾಮಿಕ ರೋಗ ಬಂದರೆ, ಅದು ಬೆಂಕಿಯ ಹಾಗೆ ಹರಡುತ್ತದೆ. ಆದ್ದರಿಂದ ಪರ್ವತಗಳಲ್ಲಿ ಅಡಗಿಕೊಂಡು ತಮ್ಮ ಜೀವಗಳನ್ನು ರಕ್ಷಿಸಿರಿ. ಅವರು ಜನರನ್ನು ತನ್ನ ಜೊತೆಗೆ ಸೇರಿಸಿ ಅಲ್ಲಿಂದ ಹೊರಟು ಪರ್ವತಗಳ ಪ್ರದೇಶಕ್ಕೆ ಹೋದರು. ಈ ರೀತಿಯಾಗಿ ಪ್ಲೇಗ್ ರೋಗವು ಮೆಲ್ಲಮೆಲ್ಲನೆ ಕಡಿಮೆಯಾಗಿ ಕೊನೆಗೊಂಡಿತು. ಹಝ್ರ್‌ರತ್ ಅಮ್ರ್ ಬಿನ್ ಆಸ್‌ರ ಭಾಷಣದ ಬಗ್ಗೆ ಹಝ್ರ್‌ರತ್ ಉಮರ್‌ರಿಗೆ ಮಾಹಿತಿ ಲಭಿಸಿದಾಗ ಅವರು ಅದನ್ನು ಬಹಳ ಇಷ್ಟಪಟ್ಟರು ಎಂದು ಮಾತ್ರವಲ್ಲ, ಇದು ನಾನು ಹಝ್ರ್‌ರತ್ ಅಬೂಉಬೈದರಿಗೆ ಕಳುಹಿಸಿದ ಆಜ್ಞೆಯ ಅನುಸರಣೆಯಾಗಿದೆ ಎಂದು ಹೇಳಿದರು. (ಸಯ್ಯಿದುನಾ ಹಝ್ರ್‌ರತ್ ಉಮರ್ ಫಾರೂಖೆ ಆಝುಮ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದ, ಪುಟ–413, ಇಸ್ಲಾಮಿ ಕುತುಬ್ ಖಾನ ಲಾಹೋರ್)

ಹಝ್ರ್‌ರತ್ ಅಬೂಉಬೈದ(ರ) ಅಲ್ಲದೇ ಹಝ್ರ್‌ರತ್ ಮುಆಧ್ ಬಿನ್ ಜಬಲ್(ರ), ಹಝ್ರ್‌ರತ್ ಯಝೀದ್ ಬಿನ್ ಅಬೂಸುಫ್‌ಯಾನ್(ರ), ಹಝ್ರ್‌ರತ್ ಹಾರಿಸ್ ಬಿನ್ ಹಿಶಾಂ(ರ), ಹಝ್ರ್‌ರತ್ ಸುಹೈಲ್ ಬಿನ್ ಅಮ್ರ್(ರ), ಹಝ್ರ್‌ರತ್ ಉತ್ಬ ಬಿನ್ ಸುಹೈಲ್(ರ) ಮತ್ತು ಇತರ ಶ್ರೇಷ್ಠ ಸಹಾಬರು ಕೂಡ ಈ ಮಾರಕ ರೋಗದಿಂದ ಮೃತಪಟ್ಟರು. (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–487,17ಹಿಜರಿ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಇದರ ಬಗ್ಗೆ ಹಝ್ರ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರ್‌ರತ್ ಉಮರ್(ರ) ಸಿರಿಯಾಗೆ ಹೋದರು. ಅಮ್‌ವಾಸ್‌ನಲ್ಲಿ ಪ್ಲೇಗ್ ಹರಡಿತು. ಹಝ್ರ್‌ರತ್ ಅಬೂ ಉಬೈದ ಮತ್ತು ಇಸ್ಲಾಮಿನ ಸೈನ್ಯ ಹಝ್ರ್‌ರತ್ ಉಮರ್‌ರನ್ನು(ರ) ಸ್ವಾಗತಿಸಿದರು. ಈಗ ಆ ಪ್ರದೇಶಗಳಲ್ಲಿ ಪ್ಲೇಗ್ ರೋಗ ಹರಡಿರುವ ಕಾರಣ ವಾಪಾಸ್ಸು ಹೋಗುವಂತೆ ಸಹಾಬಿಯರು ಸಲಹೆ ನೀಡಿದರು. ಹಝ್ರ್‌ರತ್ ಉಮರ್(ರ) ಅವರ ಸಲಹೆಯನ್ನು ಸ್ವೀಕರಿಸುತ್ತಾ ವಾಪಾಸ್ಸು ಹೋಗಲು ತೀರ್ಮಾನಿಸಿದರು. ಹಝ್ರ್‌ರತ್ ಅಬೂ ಉಬೈದ(ರ) ಬಾಹ್ಯವಾದ ಸಂಗತಿಗಳಿಗೆ ಒತ್ತುಕೊಡುವ ವ್ಯಕ್ತಿಯಾಗಿದ್ದರು. ಅವರಿಗೆ ಈ ತೀರ್ಮಾನದ ಬಗ್ಗೆ ಅರಿವಾದಾಗ ಅವರು ಹೇಳಿದರು: **'ಅತಫಿರ್‍ರು ಮಿನಲ್‌ಖಝ್ಹಾ'** ನೀವು ಅಲ್ಲಾಹನ ವಿಧಿಯಿಂದ ಓಡಿಹೋಗುತ್ತಿದ್ದೀರಾ? ಹಝ್ರ್‌ರತ್ ಉಮರ್(ರ) ಹೇಳಿದರು: **ಅಫಿರ್‍ರು ಮಿನಲ್ ಖಝ್ಹಾ ಇಲಾ ಖದ್ರಿಲ್ಲಾಹ್,** ಎಂದರೆ, ನಾವು ಅಲ್ಲಾಹನ ಒಂದು ವಿಧಿಯಿಂದ ಮತ್ತೊಂದು ವಿಧಿಯ ಕಡೆಗೆ ಓಡಿಹೋಗುತ್ತಿದ್ದೇವೆ. ಎಂದರೆ, ಅಲ್ಲಾಹನ ಒಂದು ವಿಶೇಷವಾದ ತೀರ್ಮಾನಗಳಿರುತ್ತವೆ. ಮತ್ತೊಂದು ಸಾಮಾನ್ಯವಾದ ತೀರ್ಮಾನಗಳಿರುತ್ತವೆ. ಈ ಎರಡು ರೀತಿಯ ತೀರ್ಮಾನಗಳು ಅಲ್ಲಾಹನದ್ದೇ ಆಗಿವೆ. ಬೇರೆ ಯಾರದ್ದೂ ಅಲ್ಲ. ಆದ್ದರಿಂದ ನಾನು ಅವನ ತೀರ್ಮಾನದಿಂದ ಓಡಿಹೋಗುತ್ತಾ ಇಲ್ಲ, ಬದಲಿಗೆ ಅವನ ಒಂದು ತೀರ್ಮಾನದಿಂದ ಮತ್ತೊಂದು ತೀರ್ಮಾನದ ಕಡೆಗೆ ಹೋಗುತ್ತಿದ್ದೇನೆ. ಒಟ್ಟಿನಲ್ಲಿ ಲೌಕಿಕವಾದ ಮಾರ್ಗಗಳನ್ನು ಉಪೇಕ್ಷಿಸುವುದು ಅನುಮತನೀಯವಲ್ಲ. ಆದರೆ ಲೌಕಿಕವಾದ ಸಾಧನ ಸಾಮಗ್ರಿಗಳು ಮತ್ತು ಮಾರ್ಗಗಳನ್ನು ದೀನಿನ ಅಧೀನದಲ್ಲಿ ಇರಿಸಬೇಕು. (ಅಲ್ಲಾಹ ತಆಲ ಕಾ ಸಚ್ಚಾ ಔರ್ ಹಖೀಖಿ ತಅಲ್ಲುಖ್ ಖಾಎಮ್ ಕರ್‌ನೆ ಮೇ ಹೀ ಕಾಮಿಯಾಬಿ ಹೈ, ಅನ್ವಾರುಲ್ ಉಲೂಮ್, ಸಂಪುಟ–21, ಪುಟ–104)

ಹಝ್ರ್‌ರತ್ ಉಮರ್‌ರ(ರ) ದುಆ ಸ್ವೀಕಾರದ ಕೆಲವು ಘಟನೆಗಳಿವೆ: ಹಝ್ರ್‌ರತ್ ಉಮರ್‌ರ(ರ) ಖಿಲಾಫತ್‌ನಲ್ಲಿ ಜನರು ಒಮ್ಮೆ ಕಠಿಣವಾದ ಬರಗಾಲಕ್ಕೆ ತುತ್ತಾದರು. ಆಗ ಹಝ್ರ್‌ರತ್ ಉಮರ್(ರ) ಜನರ ಜೊತೆಗೆ ಹೊರಟು ಅವರಿಗಾಗಿ ಎರಡು ರಕಅತ್ ಇಸ್ತಿಸ್‌ಖಾ ನಮಾಝನ್ನು (ಮಳೆಗಾಗಿ ಮಾಡಲಾಗುವ ನಮಾಝ್) ನಿರ್ವಹಿಸಿದರು. ಅನಂತರ ತನ್ನ ಹೊದಿಕೆಯನ್ನು ತನ್ನ ಎರಡು ತೋಳುಗಳ ಮೇಲೆ ಹಾಕಿದರು. ಅನಂತರ ಹೊದಿಕೆಯ ಬಲಭಾಗವನ್ನು ಎಡಭಾಗಕ್ಕೆ ಮಡಚಿ ಇಟ್ಟರು ಮತ್ತು ಎಡಭಾಗವನ್ನು ಬಲಭಾಗಕ್ಕೆ ಮಡಚಿ ಇಟ್ಟರು. ಅನಂತರ ತಮ್ಮ ಕೈಗಳನ್ನು ದುಆ ಮಾಡಲು ಎತ್ತಿದರು ಮತ್ತು ಹೀಗೆ ದುಆ ಮಾಡಿದರು: ಅಲ್ಲಾಹುಮ್ಮ ಇನ್ನಾ ನಸ್‌ತಘ್‌ಫಿರುಕ ವ ನಸ್‌ತಸ್‌ಖೀಕ. ಎಂದರೆ, ನಾವು ನಿನ್ನಿಂದಲೇ ತಪ್ಪುಗಳಿಗೆ ಕ್ಷಮೆಯನ್ನು ಯಾಚಿಸುತ್ತೇವೆ. ನಿನ್ನಿಂದಲೇ ಮಳೆಗಾಗಿ ಅಪೇಕ್ಷಿಸುತ್ತೇವೆ. ಅವರು ದುಆ ಮಾಡಿ ಹಿಂದೆ ಸರಿಯುವಷ್ಟರಲ್ಲಿ ಮಳೆ ಶುರುವಾಯಿತು.
(ಕನ್‌ಝುಲ್ ಅಅ್‌ಮಾಲ್, ಸಂಪುಟ–4, ಭಾಗ–8, ಹದೀಸ್–23533, ಕಿತಾಬ್ ಅಸ್ಸಲಾತ್, ಬಾಬ್–7, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2004)

ಹಝ್ರ್‌ರತ್ ಉಮರ್‌ರ(ರ) ದುಆ ಸ್ವೀಕಾರದ ಒಂದು ಘಟನೆ ನೈಲ್ ನದಿ ಹರಿಯಲು ಶುರುವಾದ ಬಗ್ಗೆಯೂ ಪ್ರಸ್ತಾಪಿಸಲಾಗುತ್ತದೆ. ಇಸ್ಲಾಂ ಧರ್ಮವು ಈಜಿಪ್ಟಿಗೆ ತಲುಪುವುದಕ್ಕೆ ಮುಂಚೆ, ನೈಲ್ ನದಿ ಬತ್ತಿಹೋಗುವಾಗ ಅಲ್ಲಿಯ ಜನರಲ್ಲಿ ಒಂದು ಸಂಪ್ರದಾಯವಿತ್ತು. ಇಸ್ಲಾಂ ಬಂದು ಆ ಸಂಪ್ರದಾಯವನ್ನು ಕೊನೆಗೊಳಿಸಿತು. ಆ ಸಂಪ್ರದಾಯು ಕೊನೆಗೊಂಡುದ್ದರು ಬಗ್ಗೆ ಹೀಗೆ ಪ್ರಸ್ತಾಪಿಸಲಾಗುತ್ತದೆ. ಖೈಸ್ ಬಿನ್ ಹಿಜಾಜ್ ವರದಿ ಮಾಡುತ್ತಾರೆ: ಈಜಿಪ್ಟ್ ಮೇಲೆ ವಿಜಯ ಸಾಧಿಸಲಾದಾಗ ಅಲ್ಲಿ ನಿವಾಸಿಗಳು ಒಂದು ದಿನ ಹಝ್ರ್‌ರತ್ ಅಮ್ರ್ ಬಿನ್ ಆಸ್‌ರ ಬಳಿಗೆ ಹೋದರು. ಅವರಯ ಹೇಳಿದರು: ಹೇ ಅಮೀರ್, ನಮ್ಮ ನೈಲ್ ನದಿಗೆ ಸಂಬಂಧಿಸಿ ಒಂದು ಸಂಪ್ರದಾಯವಿದೆ. ಅದಿಲ್ಲದೇ ನೈಲ್ ನದಿ ಹರಿಯುವುದಿಲ್ಲ. ಅದೇನೆಂದು ಹಝ್ರ್‌ರತ್ ಅಮ್ರ್(ರ) ಕೇಳಿದರು. ಈ ತಿಂಗಳ ಹನ್ನೊಂದು ರಾತ್ರಿಗಳು ಕಳೆದ ನಂತರ ನಾವು ಒಬ್ಬಳು ಯುವತಿಯ ಬಳಿಗೆ ಅವಳ ಹೆತ್ತವರು ಇರುವಾಗ ಹೋಗುತ್ತೇವೆ. ಅನಂತರ ಹೆತ್ತವರ ಸಮ್ಮತಿಯಿಂದ

ಯುವತಿಗೆ ಅತ್ಯುತ್ತಮ ಬಟ್ಟೆಗಳು ಮತ್ತು ಆಭರಣಗಳನ್ನು ತೊಟ್ಟು ಅವಳನ್ನು ನೈಲ್ ನದಿಗೆ ದೂಡುತ್ತೇವೆ. ಹಝ್ರತ್ ಅಮ್ರ್(ರ) ಹೇಳಿದರು: ಇಸ್ಲಾಮಿನಲ್ಲಿ ಹೀಗೆ ಖಂಡಿತ ಮಾಡಲಿಕ್ಕೆ ಸಾಧ್ಯವಲ್ಲ. ಖಂಡಿತವಾಗಿಯೂ ಇಸ್ಲಾಂ ಈ ಎಲ್ಲ ಸಂಪ್ರಾದಯಗಳನ್ನು ಕೊನೆಗೊಳಿಸುತ್ತದೆ. ಅವರು ಕಾದು ನಿಂತರು. ಕೊನೆಗೆ ನೈಲ್ ನದಿ ಹರಿಯುವುದನ್ನು ಪೂರ್ಣವಾಗಿ ನಿಲ್ಲಿಸಿತು. ಜನರು ದೇಶ ಬಿಟ್ಟು ಹೋಗಲು ಶುರುಮಾಡಿದರು. ನೈಲ್ ನದಿ ಬತ್ತಿಹೋಯಿತು. ಇದನ್ನು ನೋಡಿದಾಗ ಹಝ್ರತ್ ಅಮ್ರ್ ಬಿನ್ ಆಸ್(ರ) ಇದರ ಬಗ್ಗೆ ಹಝ್ರತ್ ಉಮರ್‌ರಿಗೆ(ರ) ಪತ್ರ ಬರೆದರು. ಹಝ್ರತ್ ಉಮರ್(ರ) ಹಝ್ರತ್ ಅಮ್ರ್ ಬಿನ್ ಆಸ್‌ರಿಗೆ ಹೀಗೆ ಪತ್ರ ಬರೆದರು: ನೀನು ಅವರೊಡನೆ ಹೇಳಿದ್ದು ಸರಿ. ಖಂಡಿತವಾಗಿಯೂ ಇಸ್ಲಾಂ ಮೊದಲಿದ್ದ ಇಂತಹ ಎಲ್ಲ ಸಂಪ್ರದಾಯಗಳನ್ನು ಕೊನೆಗೊಳಿಸುತ್ತದೆ.

ಹಝ್ರತ್ ಉಮರ್(ರ) ದುಆ ಮಾಡಿ ಪತ್ರದೊಂದಿಗೆ ಒಂದು ಚೀಟಿಯನ್ನು ಕಳುಹಿಸಿದರು. ಪತ್ರದಲ್ಲಿ ಹೀಗೆ ಬರೆಯಲಾಗಿತ್ತು: ನಾನು ಪತ್ರದೊಂದಿಗೆ ಒಂದು ಚೀಟಿಯನ್ನು ನಿನಗೆ ಕಳುಹಿಸಿದ್ದೇನೆ. ಅದನ್ನು ನೈಲ್ ನದಿಗೆ ಹಾಕು. ಹಝ್ರತ್ ಉಮರ್‌ರ(ರ) ಪತ್ರ ಹಝ್ರತ್ ಅಮ್ರ್‌ರಿಗೆ ಲಭಿಸಿದಾಗ ಅವರು ಆ ಚೀಟಿಯನ್ನು ಹೊರತೆಗೆದು ಅದನ್ನು ತೆರೆದು ನೋಡಿದರು. ಅದರಲ್ಲಿ ಹೀಗೆ ಬರೆಯಲಾಗಿತ್ತು: "ಅಲ್ಲಾಹನ ದಾಸನಾದ ಅಮೀರುಲ್ ಮೂಮಿನೀನ್ ಉಮರ್ ಬಿನ್ ಖತ್ತಾಬ್‌ರಿಂದ ಈಜಿಪ್ಟಿನ ನೈಲ್ ನದಿಯು ಕಡೆಗೆ. ನೀನು ಸ್ವತಃ ಹರಿಯುವಿಯಾದರೆ, ನೀನು ಹರಿಯಬೇಡ. ಎಲೈ ನೈಲ್ ನದಿ, ನಿನ್ನನ್ನು ಏಕನೂ ಸರ್ವಶಕ್ತನೂ ಆದ ಅಲ್ಲಾಹನು ಹರಿಸುತ್ತಿದ್ದಾನೆ ಎಂದಾದರೆ, ಅವನು ನಿನ್ನನ್ನು ಹರಿಸಲಿ ಎಂದು ನಾನು ದುಆ ಮಾಡುತ್ತೇನೆ." ಹೀಗೆ ಹಝ್ರತ್ ಅಮ್ರ್(ರ) ಆ ಚೀಟಿಯನ್ನು ಕ್ರೈಸ್ತರ ಒಂದು ಹಬ್ಬಕ್ಕೆ ಒಂದು ದಿನಕ್ಕೆ ಮುಂಚಿತವಾಗಿ ನೈಲ್ ನದಿಗೆ ಹಾಕಿದರು. ಬೆಳಿಗ್ಗೆಯಾದಾಗ ಅಲ್ಲಾಹನು ಒಂದೇ ರಾತ್ರಿಯಲ್ಲಿ 16 ಗಜ ಅಡಿಯಷ್ಟು ಹೆಚ್ಚು ನೀರು ಹರಿಯಿತು. ಹೀಗೆ ಅಲ್ಲಾಹನು ಈಜಿಪ್ಟ್ ನಿವಾಸಿಗಳ ಈ ಸಂಪ್ರದಾಯವನ್ನು ಕೊನೆಗೊಳಿಸಿದನು. (ತಾರೀಖೂಲ್ ಖುಲಫಾ, ಜಲಾಲುದ್ದೀನ್ ಅಸ್ಸುಯೂತಿ, ಉಮರ್ ಬಿನ್ ಖತ್ತಾಬ್, ಪುಟ–100, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1999)

ಹಝ್ರತ್ ಸಾರಿಯ(ರ) ಇದ್ದ ಯುದ್ಧದಲ್ಲಿ ಹಝ್ರತ್ ಉಮರರ(ರ) ಶಬ್ದ ಕೇಳಿಬಂದ ಬಗ್ಗೆ ಇರುವ ಘಟನೆ ಮೊದಲು ಸಹ ಹೇಳಿದ್ದೇನೆ. ತಾರೀಖ್ ತಬರಿಯಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಸಾರಿಯರನ್ನು(ರ) ಹಝ್ರತ್ ಉಮರ್(ರ) ಝುನೀಂ ಕೋಫ್ಸಾ ಮತ್ತು ದಾರುಲ್‌ಬಜರ್ರದ್ ಪ್ರದೇಶಗಳ ಕಡೆಗೆ ಕಳುಹಿಸಿದರು. ಅವರು ಅಲ್ಲಿಗೆ ತಲುಪಿ ಮುತ್ತಿಗೆ ಹಾಕಿದರು. ಆಗ ಅಲ್ಲಿಯವರು ಸಹಾಯಕ ಜನರನ್ನು ನೆರವಿಗಾಗಿ ಕರೆದರು. ಅವರೆಲ್ಲರೂ ಮುಸ್ಲಿಮರ ಸೈನ್ಯವನ್ನು ಎದುರಿಸಲು ಮೈದಾನದಲ್ಲಿ ಒಟ್ಟುಗೂಡಿದರು. ಅವರ ಸಂಖ್ಯೆ ಹೆಚ್ಚಾದಾಗ ಅವರು ಎಲ್ಲ ಕಡೆಗಳಿಂದಲೂ ಮುಸ್ಲಿಮರನ್ನು ಸುತ್ತುವರೆದರು. ಮದೀನದಲ್ಲಿ ಹಝ್ರತ್ ಉಮರ್(ರ) ಜುಮಾ ಖುತ್ಬ ನೀಡುತ್ತಿದ್ದರು. ಅವರು ಹೀಗೆ ಹೇಳಿದರು: **"ಯಾ ಸಾರಿಯ ಬಿನ್ ಝುನೀಂ ಅಲ್‌ಜಬಲ್ ಅಲ್‌ಜಬಲ್"** ಎಂದರೆ ಎಲೈ ಸಾರಿಯ ಬಿನ್ ಝುನೀಂ, ಪರ್ವತದ ಕಡೆಗೆ ಹೋಗು. ಹೀಗೆ ಅವರು ಪರ್ವತದ ಬಳಿಯಲ್ಲಿ ಅಭಯ ಪಡೆದರು. ಅನಂತರ ಯುದ್ಧ ಮಾಡಿ ಶತ್ರುಗಳನ್ನು ಸೋಲಿಸಿದರು. ಬಹಳಷ್ಟು ಯುದ್ಧ ಸಂಪತ್ತು ಕೂಡ ಲಭಿಸಿತು. (ತಾರೀಖ್ ತಿಬರಿ, ಸಂಪುಟ–2, ಪುಟ–553–554, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಹಝ್ರತ್ ಉಮರರ ಟೋಪಿಯ ಅನುಗ್ರಹ ಮತ್ತು ರೋಮಿನ ಅರಸನ ಬಗ್ಗೆ ಒಂದು ಪ್ರಸ್ತಾಪ ಸಿಗುತ್ತದೆ. ಅದನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ವಿವರಿಸಿರುವರು: ಹಝ್ರತ್ ಉಮರ್‌ರ ಕಾಲದಲ್ಲಿ ಒಂದು ಬಾರಿ ರೋಮಿನ ಚಕ್ರವರ್ತಿಗೆ ಕಠಿಣವಾದ ತಲೆನೋವು ಉಂಟಾಯಿತು. ಅದು ಎಲ್ಲ ವಿಧಗಳ ಚಿಕಿತ್ಸೆಗಳಿಂದಲೂ ಗುಣಮುಖವಾಗುತ್ತಿರಲಿಲ್ಲ. ಹಝ್ರತ್ ಉಮರ್‌ರಿಗೆ ಇದರ ಬಗ್ಗೆ ಬರೆದು ತಿಳಿಸಿರಿ ಎಂದು ಯಾರೋ ಅರಸನೊಡನೆ ಹೇಳಿದರು. ಅವರು ನಿಮಗಾಗಿ ದುಆ ಮಾಡುವರು. ಅವರ ದುಆದಿಂದ ನೀವು ಖಂಡಿತ ಗುಣಮುಖವಾಗುವಿರಿ. ಅರಸನು ಹಝ್ರತ್ ಉಮರರ(ರ) ಬಳಿಗೆ ತನ್ನ ದೂತನನ್ನು ಕಳುಹಿಸಿದರು. ಹಝ್ರತ್ ಉಮರ್(ರ) ಹೀಗೆ ಭಾವಿಸಿದರು: ಇವರು ಅಹಂಭಾವಿಗಳಾದ ಜನರಾಗಿರುವರು. ನಾನು ತಬರ್ರುಕ್ ಆಗಿ, ಎಂದರೆ ಅನುಗ್ರಹವೆಂಬಂತೆ ಏನಾದರೂ ಕಳುಹಿಸಿದರೆ, ಅವರದನ್ನು ನೀಚವೆಂದು ಭಾವಿಸಿ ಉಪಯೋಗಿಸಲಿಕ್ಕಿಲ್ಲ. ಆದ್ದರಿಂದ ಅವರ ಅಹಂಭಾವವನ್ನು ಮುರಿಯುವ ಮತ್ತು ತಬರ್ರುಕಿನ ಕೆಲಸವನ್ನು ನೀಡುವ ಏನಾದರೂ ಕೊಡಬೇಕು. ಹೀಗೆ ಅವರು ತನ್ನ ಒಂದು ಹಳೆಯ ಮತ್ತು ಬಣ್ಣಗುಂದಿದ ಟೋಪಿಯನ್ನು ಅನುಗ್ರಹವೆಂಬಂತೆ ಕಳುಹಿಸಿ ಕೊಟ್ಟರು. ಅರಸನು ಈ ಟೋಪಿಯನ್ನು ನೋಡಿದಾಗ ಅವನಿಗೆ ಅದು ಇಷ್ಟವಾಗಲಿಲ್ಲ. ಅದನ್ನು ಅವನು ತಲೆಯಲ್ಲಿ ಇಡಲಿಲ್ಲ. ಆದರೆ ಈಗ ಮುಹಮ್ಮದ್ ರಸೂಲುಲ್ಲಾಹ್‌ರ(ಸ) ಮೂಲಕವೇ ನಿನಗೆ ಅನುಗ್ರಹ ಸಿಗುವುದು ಎಂದು ಅಲ್ಲಾಹನು ಅವನಿಗೆ ಮನವರಿಕೆ ಮಾಡಿಸಲು ಬಯಸಿದ್ದನು. ಅರಸನಿಗೆ ಎಷ್ಟು ತೀವ್ರವಾದ ತಲೆನೋವಾಯಿತು ಎಂದರೆ, ಉಮರ್ ಕಳುಹಿಸಿದ ಟೊಪ್ಪಿಯನ್ನು ಕೊಂಡು ಬಾ ಎಂದು ಸೇವಕರೊಡನೆ ಅರಸನು ಹೇಳಿದನು. ಹೀಗೆ ಆ ಟೊಪ್ಪಿಯನ್ನು ಧರಿಸಿದಾಗ ಅವನ ತಲೆನೋವು ವಾಸಿಯಾಗಲು ಶುರುವಾಯಿತು. ಪ್ರತಿ ಎಂಟು ಹತ್ತು ದಿನಗಳಲ್ಲಿ ಅವನಗೆ ತಲೆನೋವು ಶುರುವಾಗುತ್ತಿದ್ದ ಕಾರಣದಿಂದ ದರ್ಬಾರಿನಲ್ಲಿ ಕುಳಿತುಕೊಳ್ಳುವಾಗಲೂ ಹಝ್ರತ್ ಉಮರರ(ಸ) ಕಲೆಗುಂದಿದ ಟೊಪ್ಪಿಯನ್ನು ಧರಿಸುವುದು ಅವನ ಮಾಮೂಲಾಯಿತು. ಧರಿಸಿದ ಕಾರಣದಿಂದ ಅಲ್ಲಾಹನು ಅರಸನಗೆ ಶಮನ ನೀಡಿದನು. (ಸೇರೆ ರೂಹಾನಿ(4), ಅನ್ವಾರುಲ್ ಉಲೂಮ್, ಸಂಪುಟ–19, ಪುಟ–536–537)

ಹಝ್ರತ್ ಉಮರರ(ರ) ಕೆಲವು ದುಆಗಳಿವೆ – ಹಝ್ರತ್ ಉಮರ್(ರ) ಹೀಗೆ ದುಆ ಮಾಡುತ್ತಿದ್ದರು: **ಅಲ್ಲಾಹುಮ್ಮ ತವಫ್ಫನೀ ಮಅಲ್ ಅಬ್‌ರಾರ್, ವಲಾ ತಖ್‌ಲಫ್‌ನೀ ಫಿಲ್ ಅಶ್‌ರಾರ್, ವಖಿನೀ ಅಧಾಬನ್ನಾರ್ ವ ಅಲ್‌ಹಿಖ್‌ನೀ ಬಿಲ್‌ಅಖ್‌ಯಾರ್**. ಎಂದರೆ, ಹೇ ಅಲ್ಲಾಹ್, ನನಗೆ ಸಜ್ಜನರೊಂದಿಗೆ ಮರಣವನ್ನು ನೀಡು. ನನ್ನನ್ನು ಕೆಟ್ಟವರ ಜೊತೆಗೆ ಉಪೇಕ್ಷಿಸಬೇಡ. ನನ್ನನ್ನು ಬೆಂಕಿಯ ಶಿಕ್ಷೆಯಿಂದ ರಕ್ಷಿಸು. ನನ್ನನ್ನು ಸಾತ್ವಿಕರೊಂದಿಗೆ ಸೇರಿಸು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–177, ದಾರ್ ಅಹ್ಯಾಉತ್ತುರಾಸುಲ್ ಅರಬಿ 1996)

ಯಹ್‌ಯಾ ಬಿನ್ ಸಈದ್ ಬಿನ್ ಮುಸಯ್ಯಬ್ ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ತನ್ನ ಕೈಯನ್ನು ಆಕಾಶದ ಕಡೆಗೆ ಎತ್ತಿ ಹೀಗೆ ದುಆ ಮಾಡಲು ಶುರುಮಾಡಿದರು: ಹೇ ಅಲ್ಲಾಹ್, ನನಗೆ ಹೆಚ್ಚು ವಯಸ್ಸಾಗಿದೆ ಮತ್ತು ನನ್ನ ಶಕ್ತಿ ಕಡಿಮೆಯಾಗಿದೆ. ನನ್ನ ಪ್ರಜೆಗಳು ಎಲ್ಲ ಕಡೆ ಹರಡಿವೆ. ನೀನು ನನ್ನನ್ನು ವ್ಯರ್ಥಗೊಳಿಸದೇ ನನಗೆ ಮರಣವನ್ನು ನೀಡು. ಹೀಗೆ ಧುಲ್‌ಹಜ್ಜದ ತಿಂಗಳು ಕೊನೆಗೊಂಡಿರಲಿಲ್ಲ. ಅವರ ಮೇಲೆ ಹಲ್ಲೆ ನಡೆಯಿತು ಮತ್ತು ಅವರು ಶಹೀದ್ ಆದರು. (ಅಸದುಲ್‌ಗಾಬ, ಸಂಪುಟ–4, ಪುಟ–162, ಉಮರ್ ಬಿನ್ ಖತ್ತಾಬ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಇಬ್ನು ಉಮರ್‌ರಿಂದ ಹೀಗೆ ವರದಿಯಾಗಿದೆ: ಬರಗಾಲದ ದಿನಗಳಲ್ಲಿ ಹಝ್ರತ್ ಉಮರ್(ರ) ಒಂದು ಹೊಸ ಕೆಲಸವನ್ನು ಮಾಡಿದರು. ಅದನ್ನು ಅವರು ಮೊದಲು ಮಾಡುತ್ತಿರಲಿಲ್ಲ. ಅದೇನೆಂದರೆ, ಜನರಿಗಾಗಿ ಇಶಾ ನಮಾಝಿನ ಇಮಾಮತ್ ವಹಿಸಿದ ನಂತರ ತನ್ನ ಮನೆಗೆ ಪ್ರವೇಶಿಸುತ್ತಿದ್ದರು ಮತ್ತು ರಾತ್ರಿ ಪೂರ್ತಿ ನಿರಂತರವಾಗಿ ಅವರು ನಮಾಝ್ ನಿರ್ವಹಿಸುತ್ತಿದ್ದರು. ಅನಂತರ ಹೊರಗೆ ಬಂದು ಮದೀನದ ಸುತ್ತಾ ಸುತ್ತುತ್ತಿದ್ದರು. ಒಂದು ರಾತ್ರಿ ಸಹರಿಯ ಸಮಯದಲ್ಲಿ ಅವರು ಹೀಗೆ ಹೇಳುವುದನ್ನು ನಾನು ಆಲಿಸಿದೆನು: **ಅಲ್ಲಾಹುಮ್ಮ ಲಾ ತಜ್‌ಅಲ್ ಹಲಾಕ ಉಮ್ಮತ ಮುಹಮ್ಮದಿನ್ ಅಲಾ ಯದೀ.** ಎಂದರೆ, ಹೇ ಅಲ್ಲಾಹ್, ನನ್ನ ಕೈಗಳಿಂದ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯವನ್ನು ನಾಶಕ್ಕೆ ನೂಕಬೇಡ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–237, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳುತ್ತಾರೆ: ಮನುಷ್ಯನು ಅಲ್ಲಾಹನಿಗಾಗಿ ಮಾತ್ರ ಆರಾಧನೆ ಮಾಡಬೇಕು. ಅನಂತರ ಅದನ್ನು ಜನರು ಕೆಟ್ಟದಾಗಿ ಅಥವಾ ಒಳ್ಳೆಯದಾಗಿ ತಿಳಿದುಕೊಂಡರೆ ಅದರ ಬಗ್ಗೆ ಪರಿವೆ ಮಾಡಬಾರದು. ತನ್ನ ಬಾಹ್ಯವನ್ನು ಅರಿತುಕೊಂಡೇ ಕೆಟ್ಟದಾಗಿ ಮಾಡುವುದು ಹಝ್ರತ್ ಪೈಗಂಬರ್(ಸ) ಕಲಿಸಿದ ಒಂದು ದುಆದಿಂದ ಅನುಮತನೀಯವಲ್ಲ ಎಂದು ಸಾಬೀತಾಗುತ್ತದೆ. ಹಝ್ರತ್ ಉಮರ್‌ರಿಗೆ(ರ) ಹಝ್ರತ್ ಪೈಗಂಬರ್(ಸ) ಈ ದುಆವನ್ನು ಕಲಿಸಿದ್ದರು: "ನನ್ನ ಅಂತರಂಗವನ್ನು ನನ್ನ ಬಹಿರಂಗಕ್ಕಿಂತ ಉತ್ತಮಗೊಳಿಸು ಮತ್ತು ನನ್ನ ಬಾಹ್ಯವನ್ನು ಉತ್ತಮಗೊಳಿಸು." (ಹಖಾಎಖುಲ್ ಫುರ್‌ಖಾನ್, ಸಂಪುಟ–4, ಪುಟ–482)

ಹಝ್ರತ್ ಇಬ್ನು ಉಮರ್(ರ) ಹೇಳುತ್ತಾರೆ: ಹಝ್ರತ್ ಉಮರರ(ರ) ರೀತಿ ಏನಾಗಿತ್ತೆಂದರೆ, ನಮಾಝಿನ ಪಂಕ್ತಿಗಳನ್ನು ಸರಿಪಡಿಸಲು ಅವರು ಒಬ್ಬ ವ್ಯಕ್ತಿಯನ್ನು ನಿಶ್ಚಯಿಸಿದ್ದರು. ನಮಾಝಿಗಾಗಿ ಇಖಾಮತ್ ಕೊಡಲಾಗುವಾಗ ಅವರು ಜನರ ಕಡೆಗೆ ಮುಖಮಾಡಿ ಪಂಕ್ತಿಗಳನ್ನು ಸರಿಪಡಿಸುತ್ತಿದ್ದರು ಮತ್ತು ಪಂಕ್ತಿಗಳನ್ನು ಸರಿಪಡಿಸಲು ಹೇಳುತ್ತಿದ್ದರು. ಪಂಕ್ತಿಗಳು ನೇರವಾದ ನಂತರ ಅವರು ಖಿಬ್ಲದ ಕಡೆಗೆ ಮುಖ ಮಾಡಿ ಅಲ್ಲಾಹು ಅಕ್ಬರ್ ಎಂದು ಹೇಳುತ್ತಿದ್ದರು.
(ಸೀರತ್ ಉಮರ್ ಬಿನ್ ಅಲ್‌ಖತ್ತಾಬ್, ಪುಟ–165, ಮಕ್ತಬ ,ಇಸ್ರಿಯತುಲ್ ಅಜ್ಹ್‌ಹರ್)

ಹಝ್ರತ್ ಉಮರ್(ರ) ಅಲ್ಲಾಹನ ಮಾರ್ಗದಲ್ಲಿ ಬಹಳವಾಗಿ ಖರ್ಚು ಮಾಡುವವರಾಗಿದ್ದರು. ಅವರ ದೇವಭಯದ ಸ್ಥಿತಿಯೇನಾಗಿತ್ತು ಎಂದರೆ, ಮರಣಾಸನ್ನರಾದಾಗ ಅವರ ಕಣ್ಣುಗಳಿಂದು ಕಣ್ಣೀರು ಸುರಿಯುತ್ತಿತ್ತು ಮತ್ತು ಅವರು ಹೀಗೆ ಹೇಳುತ್ತಿದ್ದರು: ನಾನು ಯಾವುದೇ ಪ್ರತಿಫಲಕ್ಕೆ ಅರ್ಹನಲ್ಲ. ನಾನು ಕೇವಲ ಶಿಕ್ಷೆಯಿಂದ ಪಾರಾಗುವುದರ ಬಗ್ಗೆ ಚಿಂತಿಸುತ್ತಿದ್ದೇನೆ.

ಈಗ ಸ್ವಲ್ಪ ಸಂಗತಿಗಳು ಬಾಕಿಯಿವೆ. ಅದು ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು. ಇನ್‌ಶಾ ಅಲ್ಲಾಹ್.

****************

## ಸೂಚನೆ

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**
**Mob or whatsapp: 8050330779**

**MUSLIM TELEVISION AHMADIYYA INTERNATIONAL**
**www.mta.tv**

# ಖುತ್‌ಬ ಜುಮುಅ

**ಅಲ್ಲಾಹು ಅಕ್ಬರ್, ಅಲ್ಲಾಹನು ಅತ್ಯಂತ ದೊಡ್ಡವನು. ಅಬೂಬಕರ್(ರ) ಮತ್ತು ಉಮರ್‌ರ(ರ) ಸತ್ಯಸಂಧತೆ ಮತ್ತು ನಿಷ್ಠೆಯ ವೈಭವ ಎಷ್ಟು ಉನ್ನತವಾಗಿತ್ತು! ಇಬ್ಬರೂ ಎಷ್ಟು ಅನುಗ್ರಹೀತ ಖಬರಿನಲ್ಲಿ ದಫನ್ ಆದರು ಎಂದರೆ, ಮೂಸಾ(ಅ) ಮತ್ತು ಈಸಾ(ಅ) ಜೀವಂತವಾಗಿರುತ್ತಿದ್ದರೆ, ನೂರುಪಟ್ಟು ಅಭಿಲಾಷೆಯೊಂದಿಗೆ ಅಲ್ಲಿ ದಫನ್ ಆಗಲು ಬಯಸುತ್ತಿದ್ದರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **26–11–2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

اِيَّاكَ نَعْبُدُ وَاِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ اَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ ۔

ಹಝ್ರತ್ ಉಮರರ(ರ) ದರ್ಬಾರಿನಲ್ಲಿ ಜ್ಞಾನಿಗಳಿಗೆ, ವಿಶೇಷವಾಗಿ ಪವಿತ್ರ ಖುರ್‌ಆನಿನ ಅರಿವುಳ್ಳವರಿಗೆ ಉನ್ನತ ಸ್ಥಾನವಿತ್ತು. ಅವರು ಹಿರಿವಯಸ್ಸಿನವರಾಗಿದ್ದರೂ ಕಿರಿವಯಸ್ಸಿನ ಯುವಕನಾಗಿದ್ದರೂ ಬಾಲಕನಾಗಿದ್ದರೂ ಸರಿ. ಬುಖಾರಿಯಲ್ಲಿ ಒಂದು ವರದಿಯಿದೆ. ಹಝ್ರತ್ ಇಬ್ನು ಅಬ್ಬಾಸ್ ಹೇಳುತ್ತಾರೆ: ಐನಿಯ ಬಿನ್ ಹಸನ್ ಬಿನ್ ಹುದೈಫ ಮದೀನಕ್ಕೆ ಬಂದರು. ಅವರು ತನ್ನ ಸಹೋದರನ ಮಗನಾದ ಹುರ್ರ್ ಬಿನ್ ಖೈಸ್‌ರ ಬಳಿ ತಂಗಿದರು. ಹಝ್ರತ್ ಉಮರ್(ರ) ತನ್ನ ಸಮೀಪದಲ್ಲಿ ಇರಿಸುತ್ತಿದ್ದವರಲ್ಲಿ ಹುರ್ ಬಿನ್ ಖೈಸ್ ಒಬ್ಬರಾಗಿದ್ದರು. ಅವರು ಪವಿತ್ರ ಖುರ್‌ಆನಿನ ಜ್ಞಾನವುಳ್ಳವರಾಗಿದ್ದ ಕಾರಣದಿಂದ ಅದಕ್ಕೆ ಸಂಬಂಧಪಟ್ಟ ಸಲಹೆಗಳನ್ನು ಹಝ್ರತ್ ಉಮರ್‌ರಿಗೆ(ರ) ನೀಡುತ್ತಿದ್ದರು. ಐನಿಯ ತನ್ನ ಸಹೋದರ ಪುತ್ರನೊಡನೆ ಹೇಳಿದರು: ಮಗನೇ, ಆ ನೇತಾರನ ಬಳಿ ನಿನಗೆ ಗೌರವಸ್ಥಾನವಿದೆ. ಆದ್ದರಿಂದ ನೀನು ನನಗಾಗಿ ಅವರ ಬಳಿ ಹೋಗಲು ಅನುಮತಿ ಪಡೆ. ಹುರ್ ಬಿನ್ ಖೈಸ್ ಹೇಳಿದರು: ನಾನು ನಿಮಗಾಗಿ ಅವರ ಬಳಿ ಹೋಗಲು ಅನುಮತಿ ಪಡೆಯುವೆನು. ಹೀಗೆ ಹುರ್ ಬಿನ್ ಖೈಸ್ ಅನುಮತಿ ಕೇಳಿದಾಗ ಹಝ್ರತ್ ಉಮರ್(ರ) ಅವರಿಗೆ ಅನುಮತಿ ಕೊಟ್ಟರು. ಹೀಗೆ ಐನಿಯ ಅವರ ಬಳಿಗೆ ಬಂದಾಗ ಅವನು ಹೇಳಿದನು: ಖತ್ತಾಬಿನ ಪುತ್ರಾ, ಇದೇನು? ಅಲ್ಲಾಹನಾಣೆ, ನೀವು ನಮಗೆ ಹೆಚ್ಚು ಸಂಪತ್ತು ಕೊಡುವುದೂ ಇಲ್ಲ ನಮ್ಮ ನಡುವೆ ಹಣ ವಿತರಣೆ ಮಾಡುವಾಗ ನ್ಯಾಯ ಪಾಲಿಸುವುದೂ ಇಲ್ಲ. ಇದನ್ನು ಕೇಳಿ ಹಝ್ರತ್ ಉಮರ್(ರ) ಕೋಪಗೊಂಡರು ಮತ್ತು ಅವನೊಡನೆ ಏನೋ ಹೇಳಲು ಹೋಗುವಷ್ಟರಲ್ಲಿ ಹುರ್ರ್ ಬಿನ್ ಖೈಸ್ ಹಝ್ರತ್ ಉಮರ್‌ರೊಡನೆ(ರ) ಹೇಳಿದರು: ಹೇ ಅಮೀರಲ್ ಮೂಮಿನೀನ್, ಅಲ್ಲಾಹನು ತನ್ನ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಹೀಗೆ ಹೇಳಿರುವನು: **ಖುಧಿಲ್ ಅಫ್ವ ವಅ್‌ಮುರ್ ಬಿಲ್‌ಮಅ್‌ರೂಫಿ ವ ಅಅ್‌ರಿಝ್ ಅನಿಲ್ ಜಾಹಿಲೀನ್**. ಎಂದರೆ, ಹೇ ನಬಿ, ಸದಾ ಕ್ಷಮಾಶೀಲನಾಗು. ಒಳಿತನ್ನು ಉಪದೇಶಿಸು ಮತ್ತು ಅವಿವೇಕಿಗಳಿಂದ ದೂರಸರಿ. ಅಲ್ಲಾಹನಾಣೆ, ಹುರ್ರ್ ಅವರ ಮುಂದೆ ಈ ಆಯತನ್ನು ಓದಿ ಹೇಳಿದಾಗ ಹಝ್ರತ್ ಉಮರ್(ರ) ಸುಮ್ಮನಾದರು. ಐನಿಯನೊಡನೆ ಏನೂ ಹೇಳಲಿಲ್ಲ. ಪವಿತ್ರ ಖುರ್‌ಆನಿನ ವಚನವನ್ನು ಕೇಳಿದರೆ ಹಝ್ರತ್ ಉಮರ್(ರ) ತಡೆದು ನಿಲ್ಲುತಿದ್ದರು ಮತ್ತು ಅದರ ಪ್ರಕಾರ ನಡೆಯುತ್ತಿದ್ದರು. (ಸಹೀಹ್ ಅಲ್‌ಬುಖಾರಿ, ಕಿತಾಬುತ್ತಫ್‌ಸೀರ್ ಸೂರಃ ಅಅ್‌ರಾಫ್, ಹದೀಸ್–4642)

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಒಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ: ಹಝ್ರತ್ ಉಮರ್‌ರ(ರ) ಆಸ್ಥಾನಕ್ಕೆ ಒಬ್ಬ ಅಮೀರನು ಬಂದನು. ಹತ್ತು ವಯಸ್ಸಿನ ಒಬ್ಬ ಹುಡುಗನು ಕೂಡ ಅಲ್ಲಿ ಕುಳಿತುಕೊಂಡಿರುವುದನ್ನು ಕಂಡಾಗ ಅವನು ಅದನ್ನು ಇಷ್ಟಪಡಲಿಲ್ಲ. ಇಂತಹ ಉನ್ನತಮಟ್ಟದ ದರ್ಬಾರಿನಲ್ಲಿ ಒಬ್ಬ ಬಾಲಕನಿಗೆ ಏನು ಕೆಲಸವೆಂದು ಭಾವಿಸುತ್ತಿದ್ದನು. ಆ ಅಮೀರಿನ ಯಾವುದೇ ಒಂದು ಕೃತ್ಯದಿಂದ ಹಝ್ರತ್ ಉಮರ್(ರ) ಅವನೊಂದಿಗೆ ಅತೃಪ್ತರಾದರು. ಗಲ್ಲಿಗೇರಿಸುವವನನ್ನು ಕರೆದರು. ಆಗ ಆ ಹುಡುಗ **'ವಲ್‌ಕಾಝಿಮೀನಲ್ ಗೈಝ್ ವ ಅಅ್‌ರಿಝ್ ಅನಿಲ್ ಜಾಹಿಲೀನ್'** ಎಂಬ ಪವಿತ್ರ ಖುರ್‌ಆನಿನ ಆಯತನ್ನು ಓದಿಹೇಳಿದನು ಹಾಗೂ ಈ ವ್ಯಕ್ತಿ ಅವಿವೇಕಿಯಾಗಿರುವನು ಎಂದು ಹೇಳಿದನು. ಹೀಗೆ ಹಝ್ರತ್ ಉಮರರ(ರ) ಕೋಪ ತಣ್ಣಗಾಯಿತು ಮತ್ತು ಅವರು ಸುಮ್ಮನಾದರು. ಆಗ ಆ ವ್ಯಕ್ತಿಯ ಸಹೋದರನು ಆ ವ್ಯಕ್ತಿಯೊಡನೆ ಹೇಳಿದನು: ನೋಡು, ತುಚ್ಛನೆಂದು ನೀನು ಭಾವಿಸಿದ್ದ ಬಾಲಕನೇ ನಿನ್ನನ್ನು ರಕ್ಷಿಸಿರುವನು. (ಹಖಾಎಖುಲ್ ಫುರ್‌ಖಾನ್, ಸಂಪುಟ–2, ಪುಟ–122)

ಹಝ್ರತ್ ಉಮರ್(ರ) ಮಕ್ಕಳ ಧಾರ್ಮಿಕ ತರಬೇತಿ ಹೇಗೆ ಮಾಡುತ್ತಿದ್ದರು ಎಂಬುದರ ಬಗ್ಗೆ ಒಂದು ವರದಿಯಿದೆ: ಯೂಸುಫ್ ಬಿನ್ ಯಾಖೂಬ್ ಹೇಳುತ್ತಾರೆ: ನಾವು ಕಿರಿವಯಸ್ಸಿನ ಬಾಲಕರಾಗಿದ್ದಾಗ ನನ್ನೊಡನೆ, ನನ್ನ ಸಹೋದರನೊಡನೆ ಮತ್ತು ನನ್ನ ಚಿಕ್ಕಪ್ಪನ ಮಗನೊಡನೆ ಇಬ್ನು ಶಿಹಾಬ್ ಒಮ್ಮೆ ಹೀಗೆ ಹೇಳಿದರು: ನೀನು ಹುಡುಗರಾಗಿರುವ ಕಾರಣದಿಂದ ನಿಮ್ಮನ್ನು ಸ್ವತಃ ತುಚ್ಛರೆಂದು ಭಾವಿಸಬೇಡಿರಿ. ಏಕೆಂದರೆ, ಏನಾದರೂ ಸಮಸ್ಯೆ ಎದುರಾದರೆ, ಹಝ್ರತ್ ಉಮರ್(ರ) ಮಕ್ಕಳನ್ನು ಕರೆಯುತ್ತಿದ್ದರು ಮತ್ತು ಅವರಿಂದಲೂ ಸಲಹೆ ಪಡೆಯುತ್ತಿದ್ದರು. ಏಕೆಂದರೆ ಅವರು ಮಕ್ಕಳ ಬುದ್ಧಿಯನ್ನು ತೀಕ್ಷ್ಣಗೊಳಿಸುವ ಸಲುವಾಗಿ ಬಯಸುತ್ತಿದ್ದರು. (ಸೀರತ್ ಉಮರ್ ಬಿನ್ ಖತ್ತಾಬ್, ಅಬ್ನೆ ಜೋಝಿ, ಪುಟ–165, ಮಿಸ್ರೀಯತುಲ್ ಅಝ್‌ಹರ್)

ಉಹದ್ ಯುದ್ಧದಲ್ಲಿ ಯುದ್ಧದ ಪಗಡೆ ತಲೆ ಕೆಳಗಾದಾಗ ಎಂದರೆ ಜಯ ಪರಾಜಯವಾಗಿ ಬದಲಾದಾಗ, ಮುಸ್ಲಿಮರಿಗೆ ತೀವ್ರ ನಷ್ಟವನ್ನು ಸಹಿಸಬೇಕಾಗಿ ಬಂತು. ಆಗ ಅಬೂಸುಫ್‌ಯಾನ್ ಮೂರು ಬಾರಿ ಕೂಗುತ್ತಾ ಹೀಗೆ ಕೇಳಿದನು: ನಿಮ್ಮಲ್ಲಿ ಮುಹಮ್ಮದ್ ಇರುವರೇ? ಅದಕ್ಕೆ ಮರುತ್ತರ ಕೊಡುವುದರಿಂದ ಹಝ್ರತ್ ಪೈಗಂಬರ್(ಸ) ಸಹಾಬರನ್ನು ತಡೆದಿದ್ದರು. ಅನಂತರ ಅವನು ಮೂರು ಬಾರಿ ಹೀಗೆ ಕೂಗಿ ಕೇಳಿದನು: ನಿಮ್ಮ ಜನರಲ್ಲಿ ಅಬೂಖಹಾಫನ ಮಗನಿದ್ದಾನೆಯೇ? ಎಂದರೆ ಅಬೂಬಕರ್ ಇದ್ದಾರೆಯೇ ಎಂದು ಕೇಳಿದನು. ಅನಂತರ ಮೂರು ಬಾರಿ ಹೀಗೆ ಕೇಳಿದನು: ನಿಮ್ಮಲ್ಲಿ ಇಬ್ನು ಖತ್ತಾಬ್ ಇದ್ದಾರೆಯೇ? ಎಂದರೆ ಉಮರ್ ಬಿನ್ ಖತ್ತಾಬ್. ಅನಂತರ ಅವನು ತನ್ನ ಸಂಗಡಿಗರ ಕಡೆಗೆ ಹೋಗಿ ಹೀಗೆ ಹೇಳಿದನು: ಅವರೆಲ್ಲರೂ ಕೊಲ್ಲಲ್ಪಟ್ಟಿರುವರು. ಇದನ್ನು ಕೇಳಿ ಹಝ್ರತ್ ಉಮರ್‌ರಿಗೆ(ರ) ತನ್ನನ್ನು ತಾನೇ ನಿಯಂತ್ರಿಸಲು ಸಾಧ್ಯವಾಗಲಿಲ್ಲ ಮತ್ತು ಹೀಗೆ ಹೇಳಿದರು: ಎಲೈ ಅಲ್ಲಾಹನ ಶತ್ರು, ನೀನು ಸುಳ್ಳು ಹೇಳುತ್ತಿದ್ದೀಯಾ. ನೀನು ಕೂಗಿ ಕರೆದ ಎಲ್ಲರೂ ಜೀವಂತವಾಗಿರುವರು. ನಿನಗೆ ಸಹಿಸಲು ಸಾಧ್ಯವಿಲ್ಲದ ಅನೇಕ ಸಂಗತಿಗಳು ಈಗಲೂ ಬಾಕಿಯಾಗಿ ಉಳಿದಿವೆ. ಅಬೂಸುಫ್‌ಯಾನ್ ಹೇಳಿದನು: ಈ ಯುದ್ಧ ಬದ್ರ್ ಯುದ್ಧದ ಪ್ರತೀಕಾರವಾಗಿದೆ. ಯುದ್ಧವೆಂಬುದು ತಕ್ಕಡಿಯ ತಟ್ಟೆಯ ಹಾಗೆಯಾಗಿರುತ್ತದೆ. ಒಮ್ಮೆ ಒಬ್ಬರ ವಿಜಯ, ಮತ್ತೊಮ್ಮೆ ಮತ್ತೊಬ್ಬರ ವಿಜಯ. (ಸಹೀಹ್ ಅಲ್‌ಬುಖಾರಿ ಕಿತಾಬುಲ್ ಜಿಹಾದ್, ಹದೀಸ್–3039)

ಹಝ್ರತ್ ಉಮರ್(ರ) ಬೈತುಲ್ ಮಾಲಿನ ಸಂಪತ್ತಿನ ಸಂರಕ್ಷಣೆ ಮತ್ತು ಮೇಲ್ನೋಟದ ಕಾರ್ಯದಲ್ಲಿ ಎಷ್ಟು ಮುಂಜಾಗ್ರತೆ ವಹಿಸುತ್ತಿದ್ದರು ಎಂಬುದನ್ನು ಕಾಣಬಹುದಾಗಿದೆ. ಇದರ ಕುರಿತು ಒಂದು ವರದಿಯಿದೆ. ಝೈದ್ ಬಿನ್ ಅಸ್ಲಂ ಹೇಳುತ್ತಾರೆ: ಹಝ್ರತ್ ಉಮರ್ ಬಿನ್ ಖತ್ತಾಬ್‌ರಿಗೆ(ರ) ಯಾರೋ ಒಬ್ಬನು ಒಂದು ಲೋಟ ಹಾಲನ್ನು ಕೊಟ್ಟರು. ಅದನ್ನು ಕುಡಿದಾಗ ಅದು ಅವರಿಗೆ ಇಷ್ಟವಾಯಿತು. ಈ ಹಾಲು ಎಲ್ಲಿಂದ ಬಂದಿದೆ ಎಂದು ಹಾಲು ಕೊಟ್ಟವನೊಡನೆ ಹಝ್ರತ್ ಉಮರ್(ರ) ಕೇಳಿದರು. ಅವನು ಹೇಳಿದನು: ನಾನು ಒಂದು ಕಾರಂಜಿಯ ಸಮೀಪಕ್ಕೆ ಹೋಗಿದ್ದೆ. ಅಲ್ಲಿ ಝಕಾತಿನ ಒಂಟೆಗಳಿಗೆ ಜನರು ನೀರು ಕುಡಿಸುತ್ತಿದ್ದರು. ಅವರು ನನಗಾಗಿ ಅದರ ಹಾಲು ಕರೆದರು, ಹಾಲನ್ನು ಹಿಂಡಿದರು. ಅದನ್ನು ನಾನು ನೀರು ಕುಡಿಯುವ ಪಾತ್ರೆಗೆ ಹಾಕಿದೆನು. ಇದನ್ನು ಕೇಳಿ ಹಝ್ರತ್ ಉಮರ್(ರ) ತನ್ನ ಕೈಯನ್ನು ಕಂಠಕ್ಕೆ ಹಾಕಿ ಹಾಲನ್ನು ವಾಂತಿ ಮಾಡಿದರು ಮತ್ತು ಹೀಗೆ ಹೇಳಿದರು: ಅದು ಝಕಾತಿನ ಸಂಪತ್ತಾಗಿದೆ. ನಾನು ಅದರಿಂದ ಕುಡಿಯುವುದಿಲ್ಲ. (ಮೌತ, ಇಮಾಮ್ ಮಾಲಿಕ್ ಕಿತಾಬುಝ್ಝಕಾತ್, ಹದೀಸ್–31, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1985)

ಬರಾ ಬಿನ್ ಮಅ್‌ರೂರ್‌ನ ಮಗನು ಹೇಳುತ್ತಾರೆ: ಒಂದು ದಿನ ಹಝ್ರತ್ ಉಮರ್(ರ) ಮನೆಯಿಂದ ಹೊರಟು ಮಸೀದಿಯ ಪ್ರವಚನ ಪೀಠವನ್ನು ಏರಿದರು. ಆ ವೇಳೆ ಅವರು ರೋಗಿಯಾಗಿದ್ದರು. ಆ ರೋಗಕ್ಕೆ ಜೇನುತುಪ್ಪ ಸೇವಿಸಲು ಸಲಹೆ ಕೊಡಲಾಗಿತ್ತು. ಬೈತುಲ್ ಮಾಲಿನಲ್ಲಿ ಜೇನುತುಪ್ಪದ ಪಾತ್ರೆ ಇತ್ತು. ಹಝ್ರತ್ ಉಮರ್(ರ) ಹೇಳಿದರು: ನೀವು ನನಗೆ ಅನುಮತಿ ಕೊಟ್ಟರೆ ನಾನು ಅದನ್ನು ತೆಗೆದುಕೊಳ್ಳುವೆನು. ಇಲ್ಲದಿದ್ದರೆ ಅದು ನನಗೆ ನಿಷಿದ್ಧವಾಗಿರುವುದು. ಜನರು ತೆಗೆದುಕೊಳ್ಳಲು ಅನುಮತಿ ಕೊಟ್ಟರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ

ಸಅದ್, ಭಾಗ-3, ಪುಟ-147, ದಾರುಲ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996)

ಬೈತುಲ್ ಮಾಲಿನ ಸಂಪತ್ತಿನ ಸಂರಕ್ಷಣೆಯ ಬಗ್ಗೆ ಅವರಿಗೆ ಎಷ್ಟು ಕಾಳಜಿಯಿತ್ತು ಎಂಬುದರ ಬಗ್ಗೆ ಒಂದು ಘಟನೆಯನ್ನು ನಾನು ಹಿಂದೆಯೂ ಹೇಳಿದ್ದೆ. ಇಲ್ಲೂ ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ಒಮ್ಮೆ ಮಧ್ಯಾಹ್ನದ ಕಠಿಣ ಬಿಸಿಲಿನಲ್ಲಿ ಹಿಂದೆ ಉಳಿದ ಎರಡು ಒಂಟೆಗಳನ್ನು ಅಟ್ಟುತ್ತಾ, ಅವುಗಳು ಅತ್ತಿತ್ತ ಹೋಗಿ ಕಾಣೆಯಾಗದಿರಲಿಕ್ಕಾಗಿ ಅವುಗಳನ್ನು ಮೇಯುವ ಜಾಗಕ್ಕೆ ಹಝ್ರತ್ ಉಮರ್(ರ) ಕೊಂಡು ಹೋಗುತ್ತಿದ್ದರು. ಇದನ್ನು ಹಝ್ರತ್ ಉಸ್ಮಾನ್(ರ) ಆಕಸ್ಮಿಕವಾಗಿ ಕಂಡಾಗ ಅವರೊಡನೆ ಹೀಗೆ ಹೇಳಿದರು: ಈ ಕೆಲಸವನ್ನು ಯಾರು ಬೇಕಾದರೂ ಮಾಡಬಹುದಾಗಿದೆ. ನೀವು ನೆರಳಿನ ಕಡೆಗೆ ಬನ್ನಿರಿ. ಆಗ ಹಝ್ರತ್ ಉಮರ್(ರ) ಹೇಳಿದರು: ನೀವು ನೆರಳಲ್ಲಿ ಆರಾಮವಾಗಿ ಕುಳಿತುಕೊಳ್ಳಿರಿ, ಇದು ನನ್ನ ಕೆಲಸವಾಗಿದೆ. ಇದನ್ನು ನಾನೇ ಮಾಡುವೆನು. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ-3, ಪುಟ-667, ಉಮರ್ ಬಿನ್ ಅಲ್‌ಖತ್ತಾಬ್, ದಾರುಲ್ ಫಿಕರ್ ಬೈರೂತ್ ಲೆಬನಾನ್ 2003)

ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ವಿವರಿಸಿರುವರು: ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಮುಸ್ಲಿಮರಿಗೆ ಸಂಪತ್ತು, ಗೌರವ, ಉನ್ನತ ಸ್ಥಾನವನ್ನು ನೀಡಿದನು. ಆದರೆ ಅವರು ಇಸ್ಲಾಮಿಕ ಕಾರ್ಯಗಳಲ್ಲಿ ಅಜಾಗರೂಕರಾಗಲಿಲ್ಲ, ಮರೆತು ಬಿಟ್ಟಿರಲಿಲ್ಲ, ಅಸಡ್ಡೆ ತೋರಿಸಿರಲಿಲ್ಲ, ಆಲಸಿಗರಾಗಿರಲಿಲ್ಲ. ನೀವು ಕೂಡ ಧರ್ಮದಿಂದ ಅಜಾಗರೂಕರಾಗದಿರಿ, ಅಸಡ್ಡೆ ತೋರಿಸದಿರಿ, ಇಸ್ಲಾಮಿನ ಅಧ್ಯಾಪನೆಗಳನ್ನು ಮರೆಯದಿರಿ ಮತ್ತು ನಿಮ್ಮ ಜವಾಬ್ದಾರಿಗಳನ್ನು ಮರೆಯದಿರಿ. ಹಝ್ರತ್ ಉಸ್ಮಾನ್(ರ) ಹೇಳುತ್ತಾರೆ: ಒಮ್ಮೆ ನಾನು ಹೊರಗೆ ಹೋಗಿ ಡೇರೆಯೊಳಗೆ ಕುಳಿತಿದ್ದೆ. ಎಷ್ಟು ಕಠಿಣ ಬಿಸಿಲು ಇತ್ತೆಂದರೆ, ಬಾಗಿಲು ತೆರೆಯಲು ಕೂಡ ಧೈರ್ಯ ಬರುತ್ತಿರಲಿಲ್ಲ. ಅಷ್ಟರಲ್ಲಿ, ನನ್ನ ಗುಲಾಮನು ನನ್ನೊಡನೆ ಹೀಗೆ ಹೇಳಿದನು: ನೋಡಿರಿ, ಕಠಿಣ ಬಿಸಿಲಿನಲ್ಲಿ ಹೊರಗೆ ಒಬ್ಬ ವ್ಯಕ್ತಿ ಸುತ್ತುತ್ತಿದ್ದಾನೆ. ಸ್ವಲ್ಪ ಸಮಯದಲ್ಲೇ ಆ ವ್ಯಕ್ತಿ ನನ್ನ ಡೇರೆಯ ಸಮೀಪಕ್ಕೆ ತಲುಪಿದನು. ನೋಡಿದರೆ, ಅವರು ಉಮರ್ ಆಗಿದ್ದರು. ಅವರನ್ನು ನೋಡಿದಾಕ್ಷಣ ನಾನು ಗಾಬರಿಗೊಂಡು ಹೊರಗೆ ಬಂದೆನು ಮತ್ತು ಹೀಗೆ ಹೇಳಿದೆನು: ಇಷ್ಟು ಬಿಸಿಲಲ್ಲಿ ನೀವು ಎಲ್ಲಿಗೆ ಹೋಗುತ್ತಿದ್ದೀರಿ? ಆಗ ಹಝ್ರತ್ ಉಮರ್(ರ) ಹೇಳಿದರು: ಬೈತುಲ್‌ಮಾಲಿನ ಒಂದು ಒಂಟೆ ಕಾಣೆಯಾಗಿದೆ. ಅದನ್ನು ಹುಡುಕಿಕೊಂಡು ನಾನು ಹೊರಗೆ ಸುತ್ತುತ್ತಿದ್ದೇನೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಮುಂದೆ ಬರೆಯುತ್ತಾರೆ: **ಅಲಲ್ ಅರಾಇಕಿ ಯನ್‌ಝುರೂನ್** ಎಂದು ಅಲ್ಲಾಹನು ಹೇಳಿರುವನು. ಎಂದರೆ ಅವರು ಉನ್ನತ ಸಿಂಹಾಸನದಲ್ಲಿ ಇರುವರಾದರೂ ಸದಾ ಮೇಲ್ನೋಟವಹಿಸುವುದು ಅವರ ಕೆಲಸವಾಗಿರುವುದು. ಲೋಕದ ಅನುಗ್ರಹಗಳು ಮತ್ತು ಲೋಕದ ಆರಾಮದಾಯಕ ವಸ್ತುಗಳು ಅವರನ್ನು ಆಲಸಿಗರನ್ನಾಗಿ ಮಾಡಲಾರವು. ಅವರು ಉನ್ನತ ಸಿಂಹಾಸನಗಳಲ್ಲಿ ನಿದ್ದೆ ಮಾಡುತ್ತಿರುವುದಿಲ್ಲ. ಬದಲಾಗಿ ಎಚ್ಚರದಿಂದಲೂ ಜಾಗರೂಕರಾಗಿಯೂ ಇರುವರು. ಜನರ ಹಕ್ಕುಗಳ ಬಗ್ಗೆ ಕಾಳಜಿವಹಿಸುವರು ಮತ್ತು ತಮಗೆ ಒಪ್ಪಿಸಲಾದ ಕರ್ತವ್ಯಗಳನ್ನು ಬಹಳ ಉತ್ತಮವಾಗಿ ಈಡೇರಿಸುತ್ತಾ ಹೋಗುವರು. (ತಫ್ಸೀರೆ ಕಬೀರ್, ಸಂಪುಟ-8, ಪುಟ-314-315)

ಹಝ್ರತ್ ಉಮರರ(ರ) ಸಮಾನತೆಯ ಸ್ಥಾಪನೆಯ ಬಗ್ಗೆ ಸಈದ್ ಬಿನ್ ಮುಸಯ್ಯಬ್ ವರದಿ ಮಾಡುತ್ತಾರೆ: ಹಝ್ರತ್ ಉಮರ್‌ರ(ರ) ಬಳಿಗೆ ಒಬ್ಬ ಯಹೂದಿ ಮತ್ತು ಒಬ್ಬ ಮುಸ್ಲಿಮನು ಜಗಳ ಮಾಡುತ್ತಾ ಬಂದರು. ಯಹೂದಿಯ ಕಡೆ ನ್ಯಾಯವಿದೆ ಎಂದು ಹಝ್ರತ್ ಉಮರ್‌ರಿಗೆ(ರ) ಮನವರಿಕೆಯಾದಾಗ ಅವರು ಅವರ ಪರವಾಗಿ ತೀರ್ಪು ಮಾಡಿದರು. ಆಗ ಆ ಯಹೂದಿ ಹೇಳಿದನು: ಅಲ್ಲಾಹನಾಣೆ, ನೀವು ಸರಿಯಾದ ತೀರ್ಪನ್ನು ನೀಡಿದ್ದೀರಿ. (ಮೌತಾ ಇಮಾಮ್ ಮಾಲಿಕ್, ಕಿತಾಬುಲ್ ಅಖ್‌ಝಿಯ, ವರದಿ ಸಂಖ್ಯೆ: 1425, ದಾರುಲ್ ಫಿಕರ್ ಬೈರೂತ್ 2002)

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಈಜಿಪ್ಟಿನ ಒಬ್ಬ ವ್ಯಕ್ತಿ ಹಝ್ರತ್ ಉಮರ್‌ರ(ರ) ಬಳಿಗೆ ಬಂದು ಹೀಗೆ ಹೇಳಿದರು: ಹೇ ಅಮೀರಲ್ ಮೂಅ್‌ಮಿನೀನ್, ನಾನು ದೌರ್ಜನ್ಯದಿಂದ ನಿಮ್ಮ ಅಭಯವನ್ನು ಬಯಸುತ್ತೇನೆ. ಹಝ್ರತ್ ಉಮರ್(ರ) ಹೇಳಿದರು: ನೀನು ಒಳ್ಳೆಯ ಅಭಯಸ್ಥಾನವನ್ನು ಹುಡುಕಿದ್ದೀಯ. ಅವನು ಹೇಳಿದನು: ನಾನು ಅಮ್ರ್ ಬಿನ್ ಆಸ್‌ರ ಮಗನೊಂದಿಗೆ ಓಟದಲ್ಲಿ ಸ್ಪರ್ಧಿಸಿದ್ದೆ. ನಾನು ಅವನಿಗಿಂತ ಮುಂದಾದೆನು. ಆಗ ಅವನು ನನ್ನನ್ನು ಚಾವಟಿಯಿಂದ ಹೊಡೆಯಲು ಶುರುಮಾಡಿದನು ಮತ್ತು ಹೀಗೆ ಹೇಳಿದನು: ನಾನು ಗೌರವಾನ್ವಿತ ವ್ಯಕ್ತಿಯ ಮಗನಾಗಿರುವೆನು. ನನಗಿಂತ ಮುಂದೆ ಬರಲು ನಿನಗೆ ಹೇಗೆ ಧೈರ್ಯಬಂತು. ಇದನ್ನು ಕೇಳಿ ಹಝ್ರತ್ ಉಮರ್(ರ) ಹಝ್ರತ್ ಅಮ್ರ್ ಬಿನ್ ಆಸ್‌ರಿಗೆ ಪತ್ರ ಬರೆದು ಅವರೊಡನೆ ಅವರ ಮಗನ ಜೊತೆಗೆ ಬರಲು ಆಜ್ಞಾಪಿಸಿದರು. ಹಝ್ರತ್ ಅಮ್ರ್ ಬಿನ್ ಆಸ್(ರ) ಬಂದಾಗ ಆ ಈಜಿಪ್ಟಿನ ವ್ಯಕ್ತಿಯೊಡನೆ ಹಝ್ರತ್ ಉಮರ್(ರ) ಹೇಳಿದರು: ಚಾವಟಿಯನ್ನು ಎತ್ತಿಕೋ ಮತ್ತು ಗೌರವಾನ್ವಿತ ವ್ಯಕ್ತಿಯ ಮಗನನ್ನು ಹೊಡೆ. ಆ ವ್ಯಕ್ತಿ ಅಮ್ರ್‌ನ ಮಗನನ್ನು ಹೊಡೆಯಲು ಶುರುಮಾಡಿದನು. ಹಝ್ರತ್ ಅನಸ್(ರ) ಹೇಳುತ್ತಾರೆ: ನಾವು ಅವನನ್ನು ಹೊಡೆಯುವುದನ್ನು ಇಷ್ಟಪಡುತ್ತಿದ್ದೆವು. ಆ ವ್ಯಕ್ತಿಯಾದರೋ ಅವನನ್ನು ನಿರಂತರವಾಗಿ ಹೊಡೆಯುತ್ತಿದ್ದನು. ಇನ್ನು ಬಿಟ್ಟು ಬಿಡಬೇಕೆಂದು ನಾವು ಕೂಡ ಬಯಸುವ ವರೆಗೂ ಆ ವ್ಯಕ್ತಿ ಅವನನ್ನು ಹೊಡೆದನು. ಅನಂತರ ಹಝ್ರತ್ ಉಮರ್(ರ) ಆ ಈಜಿಪ್ಟಿನ ವ್ಯಕ್ತಿಯೊಡನೆ ಹೇಳಿದರು: ಅಮ್ರ್ ಬಿನ್ ಆಸ್‌ನ ತಲೆಗೂ ಹೊಡೆ. ಆ ವ್ಯಕ್ತಿ ಹೇಳಿದನು: ಹೇ ಅಮೀರಲ್ ಮೂಮಿನೀನ್, ಅವರ ಮಗನು ನನ್ನನ್ನು ಹೊಡೆದಿದ್ದನು. ನಾನು ಅದರ ಪ್ರತೀಕಾರವನ್ನು ತೀರಿಸಿದ್ದೇನೆ. ಆಗ ಹಝ್ರತ್ ಉಮರ್(ರ) ಅಮ್ರ್ ಬಿನ್ ಆಸ್‌ರೊಡನೆ ಕೇಳಿದರು: ನೀವು ಯಾವತ್ತಿನಿಂದ ಜನರನ್ನು ಗುಲಾಮರನ್ನಾಗಿ ಮಾಡಿದ್ದೀಯ? ಸತ್ಯದಲ್ಲಿ ಅವರ ತಾಯಂದಿರು ಅವರನ್ನು ಸ್ವತಂತ್ರವಾಗಿ ಜನಸಿರುವರು ತಾನೇ? ಹಝ್ರತ್ ಅಮ್ರ್ ಬಿನ್ ಆಸ್(ರ) ಹೇಳಿದರು: ಹೇ ಅಮೀರಲ್ ಮೂಅ್‌ಮಿನೀನ್, ನನಗೆ ಈ ಘಟನೆಯ ಬಗ್ಗೆ ಗೊತ್ತಿರಲಿಲ್ಲ. ಮಾತ್ರವಲ್ಲ, ಆ ಈಜಿಪ್ಟಿನ ವ್ಯಕ್ತಿ ಈ ಬಗ್ಗೆ ದೂರು ಹೇಳಿ ನನ್ನ ಬಳಿಗೆ ಬಂದಿರಲಿಲ್ಲ. (ಕನ್‌ಝುಲ್ ಅಅ್‌ಮಾಲ್, ಕಿತಾಬುಲ್ ಫಝಾಇಲ್, ಸಂಪುಟ-10, ವರದಿ ಸಂಖ್ಯೆ-36005, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಒಮ್ಮೆ ಹಝ್ರತ್ ಉಮರ್‌ರ(ರ) ಬಳಿಗೆ ಸ್ವಲ್ಪ ಸಂಪತ್ತು ಬಂತು ಮತ್ತು ಅವರು ಅವುಗಳನ್ನು ಜನರಿಗೆ ವಿತರಿಸಲು ಶುರುಮಾಡಿದರು. ಜನರು ಕಿಕ್ಕಿರಿದು ತುಂಬಿದರು. ಎಂದರೆ ಗುಂಪಾಗಿ ದಟ್ಟಗಟ್ಟಿದರು. ಹಝ್ರತ್ ಸಅದ್ ಬಿನ್ ವಖಾಸ್(ರ) ಜನರೆಡೆಯಿಂದ ನುಗ್ಗುತ್ತಾ ಮುಂದಕ್ಕೆ ಬಂದರು ಮತ್ತು ಹಝ್ರತ್ ಉಮರ್‌ರ(ರ) ಸಮೀಪಕ್ಕೆ ತಲುಪಿದರು. ಹಝ್ರತ್ ಉಮರ್(ರ) ಅವರಿಗೆ ಬಡಿಗೆಯಿಂದ ಒಂದು ಏಟು ಕೊಟ್ಟರು ಮತ್ತು ಹೀಗೆ ಹೇಳಿದರು: ಭೂಮಿಯಲ್ಲಿರುವ ಅಲ್ಲಾಹನ ಪ್ರತಿನಿಧಿಗೆ, ಅಲ್ಲಾಹನ ಅರಸನಿಗೆ ನೀನು ಹೆದರುವುದಿಲ್ಲವೇ? ನೀನು ಜನಕೂಟವನ್ನು ಮುರಿಯುತ್ತಾ ಮುಂದಕ್ಕೆ ಬಂದಾಗ ಅಲ್ಲಾಹನ ಅರಸನು ಕೂಡ ನಿನಗೆ ಕಿಂಚಿತ್ತೂ ಹೆದರುವುದಿಲ್ಲವೆಂದು ನಾನು ನಿನ್ನೊಡನೆ ಹೇಳಲು ಬಯಸುತ್ತೇನೆ. (ಸೀರತ್ ಉಮರ್ ಬಿನ್ ಖತ್ತಾಬ್, ಮುಹಮ್ಮದ್ ಅಸ್ಸಲಾಬಿ, ಪುಟ-97, ದಾರುಲ್ ಮಾರಿಫ ಬೈರೂತ್)

ಹಝ್ರತ್ ಉಮರ್(ರ) ಎಷ್ಟು ಧೀರರಾಗಿದ್ದರು ಎಂಬುದರ ಬಗ್ಗೆ ಒಂದು ವರದಿಯಿದೆ. ಒಂದು ಬಾರಿ ಹಝ್ರತ್ ಉಮರ್(ರ) ಖುತ್ಬ ಕೊಡುತ್ತಾ ಹೇಳಿದರು: ಎಲೈ ಜನರೇ, ನಿಮ್ಮಲ್ಲಿ ಯಾರಾದರೂ ನನ್ನಲ್ಲಿ ವಕ್ರತೆ ಅಥವಾ ಡೊಂಕನ್ನು ಕಂಡರೆ ಅದನ್ನು ಸರಿಪಡಿಸಿರಿ. ಒಬ್ಬ ವ್ಯಕ್ತಿ ನಿಂತು ಹೀಗೆ ಹೇಳಿದನು: ನಾವು ನಿಮ್ಮಲ್ಲಿ ಏನಾದರೂ ವಕ್ರತೆಯನ್ನು ಕಂಡರೆ ಅದನ್ನು ನಾವು ನಮ್ಮ ಖಡ್ಗಗಳಿಂದ ನೇರವಾಗಿಸುವೆವು. ಹಝ್ರತ್ ಉಮರ್(ರ) ಹೇಳಿದರು: ಉಮರಿನ ವಕ್ರತೆಯನ್ನು ತಮ್ಮ ಖಡ್ಗಗಳಿಂದ ಸರಿಪಡಿಸುವಂತಹ ವ್ಯಕ್ತಿಯನ್ನು ಕೂಡ ಅಲ್ಲಾಹನು ಈ ಸಮುದಾಯದಲ್ಲಿ ಸೃಷ್ಟಿಸಿದ್ದಾನೆ ಎಂಬುದಕ್ಕೆ ನಾನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇನೆ. (ಸೀರತ್ ಉಮರ್ ಬಿನ್ ಖತ್ತಾಬ್, ಮುಹಮ್ಮದ್ ಅಸ್‌ಲಾಬಿ, ಪುಟ-107, ದಾರುಲ್ ಮಾರಿಫ ಬೈರೂತ್)

ಹಝ್ರತ್ ಉಮರ್(ರ) ಖುತ್ಬ ನೀಡುತ್ತಾ ಹೇಳಿದರು: ಒಳಿತಿನ ಆದೇಶವನ್ನು ನೀಡಿಕೊಂಡು, ಕೆಡುಕಿನಿಂದ ನನ್ನನ್ನು ರಕ್ಷಿಸಿ, ನನ್ನನ್ನು ಉಪದೇಶಿಸಿ ನನ್ನ ಸಹಾಯವನ್ನು ಮಾಡಿರಿ. (ಸೀರತ್ ಉಮರ್ ಬಿನ್ ಖತ್ತಾಬ್, ಅಲಿ ಮುಹಮ್ಮದ್ ಅಸ್ಸಲಾಬಿ, ಪುಟ-107, ದಾರುಲ್ ಮಾರಿಫ ಬೈರೂತ್)

ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಉಮರ್(ರ) ಹೇಳಿದರು: ನನ್ನ ನ್ಯೂನತೆಗಳ ಕುರಿತು ನನಗೆ ತಿಳಿಸಿಕೊಡುವವನು ನನಗೆ ಅತ್ಯಂತ ಪ್ರಿಯಕರ ವ್ಯಕ್ತಿಯಾಗಿರುವನು. (ಅತ್ತಬಖಾತುಲ್ ಕುಬ್ರ, ಸಂಪುಟ-3, ಪುಟ-222, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಉಮರ್(ರ) ಹೀಗೆ ಹೇಳಿದ್ದಾಗಿಯೂ ವರದಿಯಾಗಿದೆ: ನಾನು ತಪ್ಪು ಮಾಡಿದರೂ, ನನ್ನ ಮೇಲೆ ಇರುವ ಹೆದರಿಕೆ ಕಾರಣದಿಂದ ಜನರು ನನಗೆ ಸರಿಯಾದ ಮಾರ್ಗವನು ತೋರಿಸದೇ ಇರುವುದರ ಬಗ್ಗೆ ನಾನು ಭಯಪಡುತ್ತೇನೆ. (ಸೀರತ್ ಉಮರ್ ಬಿನ್ ಖತ್ತಾಬ್, ಅಲಿ ಮುಹಮ್ಮದ್ ಅಸ್ಸಲಾಬಿ, ಪುಟ-107, ದಾರುಲ್ ಮಾರಿಫ ಬೈರೂತ್)ಒಮ್ಮೆ ಹಝ್ರತ್ ಉಮರ್(ರ) ಖುತ್ಬ ನೀಡಲು ಜನರ ಮುಂದೆ ನಿಂತರು. ಎಲೈ ಜನರೇ, ಕೇಳಿರಿ ಮತ್ತು ಅನುಸರಿಸಿರಿ ಎಂದು ಮಾತ್ರ ಅವರು ಹೇಳುವಷ್ಟರಲ್ಲಿ ಒಬ್ಬ ವ್ಯಕ್ತಿ ಅವರ ಮಾತನ್ನು ಮುರಿಯುತ್ತಾ ಹೀಗೆ ಹೇಳಿದರು: ಹೇ ಉಮರ್, ನಾವು ಆಲಿಸುವುದೂ ಇಲ್ಲ, ನಾವು ಅನುಸರಿಸುವುದೂ ಇಲ್ಲ. ಹಝ್ರತ್ ಉಮರ್(ರ) ಅವನೊಡನೆ ಸೌಮ್ಯವಾಗಿ ಕೇಳಿದರು: ನೀನೇಕೆ ಹಾಗೆ ಹೇಳುತ್ತಿದ್ದೀಯ? ಅವನು ಹೇಳಿದನು: ಏಕೆಂದರೆ, ಬೈತುಲ್ ಮಾಲಿನಿಂದ ಎಲ್ಲರಿಗೂ ವಿತರಿಸಲಾದ ಬಟ್ಟೆಯಿಂದ ಜನರು ಕೇವಲ ನಿಲುವಂಗಿಯನ್ನು ತಯಾರಿಸಬಹುದಾಗಿತ್ತು. ಪೂರ್ಣ ಜೋಡಿಯನ್ನು ತಯಾರಿಸಲು ಬೇಕಾಗಿರುವ ಬಟ್ಟೆ ಇರಲಿಲ್ಲ. ನಿಮಗೂ ನಮಗೆ ಸಿಕ್ಕಿದಷ್ಟೇ ಬಟ್ಟೆ ಸಿಕ್ಕಿರಬಹುದಲ್ಲವೇ? ಹಾಗಾದರೆ ನೀವು ಹೇಗೆ ಜೋಡಿಯನ್ನು ತಯಾರಿಸಿದ್ದೀರಿ? ಅಲ್ಲೇ ನಿಂತಿರಲು ಹಝ್ರತ್ ಉಮರ್(ರ) ಅವನೊಡನೆ ಹೇಳಿದರು ಮತ್ತು ತನ್ನ ಮಗನಾದ ಅಬ್ದುಲ್ಲಾಹ್‌ರನ್ನು ಕರೆದರು. ಅಬ್ದುಲ್ಲಾಹ್ ಹೇಳಿದರು: ನಾನು ನನಗೆ ಲಭಿಸಿದ ಬಟ್ಟೆಯನ್ನು ನನ್ನ ತಂದೆಗೆ ಕೊಟ್ಟೆನು. ಅವರಿಗೆ ಪೂರ್ಣ ಜೋಡಿ ಬಟ್ಟೆ ತಯಾರಿಸಲು ಸಾಧ್ಯವಾಗಲು ನಾನು ಹಾಗೆ ಮಾಡಿದೆನು. ಇದನ್ನು ಕೇಳಿ ಎಲ್ಲರೂ ಸಮಾಧಾನಗೊಂಡರು ಮತ್ತು ಆ ವ್ಯಕ್ತಿ ಹೇಳಿದನು: ಎಲೈ ಅಮೀರಲ್ ಮೂಅ್‌ಮಿನೀನ್, ಈಗ ನಾನು ಆಲಿಸುವೆನು ಮತ್ತು ಅನುಸರಿಸುವೆನು. (ಸೀರತ್ ಉಮರ್ ಬಿನ್ ಖತ್ತಾಬ್, ಅಲಿ ಮುಹಮ್ಮದ್ ಬಿನ್ ಅಸ್ಸಲಾಬಿ, ಪುಟ-107, ದಾರುಲ್ ಮಾರಿಫ ಬೈರೂತ್)

ಇಂತಹ ಕೆಲವು ತಿಳಿಗೇಡಿಗಳು ಕೂಡ ಇರುತ್ತಾರೆ. ಹಝ್ರತ್ ಪೈಗಂಬರರಿಂದ(ಸ) ಧಾರ್ಮಿಕ ತರಬೇತಿ ಪಡೆದ ಸಹಾಬರ ನಾಲಗೆಗಳಿಂದ ಇಂತಹ ಒರಟುತನದ ಮಾತುಗಳು ಬರುವುದಾಗಿ ಎಂದಿಗೂ ಕಾಣಲು ಸಾಧ್ಯವಿಲ್ಲ. ಈ ಅಸಭ್ಯ ಮಾತುಗಳನ್ನು ಹೇಳುವವರು ತಡವಾಗಿ ಮುಸ್ಲಿಮರಾದ ಕೆಲವು

ಜನರಾಗಿರುತ್ತಾರೆ ಅಥವಾ ಗಮಾರರಾದ ಪೂರ್ಣವಾಗಿ ಅವಿದ್ಯಾವಂತರಾದ ತಿಳಿಗೇಡಿಗಳು ಆಗಿರುತ್ತಾರೆ. ಶ್ರೇಷ್ಠ ಸಹಾಬರಲ್ಲಿ ಇಂತಹ ಸಂಗತಿಗಳು ಇರಲಿಲ್ಲ. ಅವರು ಪರಿಪೂರ್ಣವಾಗಿ ಅನುಸರಿಸುತ್ತಿದ್ದರು.

ಇಸ್ಲಾಂ ಧಾರ್ಮಿಕ ವಿಷಯದಲ್ಲಿ ಸ್ವಾತಂತ್ರ್ಯವನ್ನು ನೀಡುತ್ತದೆ. ಈ ಸಂಬಂಧವಾಗಿ ಹಝ್ರತ್ ಉಮರರ(ರ) ರೀತಿ ಏನಾಗಿತ್ತು ಎಂದು ನೋಡಿರಿ. ಅಲೆಕ್ಸಾಂಡ್ರಿಯದ ಮೇಲೆ ವಿಜಯ ಸಾಧಿಸಿದ ಮೇಲೆ ಅಲ್ಲಿಯ ಅಧಿಕಾರಿ ಹಝ್ರತ್ ಅಮ್ರ್ ಬಿನ್ ಆಸ್‌ರಿಗೆ ಹೀಗೆ ಸಂದೇಶ ಕಳುಹಿಸಿದರು: "ಎಲೈ ಅರಬ್ ಸಮುದಾಯವೇ, ನಾನು ನಿಮಗಿಂತ ನೀಚರಾದ ಸಮುದಾಯಗಳಾದ ಇರಾನ್ ಮತ್ತು ರೋಮಿನ ಜನತೆಗೆ ಜಿಝ್ಯ ಪಾವತಿಸುತ್ತಿದ್ದೆ. ನೀವು ಇಷ್ಟಪಡುವುದಾದರೆ, ನಾನು ನಿಮಗೆ ಜಿಝ್ಯ ನೀಡಲು ತಯಾರಿದ್ದೇನೆ. ಆದರೆ ನೀವು ನನ್ನ ಪ್ರದೇಶದ ಯುದ್ಧಕೈದಿಗಳನ್ನು ನಮಗೆ ಹಿಂದಿರುಗಿಸಬೇಕು." ಎಲ್ಲ ವಿಷಯಗಳನ್ನು ಮತ್ತು ಅವಸ್ಥೆಗಳನ್ನು ಹಝ್ರತ್ ಅಮ್ರ್ ಬಿನ್ ಆಸ್(ರ) ಖಿಲಾಫತಿನ ಸನ್ನಿಧಿಗೆ ಬರೆದು ತಿಳಿಸಿದರು. ಹಝ್ರತ್ ಉಮರರ(ರ) ಜವಾಬು ಹೀಗೆ ಬಂತು: ಜಿಝ್ಯ ಪಾವತಿಸಲು ಅಲೆಕ್ಸಾಂಡ್ರಿಯದ ಅಧಿಕಾರಿಯೊಡನೆ ಹೇಳು. ಆದರೆ ಮುಸ್ಲಿಮರ ವಶದಲ್ಲಿ ಇರುವ ಬಂಧಿಗಳಿಗೆ, ಇಸ್ಲಾಂ ಸ್ವೀಕರಿಸಲು ಅಥವಾ ತಮ್ಮ ಜನತೆಯ ಧರ್ಮದಲ್ಲೇ ನೆಲೆನಿಲ್ಲುವ ಆಯ್ಕೆ ಮಾಡುವಂತೆ ಅಧಿಕಾರ ಕೊಡಿರಿ. ಅವರಲ್ಲಿ ಮುಸ್ಲಿಮರಾಗುವವರು ಮುಸ್ಲಿಮರಲ್ಲಿ ಸೇರುವರು ಮತ್ತು ಅವರ ಹಕ್ಕುಗಳು ಮತ್ತು ಕರ್ತವ್ಯಗಳು ಮುಸ್ಲಿಮರಂತೆಯೇ ಆಗಿರುವುದು. ತಮ್ಮ ಜನತೆಯ ಧರ್ಮದಲ್ಲಿ ನೆಲೆನಿಲ್ಲುವವರು ಆ ಧರ್ಮಾವಲಂಬಿಗಳಿಗೆ ನಿಶ್ಚಯಿಸಲಾದ ಜಿಝ್ಯ ಎಂದರೆ ಟಾಕ್ಸನ್ನು ಪಾವತಿಸಬೇಕು. ಹೀಗೆ ಅಮ್ರ್ ಬಿನ್ ಆಸ್(ರ) ಎಲ್ಲ ಕೈದಿಗಳನ್ನು ಒಟ್ಟುಗೂಡಿಸಿದರು ಮತ್ತು ಅವರಿಗೆ ಖಲೀಫರ ಸಂದೇಶವನ್ನು ಓದಿಹೇಳಿದರು. ಆಗ ಅನೇಕ ಬಂಧಿಗಳು ಮುಸ್ಲಿಮರಾದರು. (ತಾರೀಖ್ ಅತ್ತಿಬರಿ, ಸಂಪುಟ–2, ಪಉಟ–512–513, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಧಾರ್ಮಿಕ ಸ್ವಾತಂತ್ರ್ಯದ ಕುರಿತು ಹಝ್ರತ್ ಉಮರ್(ರ) ಎಷ್ಟು ಮುಂಜಾಗ್ರತೆ ವಹಿಸುತ್ತಿದ್ದರು ಎಂಬುದರ ಒಂದು ಘಟನೆಯಿದೆ. ಒಂದು ಬಾರಿ ಮುದುಕಿಯಾದ ಒಬ್ಬಳು ಕ್ರೈಸ್ತ ಮಹಿಳೆ ತನ್ನ ಯಾವುದೋ ಒಂದು ಆವಶ್ಯಕತೆಗಾಗಿ ಹಝ್ರತ್ ಉಮರ್‌ರ(ರ) ಬಳಿಗೆ ಬಂದರು. ಹಝ್ರತ್ ಉಮರ್(ರ) ಆ ಮಹಿಳೆಯೊಡನೆ ಹೇಳಿದರು: ಮುಸ್ಲಿಮಾದರೆ ನೀನು ಸುರಕ್ಷಿತಳಾಗುವಿ. ಅಲ್ಲಾಹನು ಮುಹಮ್ಮದ್ ಪೈಗಂಬರರನ್ನು ಸತ್ಯದೊಂದಿಗೆ ಕಳುಹಿಸಿದ್ದನು. ಮುದುಕಿ ಹೇಳಿದಳು: ನಾನು ವೃದ್ಧೆಯಾದ ಮಹಿಳೆಯಾಗಿರುವೆ. ಮರಣ ನನ್ನ ಸಮೀಪವಿದೆ. ಹಝ್ರತ್ ಉಮರ್(ರ) ಮುದುಕಿಯ ಆವಶ್ಯಕತೆಯನ್ನು ಈಡೇರಿಸಿ ಕೊಟ್ಟಿದ್ದರು. ಆದರೆ ಅವರ ಮಾತಿನಿಂದ ಅವಳಿಗಿರುವ ಆವಶ್ಯಕತೆಯನ್ನು ಮುಂದಿಟ್ಟುಕೊಂಡು ಅವಳನ್ನು ಮುಸ್ಲಿಮಾಗಲು ಒತ್ತಾಯ ಪಡಿಸಿದಂತೆ ಆಯಿತೋ ಎಂಬ ಭಯದ ಭಾವನೆಯಿಂದ ಹಝ್ರತ್ ಉಮರ್(ರ) ತಾನು ಹೇಳಿದ ಮಾತಿಗಾಗಿ ಅಲ್ಲಾಹನಲ್ಲಿ ಪಶ್ಚಾತ್ತಾಪ ಮಾಡಿದರು ಮತ್ತು ಹೀಗೆ ಹೇಳಿದರು: ಹೇ ಅಲ್ಲಾಹ್, ನಾನು ಅವಳಿಗೆ ಸರಿಯಾದ ಮಾರ್ಗವನ್ನು ತೋರಿಸಲು ಬಯಸಿದೆ ಅಷ್ಟೆ. ಅವಳನ್ನು ಮುಸ್ಲಿಮಾಗಲು ಒತ್ತಾಯ ಪಡಿಸಲಿಲ್ಲ. ಅವರಿಗೆ ಈ ಬಗ್ಗೆ ಇಷ್ಟು ಮುಂಜಾಗ್ರತೆಯಿತ್ತು. (ಸಯ್ಯಿದುನಾ ಉಮರ್ ಬಿನ್ ಖತ್ತಾಬ್, ಡಾ॥ ಅಲಿ ಮುಹಮ್ಮದ್ ಬಿನ್ ಅಸ್ಸಲಾಬಿ, ಪುಟ–101, ದಾರುಲ್ ಮಾರಿಫ ಬೈರೂತ್ 2007)

ಇನ್ನೊಂದು ಘಟನೆಯಿದೆ. ಹಝ್ರತ್ ಉಮರರ(ರ) ಒಬ್ಬ ಕ್ರೈಸ್ತ ಗುಲಾಮನಾದ ಅಶಿಕ್ ಎಂಬವನು ವರದಿ ಮಾಡುತ್ತಾರೆ: ನಾನು ಹಝ್ರತ್ ಉಮರ್‌ರ(ರ) ಗುಲಾಮನಾಗಿದ್ದೆ. ನನ್ನೊಡನೆ ಮುಸ್ಲಿಮನಾಗಲು ಅವರು ಹೇಳಿದರು. ಹಾಗಾದರೆ ಮುಸ್ಲಿಮರ ಕೆಲವು ವಿಷಯಗಳಲ್ಲಿ ನನ್ನಿಂದ ಸಹಾಯ ಪಡೆಯಬಹುದಾಗಿದೆ ಎಂದೂ ಹೇಳಿದರು. ಏಕೆಂದರೆ ಮುಸ್ಲಿಮರ ವಿಷಯದಲ್ಲಿ ಮುಸ್ಲಿಮೇತರರಿಂದ ಸಹಾಯ ಪಡೆಯುವುದು ಸಮಂಜಸವಲ್ಲ, ಅದು ನಮಗೆ ಸಂಬಂಧಿಸಿ ಸರಿಯೂ ಅಲ್ಲ. ಆದರೆ ನಾನು ಆ ಆಮಂತ್ರಣವನ್ನು ನಿರಾಕರಿಸಿದೆ. ಆಗ ಹಝ್ರತ್ ಉಮರ್(ರ) ಹೇಳಿದರು: **ಲಾ ಇಕ್ರಾಹ ಫಿದ್ದೀನ್.** ಇಸ್ಲಾಂ ಧರ್ಮದಲ್ಲಿ ಒತ್ತಾಯವಿಲ್ಲ. ಅವರ ಮರಣ ಸಮೀಪವಾದಾಗ ಅವರು ನನ್ನನ್ನು ಸ್ವತಂತ್ರಗೊಳಿಸಿದರು ಮತ್ತು ಇಷ್ಟವಿರುವ ಸ್ಥಳಕ್ಕೆ ಹೋಗಲು ನನ್ನೊಡನೆ ಹೇಳಿದರು. (ಸಯ್ಯಿದುನಾ ಉಮರ್ ಬಿನ್ ಖತ್ತಾಬ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಡಾ॥ ಅಲೀ ಮುಹಮ್ಮದ್ ಸಲಾಬಿ ಅನುವಾದ ಉರ್ದು, ಪುಟ–184, ಮಕ್ತಬತುಲ್ ಫುರ್‌ಖಾನ್, ಮುಝಫ್ಫರ್ ಗಡ್, ಪಾಕಿಸ್ತಾನ್)

ಮೃಗಗಳೊಂದಿಗೆ ಹಝ್ರತ್ ಉಮರ್(ರ) ದಯೆ ತೋರಿಸುತ್ತಿದ್ದ ಬಗ್ಗೆ ಒಂದು ಘಟನೆಯಿದೆ. ಅಹ್‌ನಫ್ ಬಿನ್ ಖೈಸ್ ವರದಿ ಮಾಡುತ್ತಾರೆ: ನಾವು ಅಮ್ರ್ ಬಿನ್ ಖತ್ತಾಬ್‌ರ ಬಳಿಗೆ ಒಂದು ಸಂಘವಾಗಿ ಮಹತ್ತಾದ ವಿಜಯದ ಸುವಾರ್ತೆಯೊಂದಿಗೆ ಹೋದೆವು. ನೀವೆಲ್ಲಿ ತಂಗಿರುವಿರಿ ಎಂದು ಹಝ್ರತ್ ಉಮರ್(ರ) ನಮ್ಮೊಡನೆ ಕೇಳಿದರು. ಇಂತಹ ಒಂದು ಜಾಗದಲ್ಲಿ ಎಂದು ನಾನು ಅವರೊಡನೆ ಹೇಳಿದೆ. ಆಗ ಅವರು ನನ್ನೊಡನೆ ಹೊರಟರು. ನಮ್ಮ ಸವಾರಿಮೃಗಗಳನ್ನು ಕಟ್ಟಿಡಲಾಗುವ ಸ್ಥಳದ ವರೆಗೆ ಅವರು ತಲುಪಿದರು. ಪ್ರತಿಯೊಂದು ಜಾನುವಾರುಗಳನ್ನು ಶ್ರದ್ಧೆಯಿಂದ ನೋಡಿದ ನಂತರ ಹೀಗೆ ಹೇಳಿದರು: ನೀವು ನಿಮ್ಮ ಸವಾರಿಮೃಗಗಳ ಕುರಿತು ಅಲ್ಲಾಹನಿಗೆ ಭಯಪಡುವುದಿಲ್ಲವೇ? ಅವುಗಳಿಗೂ ನಮ್ಮ ಮೇಲೆ ಹಕ್ಕಿದೆ ಎಂದು ನಿಮಗೆ ಗೊತ್ತಿಲ್ಲವೇ? ಹುಲ್ಲನ್ನು ತಿನ್ನಲಿಕ್ಕಾಗಿ ಅವುಗಳನ್ನು ಮೇಯಲು ನೀವೇಕೆ ಬಿಡುತ್ತಿಲ್ಲ? (ಸೀರತ್ ಉಮರ್ ಬಿನ್ ಖತ್ತಾಬ್, ಅಲಿ ಮುಹಮ್ಮದ್ ಅಸ್ಸಲಾಬಿ, ಪುಟ–171, ದಾರುಲ್ ಮಾರಿಫ ಬೈರೂತ್)

ಬಲಹೀನತೆ ಮತ್ತು ರೋಗದ ಲಕ್ಷಣಗಳು ಸ್ಪಷ್ಟವಾಗಿ ಇದ್ದ ಒಂದು ಒಂಟೆಯನ್ನು ಹಝ್ರತ್ ಉಮರ್(ರ) ಕಂಡರು. ಸಾಲಿಂ ಬಿನ್ ಅಬ್ದುಲ್ಲಾಹ್ ಹೇಳುತ್ತಾರೆ; ಹಝ್ರತ್ ಉಮರ್(ರ) ತನ್ನ ಕೈಯನ್ನು ಒಂಟೆಯ ಬೆನ್ನಲ್ಲಿ ಇದ್ದ ಒಂದು ಗಾಯದ ಬಳಿಯಲ್ಲಿ ಇಟ್ಟರು ಮತ್ತು ಹೀಗೆ ಹೇಳಿದರು: ನಿನ್ನ ಬಗ್ಗೆ ಅಲ್ಲಾಹನು ನನ್ನೊಡನೆ ಪ್ರಶ್ನಿಸುವನೋ ಎಂದು ನನಗೆ ಭಯವಿದೆ.
(ಅತ್ತಬಖಾತುಲ್ ಕುಬ್ರ, ಇಸ್ತೆಖ್ಲಾಫೆ ಉಮರ್, ಸಂಪುಟ–3, ಪುಟ–217, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಅಸ್ಲಂ ವರದಿ ಮಾಡುತ್ತಾರೆ: ಒಮ್ಮೆ ಹಝ್ರತ್ ಉಮರರಿಗೆ ತಾಜಾ ಮೀನು ತಿನ್ನುವ ಆಸೆ ಉಂಟಾಯಿತು. ಹಝ್ರತ್ ಉಮರರ ಗುಲಾಮನಾದ ಯರ್‌ಫಾಅ್ ಸವಾರಿಮೃಗದಲ್ಲಿ ಸವಾರರಾಗಿ ನಾಲ್ಕು ಮೈಲುಗಳಷ್ಟು ಸವಾರಿಮೃಗವನ್ನು ಓಡಿಸಿ ಒಂದು ಉತ್ತಮ ಮೀನನ್ನು ಖರೀದಿ ಮಾಡಿದರು. ಅನಂತರ ಸವಾರಿಮೃಗಕ್ಕೆ ಸ್ನಾನ ಮಾಡಿಸಿದನು. ಅಷ್ಟರಲ್ಲಿ ಹಝ್ರತ್ ಉಮರ್(ರ) ಕೂಡ ಅಲ್ಲಿಗೆ ಬಂದರು. ಅವರು ಸವಾರಿಮೃಗವನ್ನು ಕಂಡು ಹೀಗೆ ಹೇಳಿದರು: ನೀನು ಅದರ ಕಿವಿಗಳ ಅಡಿಯಲ್ಲಿರುವ ಬೆವರನ್ನು ತೊಳೆಯಲು ಮರೆತು ಬಿಟ್ಟಿದ್ದೀಯ. ನೀನು ಉಮರರ ಅಭಿಲಾಷೆಯನ್ನು ಈಡೇರಿಸಲು ಒಂದು ಮೃಗವನ್ನು ತೊಂದರೆಗೆ ಹಾಕಿದೆ. ಅಲ್ಲಾಹನಾಣೆ, ನಿನ್ನ ಈ ಮೀನನ್ನು ನಾನು ತಿನ್ನುವುದಿಲ್ಲ.
(ಕನ್‌ಝುಲ್ ಅಅ್‌ಮಾಲ್, ಕಿತಾಬ್ ಫಝಾಎಲ್, ಸಂಫುಟ–6, ಪುಟ–287, ವರದಿ ಸಂಖ್ಯೆ–35966, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಒಮ್ಮೆ ಹಝ್ರತ್ ಉಮರ್‌ರ(ರ) ಬಳಿಗೆ ಬೇಸಿಗೆಗಾಲದ ಮಧ್ಯಾಹ್ನ ಸಮಯದಲ್ಲಿ ಇರಾಕಿನಿಂದ ಒಂದು ಸಂಘ ಬಂದಿತು. ಅವರಲ್ಲಿ ಅಹ್ನಫ್ ಬಿನ್ ಖೈಸ್ ಸಹ ಇದ್ದರು. ಹಝ್ರತ್ ಉಮರ್(ರ) ತಲೆಗೆ ಮುಂಡಾಸನ್ನು ಕಟ್ಟಿ ಝಕಾತಿನ ಒಂಟೆಗಳಿಗೆ ಡಾಂಬರಿನಿಂದ ಗುರುತು ಹಾಕುತ್ತಿದ್ದರು. ಅವರು ಹೀಗೆ ಹೇಳಿದರು: ಎಲೈ ಅಹ್‌ನಫ್, ನಿನ್ನ ಮೇಲಂಗಿಯನ್ನು ಕಳಚಿ ನನ್ನ ಬಳಿಗೆ ಬಾ. ಈ ಒಂಟೆಗಳಿಗೆ ಗುರುತು ಹಾಕುವ ಕೆಲಸದಲ್ಲಿ ನನಗೆ ನೆರವಾಗು. ಇದರಲ್ಲಿ ಅನಾಥರಿಗೆ, ವಿಧವೆಗಳಿಗೆ ಮತ್ತು ನಿರ್ಗತಿಕರಿಗೆ ಹಕ್ಕಿದೆ. (ಕನ್‌ಝುಲ್ ಅಅ್‌ಮಾಲ್, ಸಂಪುಟ–3, ಪುಟ–303, ಕಿತಾಬುಲ್ ಖಿಲಾಪ, ಹದೀಸ್–14303, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಒಬ್ಬ ಯಹೂದಿಗೆ ಹಝ್ರತ್ ಉಮರ್(ರ) ಕೊಟ್ಟ ಉತ್ತರದ ಬಗ್ಗೆ ಒಂದು ವರದಿಯಿದೆ. ತಾರಿಕ್ ಹಝ್ರತ್ ಉಮರ್ ಬಿನ್ ಖತ್ತಾಬ್‌ರಿಂದ(ರ) ವರದಿ ಮಾಡುತ್ತಾರೆ: ಯಹೂದಿಯರಲ್ಲಿ ಒಬ್ಬ ವ್ಯಕ್ತಿ ಅವರೊಂದಿಗೆ ಹೀಗೆ ಹೇಳಿದರು: ಅಮೀರಲ್ ಮೂಮಿನೀನ್, ನಿಮ್ಮ ಗ್ರಂಥದಲ್ಲಿ ಒಂದು ಆಯತ್ತಿದೆ. ಅದನ್ನು ನೀವು ಓದುತ್ತೀರಿ. ಅದು ಯಹೂದಿಯರಿಗೆ ಅವತೀರ್ಣವಾಗಿದ್ದರೆ ನಾವು ಆ ದಿನವನ್ನು ಹಬ್ಬವಾಗಿ ಆಚರಿಸುತ್ತಿದ್ದೆವು. ಆ ವಚನ ಯಾವುದೆಂದು ಹಝ್ರತ್ ಉಮರ್(ರ) ಕೇಳಿದರು. ಅವನು ಹೇಳಿದನು: **ಅಲ್‌ಯೌಮ ಅಕ್‌ಮಲ್‌ತು ಲಕುಂ ದೀನಕುಂ ವ ಅತ್‌ಮಮ್‌ತು ಅಲೈಕುಂ ನಿಅ್‌ಮತೀ ವ ರಝೀತು ಲಕುಮುಲ್ ಇಸ್ಲಾಮ ದೀನಾ.** ಎಂದರೆ ಈ ದಿನ ನಿಮ್ಮ ಧರ್ಮವನ್ನು ನಿಮಗೆ ನಾನು ಪರಿಪೂರ್ಣಗೊಳಿಸಿರುವೆನು; ನನ್ನ ಅನುಗ್ರಹವನ್ನು ನಿಮಗೆ ಸಂಪೂರ್ಣವಾಗಿ ದಯಪಾಲಿಸಿರುವೆನು ಹಾಗೂ ಇಸ್ಲಾಮನ್ನು ನಿಮಗೆ ಧರ್ಮವಾಗಿ ಇಷ್ಟಪಟ್ಟಿರುವೆನು. ಆಗ ಹಝ್ರತ್ ಉಮರ್(ರ) ಅದಕ್ಕೆ ಹೀಗೆ ಉತ್ತರಿಸಿದರು: ನಮಗೆ ಆ ದಿನದ ಬಗ್ಗೆ ಗೊತ್ತಿದೆ ಮತ್ತು ಈ ವಚನ ಅವತೀರ್ಣವಾದ ಜಾಗವೂ ನಮಗೆ ಗೊತ್ತಿದೆ. ಆಗ ಹಝ್ರತ್ ಪೈಗಂಬರ್(ಸ) ಜುಮಾದ ದಿನದಂದು ಅರಫಾತಿನಲ್ಲಿ ನಿಂತಿದ್ದರು. (ಸಹೀಹ್ ಬುಖಾರಿ, ಕಿತಾಬುಲ್ ಈಮಾನ್, ಹದೀಸ್–45)

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಕುರಿತು ಹೇಳುತ್ತಾರೆ: ಹಝ್ರತ್ ಉಮರ್‌ರೊಡನೆ(ರ) ಒಬ್ಬ ಯಹೂದಿ ಹೇಳಿದನು: ಪವಿತ್ರ ಖುರ್‌ಆನಿನಲ್ಲಿ ಒಂದು ವಚನವಿದೆ. ಅದು ನಮ್ಮ ಗ್ರಂಥದಲ್ಲಿ ಅವತೀರ್ಣವಾಗಿದ್ದರೆ ನಾವು ಆ ದಿನವನ್ನು ಹಬ್ಬವಾಗಿ ಆಚರಿಸುತ್ತಿದ್ದೆವು. ಅದು ಯಾವ ವಚನವೆಂದು ಹಝ್ರತ್ ಉಮರ್(ರ) ಅವನೊಡನೆ ಕೇಳಿದರು. ಅವನು ಹೇಳಿದನು: **ಅಲ್‌ಯೌಮ ಅಕ್‌ಮಲ್‌ತು ಲಕುಂ ದೀನಕುಂ.** ಆಗ ಹಝ್ರತ್ ಉಮರ್(ರ) ಹೇಳಿದರು: ಆ ದಿನ ನಮಗೆ ಎರಡು ಹಬ್ಬಗಳ ದಿನವಾಗಿದೆ. ಏಕೆಂದರೆ ಈ ವಚನ ಅರಫಾದ ದಿನಗಳಲ್ಲಿ ಜುಮಾ ದಿವಸ ಅವತೀರ್ಣವಾಗಿತ್ತು. (ತಫ್ಸೀರೆ ಕಬೀರ್, ಸಂಪುಟ–4, ಪುಟ–6)

ಕೆಲವು ಹಿರಿಯರು ಹಝ್ರತ್ ಉಮರ್‌ರ(ರ) ಕುರಿತು ಹೇಳುತ್ತಾರೆ. ಅಶ್‌ಅಶ್ ವರದಿ ಮಾಡುತ್ತಾರೆ – ಇಮಾಂ ಶುಅಬಿ ಹೀಗೆ ಹೇಳುತ್ತಿರುವುದಾಗಿ ನಾನು ಆಲಿಸಿದೆ: ಜನರು ಯಾವುದಾದರೂ ವಿಷಯದಲ್ಲಿ ಭಿನಾಭಿಪ್ರಾಯ ಹೊಂದುವರಾದರೆ, ಹಝ್ರತ್ ಉಮರ್(ರ) ಈ ಸಮಸ್ಯೆಗೆ ಏನು ಪರಿಹಾರ ಮಾಡಿದ್ದರು ಎಂದು ನೋಡಿರಿ. ಏಕೆಂದರೆ ಹಝ್ರತ್ ಉಮರ್(ರ) ಸಮಾಲೋಚನೆ ನಡೆಸದೇ ಯಾವುದೇ ಕೆಲಸ ಮಾಡುತ್ತಿರಲಿಲ್ಲ. (ಹುಲ್ಯತುಲ್ ಔಲಿಯಾ, ಸಂಪುಟ–4, ಪುಟ–304–305, ವರದಿ ಸಂಖ್ಯೆ–5841, ಮಕ್ತಬತುಲ್ ಈಮಾನ್ 2007)

ಇಮಾಂ ಶೋಬಿ ಹೇಳುತ್ತಾರೆ: ಹಝ್ರತ್ ಖುಬೈಸ ಬಿನ್ ಜಾಬಿರ್ ಹೀಗೆ ಹೇಳುತ್ತಿರುವುದಾಗಿ ಕೇಳಿದ್ದೇನೆ: ನಾನು ಉಮರ್ ಬಿನ್ ಖತ್ತಾಬ್‌ರ ಜೊತೆಗೆ ಇದ್ದ ವ್ಯಕ್ತಿಯಾಗಿರುವೆನು. ನಾನು ಅವರಿಗಿಂತ ಹೆಚ್ಚು ಪವಿತ್ರ ಖುರ್‌ಆನ್ ಓದುವ, ಧಾರ್ಮಿಕ ಅರಿವು ಇರುವ, ಅವರಿಗಿಂತ ಉತ್ತಮವಾಗಿ ಪವಿತ್ರ ಖುರ್‌ಆನಿನ ಪಾಠಗಳನ್ನು ಹೇಳಿಕೊಡುವ ಬೇರೆ ಯಾರನ್ನೂ ಕಂಡಿಲ್ಲ. (ತಾರೀಖ್

ದಮಿಷ್ಕ್ ಅಲ್‌ಕಬೀರ್ ಲಿಇಬ್ನೆ ಅಸಾಕಿರ್, ಸಂಪುಟ–11, ಭಾಗ–21, ಪುಟ–128, ದಾರ್ ಅಹ್ಯಾಉತ್ತುರಾಸುಲ್ ಅರಬಿ, ಅತ್ತಬಅತುಲ್ ಊಲ 2001)

ಹಸನ್ ಬಸ್ರಿ ಹೇಳುತ್ತಾರೆ: ನೀವು ನಿಮ್ಮ ಸಭೆಯನ್ನು ಸುವಾಸನೆಭರಿತವನ್ನಾಗಿ ಮಾಡಲು ಬಯಸುವುದಾದರೆ ಹಝ್ರತ್ ಉಮರರ ಪ್ರಸ್ತಾಪ ಹೆಚ್ಚಾಗಿ ಮಾಡಿರಿ. (ಸೀರತ್ ಉಮರ್ ಬಿನ್ ಅಲ್‌ಖತ್ತಾಬ್, ಇಬ್ನೆ ಜೂಝಿ, ಪುಟ–217, ಮಿಸ್ರಿಯತುಲ್ ಅಝ್‌ಹರ್)

ಮುಜಾಹಿದ್ ವರದಿ ಮಾಡುತ್ತಾರೆ: ನಿಸ್ಸಂಶಯವಾಗಿಯೂ ಹಝ್ರತ್ ಉಮರರ(ರ) ಕಾಲದಲ್ಲಿ ಶೈತಾನ್‌ಗಳನ್ನು ಕಟ್ಟಿಡಲಾಗಿದ್ದುವು ಮತ್ತು ಹಝ್ರತ್ ಉಮರ್(ರ) ಶಹೀದ್ ಆದಾಗ ಶೈತಾನ್‌ಗಳು ಜಿಗಿಯಲು ಶುರುಮಾಡಿದುವು ಎಂದು ನಾವು ಪರಸ್ಪರ ಹೇಳುತ್ತಿದ್ದೆವು. ಎಂದರೆ ಕುತಂತ್ರಗಳು ಮತ್ತು ತಪ್ಪಾದ ಕೆಲಸಗಳು ಆ ಕಾಲಘಟ್ಟದಲ್ಲಿ ನಡೆಯುತ್ತಿರಲಿಲ್ಲ. (ಸೀರತ್ ಉಮರ್ ಬಿನ್ ಅಲ್‌ಖತ್ತಾಬ್, ಇಬ್ನೆ ಜೂಝಿ, ಪುಟ–217, ಮಿಸ್ರಿಯತುಲ್ ಅಝ್‌ಹರ್)

ಹಝ್ರತ್ ಉಮರ್‌ರಿಗೆ(ರ) ಕವಿತೆಗಳು ಬಹಳ ಇಷ್ಟವಾಗಿತ್ತು. ಸ್ವತಃ ಕಾವ್ಯರಚನೆ ಮಾಡುತ್ತಿರಲಿಲ್ಲ. ಸ್ವತಃ ಕವಿತೆಗಳನ್ನು ಬರೆಯುತ್ತಿರಲಿಲ್ಲ. ಆದರೆ ಕವಿತೆಗಳನ್ನು, ಪದ್ಯಪಂಕ್ತಿಗಳನ್ನು ಆಲಿಸುವುದನ್ನು ಇಷ್ಟಪಡುತ್ತಿದ್ದರು. ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್(ರ) ಹೇಳುತ್ತಾರೆ: ನಾನು ಹಝ್ರತ್ ಉಮರ್‌ರೊಂದಿಗೆ(ರ) ಒಂದು ಯಾತ್ರೆಗೆ ಹೊರಟೆನು. ಒಂದು ರಾತ್ರಿ ನಾವು ನಡೆಯುತ್ತಿದ್ದಾಗ ನಾನು ಅವರ ಸಮೀಪಕ್ಕೆ ಹೋದೆನು. ಆಗ ಅವರು ಹೀಗೆ ಪದ್ಯಪಂಕ್ತಿಗಳನ್ನು ಹೇಳುತ್ತಿದ್ದರು:

**ಕಝ಼ಬ್ತುಮ್ ವ ಬೈತುಲ್ಲಾಹ ವಯಖ್‌ತುಲು ಅಹ್ಮದ್**
**ವಲಮ್ಮಾ ನತಾಉನು ದೂನಹೂ ವ ನನಾಝ಼ಿಲು**
**ವಸುಲ್ಲಿಮೂ ಹತ್ತಾ ನಸರು ಹೌಲಹೂ,**
**ವನಝ್‌ಹಲು ಅನ್ ಅಬ್‌ನಾಉ ವಲ್‌ಹಲಾಇಲ್**
**ವಮಾ ಹಮಲತ್ ನಾಖತುನ್ ಫೌಖ ರಿಹ್‌ಲಿಹಾ**
**ಅಬರ್ರ್ ವ ಔಫಾ ಧಿಮ್ಮತನ್ ಮಿನ್ ಮುಹಮ್ಮದ್(ಸ)**

ಎಂದರೆ, ನೀವು ಸುಳ್ಳುಹೇಳುತ್ತಿದ್ದೀಯ. ಅಲ್ಲಾಹನ ಭವನವಾದ ಬೈತುಲ್ಲಾಹ್‌ದ ಆಣೆ, ನಾವು ಅವರ ಸಂರಕ್ಷಣೆಗಾಗಿ ಬಿಲ್ಲುಗಾರಿಕೆ ಮತ್ತು ಖಡ್ಗದ ಕೌಶಲವನ್ನು ತೋರಿಸುವ ವರೆಗೆ ಹಝ್ರತ್ ಪೈಗಂಬರ್(ಸ) ಶಹೀದ್ ಆಗಲು ಸಾಧ್ಯವಿಲ್ಲ. ನಾವು ಅವರ ಸಮೀಪದಲ್ಲಿ ಯುದ್ಧಮಾಡುತ್ತಾ ಕೊಲ್ಲಲ್ಪಡುವ ತನಕ ಮತ್ತು ನಮ್ಮ ಮಕ್ಕಳನ್ನು ಮತ್ತು ಕುಟುಂಬವನ್ನು ಮರೆತು ಬಿಡುವ ತನಕ ನಾವು ಅವರನ್ನು ಬಿಟ್ಟುಬಿಡುವುದಿಲ್ಲ. ಯಾವುದೇ ಒಂಟೆ ತನ್ನ ಬೆನ್ನ ಮೇಲೆ ಹಝ್ರತ್ ಮುಹಮ್ಮದ್ ಪೈಗಂಬರ್‌ಗಿಂತ(ಸ) ಹೆಚ್ಚು ಸತ್ಕರ್ಮಗಳನ್ನು ಮಾಡುವ ಮತ್ತು ವಾಗ್ದಾನವನ್ನು ಈಡೇರಿಸುವ ವ್ಯಕ್ತಿಯನ್ನು ಕುಳ್ಳಿರಿಸಿಲ್ಲ. (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–577, ದಅರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್–2012)

ಒಬ್ಬ ಚರಿತ್ರೆಗಾರನಾದ ಅಲಿ ಮುಹಮ್ಮದ್ ಸಲಾಬಿ ತನ್ನ ಪುಸ್ತಕವಾದ ಸಯ್ಯಿದುನಾ ಉಮರ್ ಬಿನ್ ಖ಼ತ್ತಾಬ್ ಉನ್‌ಕೀ ಶಖ಼್ಸಿಯತ್ ಓರ್ ಕಾರ್‌ನಾಮೆಯಲ್ಲಿ ಹಝ್ರತ್ ಉಮರ್‌ರಿಗೆ(ರ) ಕಾವ್ಯದಲ್ಲಿ ಇದ್ದ ಅಭಿರುಚಿಯ ಬಗ್ಗೆ ಹೀಗೆ ಬರೆಯುತ್ತಾರೆ: ಖ಼ಲೀಫರಲ್ಲಿ ಅತ್ಯಂತ ಹೆಚ್ಚಾಗಿ ಕವಿತೆಗಳ ಮೂಲಕ ಉದಾಹರಣೆಗಳನ್ನು ಕೊಡುವವರು ಹಝ್ರತ್ ಉಮರ್(ರ) ಆಗಿದ್ದರು. ಅವರ ಕುರಿತು ಕೆಲವರು ಎಲ್ಲಿಯವರೆಗೆ ಬರೆದಿರುವರು ಎಂದರೆ, ಬಹುಶಃ ಅವರ ಮುಂದೆ ಬರುವ ಹೆಚ್ಚುಕಮ್ಮಿ ಎಲ್ಲ ವಿಷಯಗಳಿಗೆ ಸಂಬಂಧಿಸಿಯೂ ಅವರು ಪದ್ಯ ಹೇಳುತ್ತಿದ್ದರು ಎಂದು ಹೇಳುತ್ತಿದ್ದರು. ಒಂದು ಬಾರಿ ಅವರು ಹೊಸ ವಸ್ತ್ರಗಳನ್ನು ಧರಿಸಿ ಮನೆಯಿಂದ ಹೊರಟರು. ಜನರು ಅವರನ್ನು ಬಹಳ ಸೂಕ್ಷ್ಮವಾಗಿ ನೋಡುತ್ತಿದ್ದರು. ಆಗ ಅವರು ಉದಾಹರಣೆ ನೀಡುತ್ತಾ ಹೀಗೆ ಪದ್ಯ ಹೇಳಿದರು:

**ಲಮ್ ತುಗ್‌ನಿ ಅನ್ ಹರ್‌ಮಝ್ಝ್ ಖ಼ಝ್ಝಾಇನುಹೂ**
**ವಲ್‌ಖ಼ುಲ್‌ದು ಖ಼ದ್ ಹಾವಲತ್ ಆದ ಫಮಾ ಖ಼ುಲ್‌ದವಾ;**
**ಐನುಲ್ ಮುಲೂಕಿ ಅಲ್ಲತೀ ಕಾನತ್ ಲಿಇಝ್ಝತಿಹಾ**
**ಮಿನ್‌ಕುಲ್ಲಿ ಔಬಿ ಇಲೈಹಾ ರಾಕಿಬ್ ಯಫದ್**.

ಎಂದರೆ, ಮರಣದ ಸಮಯದಲ್ಲಿ ಹರ್ಮಝ್ಝನಿಗೆ ಅವನ ಖಜಾನೆಯು ಯಾವುದೇ ಪ್ರಯೋಜನ ನೀಡಲಿಲ್ಲ ಮತ್ತು ಆದ್ ಸಮುದಾಯವು ಯಾವಾಗಲೂ ನೆಲೆಸಲು ಬಯಸಿದ್ದರು. ಆದರೆ ಅವರು ಸದಾ ಇರಲಿಲ್ಲ. ಯಾವ ಅರಸನ ಕಾರಂಜಿಗಳಿಂದ ಎಲ್ಲ ಕಡೆಗಳಿಂದಲೂ ಬರುವ ಯಾತ್ರಾಸಂಘಗಳು ನೀರನ್ನು ಕುಡಿಯುತ್ತಿದ್ದರೋ ಆ ಅರಸನು ಎಲ್ಲಿಗೆ ಹೋದನು.

ಅಲಿ ಮುಹಮ್ಮದ್ ಸಲಾಬಿ ಬರೆಯುತ್ತಾರೆ: ಇಸ್ಲಾಮಿನ ಜೀವಿತದ ಕೌಶಲವನ್ನು ಹೊರಹೊಮ್ಮಿಸುವ ಮತ್ತು ಇಸ್ಲಾಮಿನ ವೈಶಿಷ್ಟ್ಯಗಳನ್ನು ಪ್ರತಿಬಿಂಬಿಸುವ ಹಾಗೂ ಯಾವುದರ ಅರ್ಥಗಳು ಇಸ್ಲಾಮಿಕ ಪಾಠಗಳ ಮತ್ತು ರೀತಿಗಳ ವಿರುದ್ಧವಾಗಿರದ ಕವಿತೆಗಳನ್ನು ಹಝ್ರತ್ ಉಮರ್(ರ) ಇಷ್ಟಪಡುತ್ತಿದ್ದರು. ಅತ್ಯುತ್ತಮ ಪದ್ಯಗಳನ್ನು ಕಂಠಪಾಠ ಮಾಡಲು ಹಝ್ರತ್ ಉಮರ್(ರ) ಮುಸ್ಲಿಮರನ್ನು ಹುರಿದುಂಬಿಸುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು: ಕವಿತೆಗಳನ್ನು ಕಲಿಯಿರಿ, ನಾವು ಹುಡುಕುವ ಒಳಿತುಗಳು ಅವುಗಳಲ್ಲಿ ಇರುತ್ತವೆ ಮತ್ತು ಜ್ಞಾನಿಗಳ ವಿವೇಕಯುತ ಮಾತುಗಳು ಅವುಗಳಲ್ಲಿ ಇರುತ್ತವೆ. ಸಭ್ಯ ಸ್ವಭಾವಗಳ ಕಡೆಗೆ ಅವು ದಾರಿ ತೋರಿಸುತ್ತವೆ. ಪದ್ಯಗಳ ಪ್ರಯೋಜನಗಳ ಬಗ್ಗೆ ಅವರು ಇಷ್ಟು ಮಾತ್ರ ಹೇಳಿಲ್ಲ, ಬದಲಾಗಿ ಪದ್ಯವನ್ನು ಹೃದಯಗಳ ಕೀಲಿಗೈ ಮತ್ತು ಮನುಷ್ಯ ಶರೀರದಲ್ಲಿ ಒಳಿತಿನ ಭಾವನೆ ಉಂಟು ಮಾಡುವ ಸಂಗತಿಯೆಂದು ಭಾವಿಸುತ್ತಿದ್ದರು. ಮನುಷ್ಯನ ಅತ್ಯುತ್ತಮ ಕಲೆ ಕಾವ್ಯರಚನೆಯಾಗಿದೆ ಮತ್ತು ಅದನ್ನು ಮನುಷ್ಯನು ತನ್ನ ಆವಶ್ಯಾನುಸಾರ ಉಪಯೋಗಿಸುತ್ತಾನೆ. ಅದು ಕರುಣಾಳು ಮತ್ತು ಉದಾರಿ ವ್ಯಕ್ತಿಯ ಹೃದಯವನ್ನು ಮೃದುಗೊಳಿಸುತ್ತದೆ ಹಾಗೂ ದುಷ್ಟ ವ್ಯಕ್ತಿಯ ಹೃದಯವನ್ನು ತನ್ನೆಡೆಗೆ ಸೆಳೆಯುತ್ತದೆ ಎಂದೂ ಅವರು ಹೇಳಿದ್ದರು.

ಇಸ್ಲಾಮಿನ ಮುಂಚಿನ ಕವಿಗಳ ಕಾವ್ಯಗಳನ್ನು ಕೂಡ ಹಝ್ರತ್ ಉಮರ್(ರ) ಆಸಕ್ತಿಯಿಂದ ಕಂಠಪಾಠ ಮಾಡುತ್ತಿದ್ದರು. ಏಕೆಂದರೆ ಅವುಗಳಿಗೆ ದೈವಿಕ ಗ್ರಂಥದ ಜ್ಞಾನದೊಂದಿಗೆ ಆಳವಾದ ಸಂಬಂಧವಿತ್ತು. ಪವಿತ್ರ ಖುರ್‌ಆನನ್ನು ಅರಿಯಲು ಅವು ಸಹಾಯಕವಾಗಿದ್ದುವು. ಹಝ್ರತ್ ಉಮರ್(ರ) ಹೇಳಿದರು: ನೀವು ನಿಮ್ಮ ದೀವಾನನ್ನು ಬಾಯಿಪಾಠ ಮಾಡಿರಿ ಮತ್ತು ದಾರಿಗೆಡದಿರಿ. ನಮ್ಮ ದೀವಾನ್ ಯಾವುದು ಎಂದು ಕೇಳುಗರಲ್ಲಿ ಒಬ್ಬರು ಪ್ರಶ್ನಿಸಿದರು. ಆಗ ಅವರು ಹೇಳಿದರು: ಜಾಹಿಲಿಯಾ ಕಾಲದ ಪದ್ಯಗಳು. ಅವುಗಳಲ್ಲಿ ಪವಿತ್ರ ಖುರ್‌ಆನಿನ ವ್ಯಾಖ್ಯಾನ ಮತ್ತು ಅರ್ಥವಿವರಣೆಯಿವೆ. ಹಝ್ರತ್ ಉಮರ್‌ರ(ರ) ಈ ಹೇಳಿಕೆಯು ಅವರ ಶಿಷ್ಯರೂ ಖುರ್‌ಆನ್ ವ್ಯಾಖ್ಯಾನಗಾರರು ಆದ ಅಬ್ದುಲ್ಲಾಹ್ ಬಿನ್ ಅಬ್ಬಾಸ್‌ರ ನಿಲುವಿನೊಂದಿಗೆ ಒಮ್ಮತಾಭಿಪ್ರಾಯ ಹೊಂದಿದೆ. ಅಬ್ದುಲ್ಲಾಹ್ ಬಿನ್ ಅಬ್ಬಾಸ್ ಹೀಗೆ ಹೇಳಿದ್ದರು ಪವಿತ್ರ ಖುರ್‌ಆನನ್ನು ಓದಿರಿ ಮತ್ತು ಅದನ್ನು ಅರ್ಥ ಗೊತ್ತಾಗದಿದ್ದರೆ, ಅದನ್ನು ಮನವರಿಕೆ ಮಾಡಲಿಕ್ಕಾಗಿ, ಅದರ ವ್ಯಾಖ್ಯಾನವನ್ನು ಅರೇಬಿಯರ ಪದ್ಯಗಳಲ್ಲಿ ಹುಡುಕಿರಿ. ಏಕೆಂದರೆ ಕಾವ್ಯ ಅರೇಬಿಯರ ದೀವಾನ್ ಆಗಿದೆ. (ಸೀರತ್ ಉಮರ್ ಬಿನ್ ಖತ್ತಾಬ್ ಶಖ಼್ಸೀಯತ್ ಔರ್ ಕಾರ್ನಾಮೆ (ಅನುವಾದ), ಅಲಿ ಮುಹಮ್ಮದ್ ಸಲಾಬಿ, ಪುಟ–336, ಮಕ್ತಬತುಲ್ ಫುರ್ಖಾನ್, ಮುಝಫರ್ ಗಡ್, ಪಾಕಿಸ್ತಾನ್)

ಭಾರತ ಪಾಕಿಸ್ತಾನ ಉಪಭೂಖಂಡದ ಪ್ರಸಿದ್ಧ ಚರಿತ್ರೆಗಾರ ಅಲ್ಲಾಮ ಶಿಬ್‌ಲಿ ನೂಮಾನಿ ತನ್ನ ಪುಸ್ತಕವಾದ ಅಲ್‌ಫಾರೂಖಿನಲ್ಲಿ ಹಝ್ರತ್ ಉಮರ್‌ರಿಗೆ(ರ) ಕಾವ್ಯ ಮತ್ತು ಪದ್ಯಪಂಕ್ತಿಗಳಲ್ಲಿ ಇದ್ದ ಅಭಿರುಚಿಯನ್ನು ಪ್ರಸ್ತಾಪಿಸುತ್ತಾ ಬರೆಯುತ್ತಾರೆ: ಕವಿತೆಗಳಿಗೆ ಸಂಬಂಧಿಸಿ ಹಝ್ರತ್ ಉಮರ್(ರ) ಸಾಮಾನ್ಯವಾಗಿ ಅಷ್ಟು ಪ್ರಸಿದ್ಧರಾಗಿರಲಿಲ್ಲ. ಅವರು ಕಾವ್ಯರಚನೆ ಬಹಳ ಕಡಿಮೆ ಮಾಡಿರಬಹುದು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಅವರಿಗೆ ಕಾವ್ಯದೊಂದಿಗೆ ಅವರಿಗೆ ಎಷ್ಟು ಅಭಿರುಚಿಯಿತ್ತು ಎಂದರೆ, ಅವರ ಜೀವನಚರಿತ್ರೆಯಿಂದ ಇದನ್ನು ಬಿಟ್ಟುಬಿಡಲು ಸಾಧ್ಯವಲ್ಲ. ಅರೇಬಿಯದ ಪ್ರಸಿದ್ಧ ಕವಿಗಳ ಬಹಳಷ್ಟು ಕವಿತೆಗಳು ಅವರಿಗೆ ಕಂಠಪಾಠವಾಗಿತ್ತು ಮತ್ತು ಎಲ್ಲ ಕವಿಗಳ ಪದ್ಯಗಳ ಬಗ್ಗೆ ಅವರು ವಿಶೇಷವಾದ ಅಭಿಪ್ರಾಯಗಳನ್ನು ಹೊಂದಿದ್ದರು. ಅವರಿಗಿಂತ ಹೆಚ್ಚಾಗಿ ಪದ್ಯಗಳನ್ನು ಹೇಳುವವರು ಅರೇಬಿಯರಲ್ಲಿ ಯಾರೂ ಇರಲಿಲ್ಲವೆಂದು ಅರಬ್ ನಿವಾಸಿಗಳು ಸಾಮಾನ್ಯವಾಗಿ ಒಪ್ಪುವ ಸಂಗತಿಯಾಗಿದೆ.

ಜಾಹಿಝ್ ತನ್ನ ಪುಸ್ತಕವಾದ **ಅಲ್‌ಬಯಾನ್ ವತ್ತಿಬ್‌ಯಾನಿ**ನಲ್ಲಿ ಹೀಗೆ ಬರೆದಿರುವರು: ಹಝ್ರತ್ ಉಮರ್ ಬಿನ್ ಖತ್ತಾಬ್(ರ) ತನ್ನ ಕಾಲದ ಅತ್ಯಂತ ಹೆಚ್ಚು ಕಾವ್ಯಗಳ ಅರಿವುಳ್ಳವರಾಗಿದ್ದರು. ಹಝ್ರತ್ ಉಮರ್‌ರಿಗೆ ಕಾವ್ಯಗಳೊಂದಿಗೆ ಇದ್ದ ಅಭಿರುಚಿ ಎಷ್ಟಿತ್ತು ಎಂದರೆ, ಉತ್ತಮ ಪದ್ಯಗಳನ್ನು ಆಲಿಸಿದರೆ, ಅದನ್ನು ಪದೇ ಪದೇ ಆಸಕ್ತಿಯಿಂದ ಹೇಳುತ್ತಿದ್ದರು. ಖ಼ಿಲಾಫತಿನ ಪ್ರಧಾನ ಕೆಲಸಗಳ ಕಾರಣದಿಂದ ಅಂತಹ ವಿಷಯಗಳಲ್ಲಿ ತಲ್ಲೀನರಾಗಲು ಅವರಿಗೆ ಸಂದರ್ಭ ಸಿಗುತ್ತಿರಲಿಲ್ಲ. ಆದರೆ ಕಾವ್ಯದೊಂದಿಗೆ ಸಹಜವಾದ ಅಭಿರುಚಿಯಿದ್ದ ಕಾರಣದಿಂದ ಸಾವಿರಾರು ಪದ್ಯಪಂಕ್ತಿಗಳು ಬಾಯಿಪಾಠವಾಗಿದ್ದುವು. ಹಝ್ರತ್ ಉಮರ್(ರ) ಪದ್ಯಪಂಕ್ತಿಗಳನ್ನು ಕಂಠಪಾಠ ಮಾಡಿರುವುದರ ಬಗ್ಗೆ ಸಾಹಿತ್ಯಗಾರರು ಹೇಳುವುದೇನೆಂದರೆ, ಯಾವುದಾದರೂ ವಿಷಯಗಳ ತೀರ್ಪು ಮಾಡುವಾಗ ಅವರು ಖಂಡಿತವಾಗಿಯೂ ಯಾವುದಾದರೂ ಪದ್ಯಪಂಕ್ತಿಯನ್ನು ಹೇಳುತ್ತಿದ್ದರು. ಯಾವ ಕಾವ್ಯದಲ್ಲಿ ಸ್ವಾಭಿಮಾನ, ಸ್ವಾತಂತ್ರ್ಯ, ಸಭ್ಯತೆ, ಗೌರವ, ಉಪದೇಶದ ವಿಷಯಗಳು ಇರುವ ಪದ್ಯಗಳನ್ನು ಮಾತ್ರ ಅವರು ಇಷ್ಟಪಡುತ್ತಿದ್ದರು. ಇದೇ ಆಧಾರದಲ್ಲಿ ಜನರೊಡನೆ ಪದ್ಯಗಳನ್ನು ಕಂಠಪಾಠ ಮಾಡಲು ತಾಕೀತು ಮಾಡಬೇಕೆಂದು ಸೇನಾಧಿಪತಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಆದೇಶ ಕಳುಹಿಸಿದ್ದರು. ಹಝ್ರತ್ ಅಬೂಮೂಸಾ ಅಶ್‌ಅರಿಗೆ ಹೀಗೆ ಆದೇಶ ಕಳುಹಿಸಿದ್ದರು: ಜನರೊಡನೆ ಪದ್ಯಗಳನ್ನು ಕಂಠಪಾಠ ಮಾಡಲು ಆದೇಶಿಸಿರಿ. ಏಕೆಂದರೆ ಅವು ನೈತಿಕ ಸ್ವಭಾವದ ಉನ್ನತ ಸಂಗತಿಗಳು ಮತ್ತು ಸರಿಯಾದ ಅಭಿಪ್ರಾಯಗಳು ಮತ್ತು ನ್ಯಾಯದ ಕಡೆಗೆ ದಾರಿ ತೋರಿಸುತ್ತವೆ. ಎಲ್ಲ ಜಿಲ್ಲೆಗಳಿಗೆ ಕಳುಹಿಸಲಾದ ಆದೇಶದ ವಾಕ್ಯಗಳು ಹೀಗಿವೆ:

ನಿಮ್ಮ ಮಕ್ಕಳಿಗೆ ಈಜು, ಕುದುರೆಸವಾರಿ ಕಲಿಸಿರಿ ಮತ್ತು ಗಾದೆಮಾತುಗಳು ಮತ್ತು ಉತ್ತಮ ಪದ್ಯಗಳನ್ನು ಬಾಯಿಪಾಠ ಮಾಡಿಸಿರಿ. ಎಂದರೆ ಅವರಿಗೆ ಜ್ಞಾನದ ಅಭಿರುಚಿಯನ್ನು ಉಂಟುಮಾಡಿರಿ. ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ನೆನಪಿಡಬೇಕಾಗಿದೆ. ಅದೇನೆಂದರೆ, ಹಝ್ರತ್ ಉಮರ್(ರ) ಕವಿತೆಗಳ ಅನೇಕ ಕೆಡುಕುಗಳನ್ನು ಅಳಿಸಿ ಹಾಕಿದರು. ಆ ಸಮಯದಲ್ಲಿ ಪೂರ್ತಿ ಅರೇಬಿಯದಲ್ಲಿ ಇದ್ದ ಸಂಪ್ರದಾಯವೇನೆಂದರೆ, ಕವಿಗಳು ಸಭ್ಯ ಮಹಿಳೆಯರ ಹೆಸರುಗಳನ್ನು ಜನಸಾಮಾನ್ಯರ ಮುಂದೆ ಪದ್ಯಗಳಲ್ಲಿ ಹೇಳುತ್ತಿದ್ದರು. ಅವರೊಂದಿಗೆ ತಮಗೆ ಪ್ರೇಮವಿರುವುದಾಗಿ ಸೂಚಿಸುತ್ತಿದ್ದರು. ಹೀಗೆ ಅರೇಬಿಯರ ಪ್ರೇಮಗೀತೆಗಳಲ್ಲಿ ಸಭ್ಯ ಮಹಿಳೆಯರ ಹೆಸರನ್ನು ಪ್ರತಿಪಾದಿಸುವ ಸಂಪ್ರದಾಯವನ್ನು ಹಝ್ರತ್ ಉಮರ್(ರ) ಅಳಿಸಿಹಾಕಿದರು ಮತ್ತು ಅದಕ್ಕೆ ಕಠಿಣ ಶಿಕ್ಷೆಯನ್ನು ನಿಶ್ಚಯಿಸಿದರು. ಅದೇ ರೀತಿಯಲ್ಲಿ ಅಣಕಪದ್ಯವನ್ನು ಎಂದರೆ, ಬೇರೆಯವರ ಬಗ್ಗೆ ಕೆಟ್ಟದಾಗಿ ದೂಷಿಸುವ ಪದ್ಯವನ್ನು ಅಪರಾಧವೆಂದು ಹೇಳಿದರು. ಅಣಕಪದ್ಯಗಳನ್ನು ಹೇಳುತ್ತಿದ್ದ ಪ್ರಸಿದ್ಧ ಕವಿಯಾದ ಹೋತೀಆನನ್ನು ಈ ಅಪರಾಧದ ಕಾರಣ ಬಂಧಿಸಲಾಯಿತು.

(ಅಲ್‌ಫಾರುಖ್, ಶಿಬ್ಲಿ ನುಮಾನಿ, ಪುಟ–330–333, ಮಕ್ತಬತುಲ್ ಹರ್ಮೈನ್ ಲಾಹೋರ್ 1431 ಹಿಜರಿ)

ಅಲ್ಲಾಮ ಶಿಬ್ಲಿ ನೂಮಾನಿ ಬರೆಯುತ್ತಾರೆ: ಆ ಕಾಲದಲ್ಲಿ ಅತ್ಯಂತ ಪ್ರಸಿದ್ಧ ಕವಿ ಮತಮ್ಮಿಮ್ ಬಿನ್ ನುಮೈರ ಆಗಿದ್ದರು. ಅವರ ಸಹೋದರನನ್ನು ಹಝ್ರತ್ ಅಬೂಬಕರ್ ಸಿದ್ದೀಖ್‌ರ(ರ) ಕಾಲದಲ್ಲಿ ಹಝ್ರತ್ ಖ಼ಾಲಿದ್(ರ) ಕೈತಪ್ಪಿ, ಪ್ರಮಾದದಿಂದ ಕೊಂದಿದ್ದರು. ಈ ಘಟನೆಯು ಈ ಕವಿಗೆ ಬಹಳ ದುಃಖವನ್ನು ಉಂಟುಮಾಡಿತ್ತು. ಅವರು ಸದಾ ರೋದಿಸುತ್ತಿದ್ದರು ಮತ್ತು ಸಹೋದರನ ಬಗ್ಗೆ ಶೋಕಗೀತೆ ಹಾಡುತ್ತಿದ್ದರು. ಹಝ್ರತ್ ಉಮರರ(ರ) ಸನ್ನಿಧಿಯಲ್ಲಿ ಆ ಕವಿ ಹಾಜರಾದಾಗ ಅವರು ಆ ಶೋಕಗೀತೆಯನ್ನು ಹಾಡಲು ಹೇಳಿದರು. ಅವನು ಅದರ ಕೆಲವು ಪದ್ಯಪಂಕ್ತಿಗಳನ್ನು ಹೇಳಿದನು. ಹಝ್ರತ್ ಉಮರ್(ರ) ಅವನೊಡನೆ ಹೇಳಿದರು: ನನಗೆ ಈ ರೀತಿಯಲ್ಲಿ ಶೋಕಗೀತೆ ರಚಿಸಲು ಗೊತ್ತಿದ್ದರೆ ನಾನು ನನ್ನ ಸಹೋದರನಾದ ಝೈದ್‌ನ ಬಗ್ಗೆ ಶೋಕಗೀತೆಯನ್ನು ರಚಿಸುತ್ತಿದ್ದೆ. ಅವನು ಹೇಳಿದನು: ಹೇ ಅಮೀರಲ್ ಮೂಮಿನೀನ್, ನನ್ನ ಸಹೋದರನು ನಿಮ್ಮ ಸಹೋದರನ ಹಾಗೆ ಶಹೀದಾಗಿ ಕೊಲ್ಲಲ್ಪಟ್ಟಿದ್ದರೆ, ನಾನು ನನ್ನ ಸಹೋದರನ ಕುರಿತು ಖಂಡಿತ ದುಃಖಿಸುತ್ತಿರಲಿಲ್ಲ.

ಹಝ್ರತ್ ಉಮರ್(ರ) ಯಾವಾಗಲೂ ಹೇಳುತ್ತಿದ್ದರು: ಮುತಮ್ಮಿಮ್‌ನಂತೆ ಯಾರೂ ಸಂತಾಪ ಸೂಚಿಸಿಲ್ಲ, ಅಷ್ಟು ಉತ್ತಮ ಶೋಕಗೀತೆ ರಚಿಸಿಲ್ಲ. (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ–345, ಮಕ್ತಬತುಲ್ ಹರ್‌ಮೈನ್ ಲಾಹೋರ್ 1431)

ಹಝ್ರತ್ ಉಮರ್‌ರ(ರ) ಶ್ರೇಷ್ಠತೆ ಮತ್ತು ಉನ್ನತ ಸ್ಥಾನದ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಭವಿಷ್ಯ ನುಡಿಯಲ್ಪಟ್ಟ ಘಟನೆಗಳಲ್ಲಿ ಕೆಲವನ್ನು ಒಂದೇ ಬಾರಿ ಪ್ರಕಟವಾಗುವ ಪ್ರತೀಕ್ಷೆಯಿರಿಸಲಾಗಿದೆ. ಅವು ತಡವಾಗಿ ಅಥವಾ ಬೇರೆ ವ್ಯಕ್ತಿಯ ಮೂಲಕ ಪ್ರಕಟವಾಗಿದ್ದುವು. ಉದಾಹರಣೆಗೆ, ರೋಮ್ ಮತ್ತು ಇರಾನಿನ ಭಂಡಾರಗಳ ಕೀಲಿಗೈ ಹಝ್ರತ್ ಪೈಗಂಬರರ(ಸ) ಕೈಯಲ್ಲಿ ಇರಿಸಲಾಗಿರುವುದಾಗಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿಯಿದೆ. ಆದರೆ ಈ ಭವಿಷ್ಯವಾಣಿ ಈಡೇರುವುದಕ್ಕೆ ಮುಂಚಿತವಾಗಿಯೇ ಹಝ್ರತ್ ಪೈಗಂಬರ್(ಸ) ನಿಧನರಾದರು. ರೋಮಿನ ಮತ್ತು ಇರಾನಿನ ಖಜಾನೆಯನ್ನೋ ಕೀಲಿಗೈಯನ್ನೋ ಹಝ್ರತ್ ಪೈಗಂಬರ್(ಸ) ನೋಡಿರಲಿಲ್ಲ. ಏಕೆಂದರೆ ಆ ಕೀಲಿಗೈಗಳು ಹಝ್ರತ್ ಉಮರ್‌ರಿಗೆ(ರ) ಲಭಿಸುವುವು ಎಂದು ವಿಧಿಸಲಾಗಿತ್ತು. ಹಝ್ರತ್ ಉಮರ್‌ರ(ರ) ಅಸ್ತಿತ್ವ ನೆರಳಿನ ರೂಪದಲ್ಲಿ ಹಝ್ರತ್ ಪೈಗಂಬರರ(ಸ) ಅಸ್ತಿತ್ವದ ಹಾಗೆಯೇ ಆಗಿತ್ತು. ಆದ್ದರಿಂದ ದಿವ್ಯಭಾಷೆಯಲ್ಲಿ ಹಝ್ರತ್ ಉಮರರ(ರ) ಕೈಯನ್ನು ಹಝ್ರತ್ ಪೈಗಂಬರರ(ಸ) ಕೈಯೆಂದು ಹೇಳಲಾಯಿತು. (ಅಯ್ಯಾಮುಸ್ಸುಲಹ್, ರೂಹಾನಿ ಖಝಾಈನ್, ಸಂಪುಟ–14, ಪುಟ–265)

ಮತ್ತೊಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಹಝ್ರತ್ ಅಬೂಬಕರ್ ಸಿದ್ದೀಖ್(ರ), ಹಝ್ರತ್ ಉಮರ್ ಫಾರೂಖ್(ರ), ಇರುಪ್ರಕಾಶಗಳುಳ್ಳ ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ಅಲಿ ಮುರ್ತಝ಼(ರ) ಇವರೆಲ್ಲರೂ ನಿಶ್ಚಯವಾಗಿಯೂ ಧರ್ಮ ಸಂರಕ್ಷಕರಾಗಿದ್ದರು. ಅಬೂಬಕರ್(ರ) ಇಸ್ಲಾಮಿನ ಎರಡನೇ ಆದಂ ಆಗಿರುವರು. ಅದೇ ರೀತಿಯಲ್ಲಿ ಹಝ್ರತ್ ಉಮರ್ ಫಾರೂಖ್(ರ) ಮತ್ತು ಹಝ್ರತ್ ಉಸ್ಮಾನ್(ರ) ಧರ್ಮದ ನೈಜ ಸಂರಕ್ಷಕರಾಗಿರದಿದ್ದರೆ, ಪವಿತ್ರ ಖುರ್‌ಆನಿನ ಯಾವುದಾದರೂ ಒಂದು ಆಯತನ್ನು ಕೂಡ ಅಲ್ಲಾಹನ ವತಿಯಿಂದ ಅವತೀರ್ಣವಾದದ್ದು ಎಂದು ಹೇಳಲು ಸಾಧ್ಯವಾಗುತ್ತಿರಲಿಲ್ಲ. (ಮಕ್ತೂಬಾತೆ ಅಹ್ಮದ್, ಸಂಪುಟ–2, ಪುಟ–151, ಮಕ್ತೂಬ್ ಸಂಖ್ಯೆ–2, ಮಕ್ತೂಬ್ ಬನಾಮ್ ಹಝ್ರತ್ ಖಾನ್ ಸಾಹಿಬ್ ಮುಮ್ಮದ್ ಅಲಿ ಖಾನ್ ಸಾಹಿಬ್, ಮುದ್ರಣ ರಬ್ವಾಹ್)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಅಲ್ಲಾಹನು ನನಗೆ ಖ಼ಿಲಾಫತ್ ಬಗ್ಗೆ ಸಂಶೋಧನೆ ಮೂಲಕ ತಿಳಿಸಿಕೊಟ್ಟಿದ್ದಾನೆ ಮತ್ತು ನಾನು ಸತ್ಯಾನ್ವೇಷಿಗಳ ಹಾಗೆ ಅದರ ಸತ್ಯತೆಯ ಆಳದ ತನಕ ತಲುಪಿದ್ದೇನೆ. ನನ್ನ ಪ್ರಭು ನನಗೆ ಹೀಗೆ ಸ್ಪಷ್ಟವಾಗಿ ತಿಳಿಸಿಕೊಟ್ಟಿದ್ದಾನೆ: ಹಝ್ರತ್ ಅಬೂಬಕರ್ ಸಿದ್ದೀಖ್, ಹಝ್ರತ್ ಉಮರ್ ಫಾರೂಖ್ ಮತ್ತು ಹಝ್ರತ್ ಉಸ್ಮಾನ್(ರ) ಸಾತ್ವಿಕರು, ಸತ್ಯವಿಶ್ವಾಸಿಗಳು ಮತ್ತು ಅಲ್ಲಾಹನು ಆಯ್ಕೆ ಮಾಡಿದ್ದ ವ್ಯಕ್ತಿಗಳಲ್ಲಿ ಸೇರಿರುವರು ಆಗಿರುವರು ಎಂದು ಅಲ್ಲಾಹನು ನನಗೆ ಸ್ಪಷ್ಟವಾಗಿ ಅರುಹಿದ್ದಾನೆ. ಜ್ಞಾನಿಗಳಾದ ಅನೇಕರು ಅವರ ಸ್ವಭಾವ ಶ್ರೇಷ್ಠತೆಗಳ ಬಗ್ಗೆ ಸಾಕ್ಷ್ಯವಹಿಸಿದ್ದಾರೆ. ಈ ಖ಼ಲೀಫರು ಅತ್ಯುನ್ನತನಾದ ಅಲ್ಲಾಹನ ಸಂಪ್ರೀತಿಗಾಗಿ ಸ್ವದೇಶವನ್ನು ಉಪೇಕ್ಷಿಸಿದರು. ಪ್ರತಿಯೊಂದು ಯುದ್ಧದ ಬೆಂಕಿಯಲ್ಲಿ ಪ್ರವೇಶಿಸಿದರು. ಬೇಸಿಗೆಗಾಲದ ಮಧ್ಯಾಹ್ನದ ಬಿಸಿ ಮತ್ತು ಚಳಿಗಾಲದ ರಾತ್ರಿಯ ತಂಪಿನ ಪರಿವೆ ಮಾಡಲಿಲ್ಲ. ಬದಲಾಗಿ ಯುವಕರಂತೆ ಧರ್ಮದ ಮಾರ್ಗದಲ್ಲಿ ಮಗ್ನರಾಗಿದ್ದರು. ಸ್ವಂತ ಮತ್ತು ಪರರ ಕಡೆಗೆ ಆಕರ್ಷಿತರಾಗಿರಲಿಲ್ಲ. ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗಾಗಿ ಎಲ್ಲರಿಗೂ ವಿದಾಯ ಹೇಳಿದರು. ಅವರ ಸತ್ಕರ್ಮದಲ್ಲಿ ಸುವಾಸನೆ ಮತ್ತು ಕೃತ್ಯಗಳಲ್ಲಿ ಸುಗಂಧವಿತ್ತು. ಇವೆಲ್ಲವೂ ಅವರ ಪದವಿಯ ತೋಟಗಳು ಮತ್ತು ಒಳಿತುಗಳ ತೋಟಗಳ ಕಡೆಗೆ ಬೊಟ್ಟು ಮಾಡುತ್ತದೆ. ಅದರ ತಣ್ಣನೆಯ ಗಾಳಿ ಅವರ ಸುಗಂಧಭರಿತ ಅಲೆಗಳ ಮೂಲಕ ಅವರ ರಹಸ್ಯಗಳ ಬಗ್ಗೆ ಅರಿವಾಗುತ್ತದೆ. ಅವರ ಪ್ರಕಾಶಗಳು ಪೂರ್ಣ ತೇಜಸ್ಸಿನಿಂದ ನಮ್ಮ ಮೇಲೆ ಪ್ರಕಟವಾಗುತ್ತವೆ. ಆದ್ದರಿಂದ ನೀವು ಅವರ ಪದವಿಯ ಹೊಳಪನ್ನು ಅವರ ಸುವಾಸನೆಯ ಸುಗಂಧದಿಂದ ಕಂಡುಹಿಡಿಯಿರಿ. ಅವಸರಪಡುತ್ತಾ ತಪ್ಪುಗ್ರಹಿಕೆಯನ್ನು ಅನುಸರಿಸಬೇಡಿರಿ. ಕೆಲವು ವರದಿಗಳನ್ನು ನಂಬಬೇಡಿರಿ. ಅದರಲ್ಲಿ ಬಹಳ ವಿಷವಿದೆ. ಅದು ವಿಶ್ವಾಸಯೋಗ್ಯವಲ್ಲ. ಅವುಗಳಲ್ಲಿ ಅನೇಕ ವರದಿಗಳು ಅಡಿಮೇಲು ಮಾಡುವ ಬಿರುಗಾಳಿಯಂತೆಯಾಗಿದೆ ಮತ್ತು ಮಳೆಬರುವುದಾಗಿ ಮೋಸಗೊಳಿಸುವ ಮಿಂಚಿನಂತದ್ದಾಗಿದೆ. ಆದ್ದರಿಂದ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಇಂತಹ ವರದಿಗಳನ್ನು ಅನುಸರಿಸುವವರಾಗದಿರಿ. (ಸಿರ್‍ರುಲ್ ಖಿಲಾಫ಼, ಉರ್ದು ಅನುವಾದ ಪುಟ–25–26)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಅಲ್ಲಾಹನಾಣೆ, ಅಲ್ಲಾಹನು ಶೇಖೈನ್‌ರಾದ ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರ್ ಹಾಗೂ ಮೂರನೆಯದಾಗಿ ಧುನ್ನುರೈನ್‌ರಾದ ಹಝ್ರತ್ ಉಸ್ಮಾನ್‌ರನ್ನು(ರ) ಇಸ್ಲಾಮಿನ ಬಾಗಿಲುಗಳ ಮತ್ತು ಸೃಷ್ಟಿಗಳಲ್ಲಿ ಉತ್ತಮರಾದ ಮುಹಮ್ಮದ್ ರಸೂಲುಲ್ಲಾಹ್‌ರ ಸೈನ್ಯದ ಪ್ರಮುಖರನ್ನಾಗಿ ಮಾಡಿರುವನು. ಆದ್ದರಿಂದ ಯಾರು ಅವರ ಮಹತ್ವವನ್ನು ನಿರಾಕರಿಸಿತ್ತಾರೋ, ಅವರ ಖಚಿತ ಪುರಾವೆಗಳನ್ನು ನೀಚವೆಂದು ಭಾವಿಸುತ್ತಾರೋ, ಅವರನ್ನು ಗೌರವಿಸುವುದಿಲ್ಲವೋ ಮಾತ್ರವಲ್ಲ ಅವರನ್ನು ನಿಂದಿಸುತ್ತಾರೋ, ಅವರನ್ನು ಬೈಯ್ಯುತ್ತಾರೋ ಅವರ ದುರ್ಗತಿ ಮತ್ತು ಅವರ ವಿಶ್ವಾಸದ ಬಗ್ಗೆ ನನಗೆ ಭಯವಿದೆ. ನಾನು ಹತ್ತಿಪ್ಪತ್ತು ಬಾರಿ ಕಂಡ ಅನುಭವವೇನೆಂದರೆ, ಅದರ ಬಗ್ಗೆ ನಾನು ಬಹಿರಂಗವಾಗಿ ಹೇಳಿಯೂ ಆಗಿದೆ, ಅದೇನೆಂದರೆ, ಆ ಸಜ್ಜನರೊಂದಿಗೆ ಹಗೆ ಮತ್ತು ದ್ವೇಷವನ್ನು ಇರಿಸುವುದರಿಂದ, ಅದು ಅನುಗ್ರಹಗಳನ್ನು ವರ್ಷಿಸುವ ಅಲ್ಲಾಹನೊಂದಿಗೆ ಸಂಬಂಧ ಮುರಿಯುವುದಕ್ಕೆ ಕಾರಣವಾಗುವುದು. ಅವರೊಂದಿಗೆ ವೈರವನ್ನು ಮತ್ತು ಶತ್ರುತ್ವವನ್ನು ಇರಿಸುವ ಯಾವನೇ ವ್ಯಕ್ತಿಯ ಮೇಲೆ ಕರುಣೆ ಮತ್ತು ದಯೆಯ ಎಲ್ಲ ಮಾರ್ಗಗಳು ಮುಚ್ಚಲ್ಪಡುವುವು. ಅವನಿಗಾಗಿ ಅರಿವು ಮತ್ತು ಜ್ಞಾನದ ಬಾಗಿಲುಗಳು ತೆರೆಯಲ್ಪಡಲಾರವು. ಅಲ್ಲಾಹನು ಅವನನ್ನು ಲೌಕಿಕತೆಯ ಅಭಿರುಚಿಗಳಲ್ಲಿ ಮತ್ತು ಕೆಟ್ಟಕೃತ್ಯಗಳಲ್ಲೇ ಬಿಟ್ಟುಬಿಡುತ್ತಾನೆ. ಸ್ವಾರ್ಥ ಅಭಿಲಾಷೆಗಳ ಹೊಂಡಕ್ಕೆ ಬೀಳಿಸುತ್ತಾನೆ. ಅವನನ್ನು ತನ್ನ ಆಸ್ಥಾನದಿಂದ ದೂರವಿರುವವನನ್ನಾಗಿ ಮತ್ತು ದೇವಪ್ರೀತಿಯಿಂದ ವಂಚಿತನನ್ನಾಗಿ ಮಾಡುತ್ತಾನೆ.

ಪ್ರವಾದಿಗಳನ್ನು ಉಪದ್ರವಿಸಿದಂತೆಯೇ ನಾಲ್ವರು ಖ಼ಲೀಫರಿಗೂ ತೊಂದರೆ ಕೊಡಲಾಗಿತ್ತು. ಪ್ರವಾದಿಗಳ ಮೇಲೆ ಶಾಪ ಪ್ರಾರ್ಥನೆ ಮಾಡಿದಂತೆ ಅವರ ಕುರಿತು ಕೂಡ ಶಾಪ ಪ್ರಾರ್ಥನೆ ಮಾಡಲಾಯಿತು. ಹೀಗೆ ಅವರು ಪ್ರವಾದಿಗಳ ವಾರಸುದಾರರೆಂದು ಸಾಬೀತಾಯಿತು. ಖಿಯಾಮತ್ ದಿನದಂದು, ಇತರ ಪ್ರವಾದಿಗಳಂತೆ ಅವರಿಗೂ ಪ್ರತಿಫಲ ಸಿಗುವುದು ಎಂದು ಖಚಿತವಾಯಿತು. ಏಕೆಂದರೆ, ಸತ್ಯವಿಶ್ವಾಸಿಯನ್ನು ಅವನು ತಪ್ಪು ಮಾಡದೆಯೂ ಅವನ ಮೇಲೆ ಶಾಪ ಪ್ರಾರ್ಥನೆ ಮಾಡಲಾಗುವಾಗ, ಅವನನ್ನು ಸತ್ಯನಷೇಧಿಯೆಂದು ಹೇಳಲಾಗುವಾಗ, ವಿನಾಕಾರಣ ಅವನನ್ನು ದೂಷಿಸಲಾಗುವಾಗ ಮತ್ತು ಅವನ ಬಗ್ಗೆ ಕೆಟ್ಟದಾಗಿ ಹೇಳಲಾಗುವಾಗ ಅವನು ಪ್ರವಾದಿಗಳಂತೆ ಆಗುತ್ತಾನೆ. ಅಲ್ಲಾಹನ ವರಿಷ್ಠ ದಾಸರಂತೆ ಆಗುತ್ತಾನೆ. ಆದ್ದರಿಂದ ಪ್ರವಾದಿಗಳಿಗೆ ಲಭಿಸಿದಂತಹ ಪ್ರತಿಫಲ ಅವನಿಗೆ ಸಿಗುತ್ತದೆ. ನಿಸ್ಸಂಶಯವಾಗಿಯೂ ಈ ನಾಲ್ವರು ಖ಼ಲೀಫರು ನಿಸ್ಸಂಶಯವಾಗಿಯೂ ಪ್ರವಾದಿ ಶ್ರೇಷ್ಠರಾದ ಹಝ್ರತ್ ಪೈಗಂಬರರ(ಸ) ಅನುಸರಣೆಯಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದರು. ಅವರು ಉನ್ನತ ಸಮುದಾಯವಾಗಿತ್ತು ಎಂದು ಅಲ್ಲಾಹನು ಅವರನ್ನು ಸ್ತುತಿಸಿ ಹೇಳಿದ್ದಾನೆ. ಅಲ್ಲಾಹನು ಸ್ವತಃ ತನ್ನ ಎಲ್ಲ ವರಿಷ್ಠ ದಾಸರಿಗೆ ನೆರವು ನೀಡುವಂತೆಯೇ ಅವರಿಗೂ ನೆರವು ನೀಡಿದ್ದಾನೆ. ಸತ್ಯವಾಗಿಯೂ ಅವರ ಸತ್ಯಸಂಧತೆಯ ಪ್ರಕಾಶಗಳು ಮತ್ತು ಅವರ ಪರಿಶುದ್ಧತೆಯ ಲಕ್ಷಣಗಳು ಪೂರ್ಣ ತೇಜಸ್ಸಿನೊಂದಿಗೆ ಪ್ರಕಟವಾಯಿತು. ಅವರು ಸತ್ಯವಂತರೆಂದು ಸ್ಪಷ್ಟವಾಗಿ ತೆರೆಯಲ್ಪಟ್ಟಿತು. ಅಲ್ಲಾಹನು ಅವರೊಡನೆ ಸಂಪ್ರೀತನಾದನು ಮತ್ತು ಅವರು ಅಲ್ಲಾಹನಲ್ಲಿ ಸಂತುಷ್ಟರಾದರು. ಬೇರೆ ಯಾರಿಗೂ ಕೊಡದಂತಹದ್ದನ್ನು ಅಲ್ಲಾಹನು ಅವರಿಗೆ ದಯಪಾಲಿಸಿದ್ದನು. (ಸಿರ್‍ರುಲ್ ಖೀಲಾಫ, ಉರ್ದು ಅನುವಾದ, ಪುಟ–28–30)

ಶಿಯಾ ವಿಭಾಗದವರ ಒಂದು ಮಾತಿಗೆ ಪ್ರತ್ಯುತ್ತರ ಕೊಡುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲಿ ಮುರ್ತಝ಼ಾ(ರ) ಅಥವಾ ಫಾತಿಮತುಝ್ಝುಹ್ರಾರ(ರ) ಹಕ್ಕನ್ನು ಅಬೂಬಕರ್ ಸಿದ್ದೀಖ್(ರ) ಅಥವಾ ಉಮರ್ ಫಾರೂಖ್(ರ) ಅಪಹರಿಸಿಕೊಂಡಿದ್ದಾರೆ ಮತ್ತು ಅವರ ಮೇಲೆ ದೌರ್ಜನ್ಯವನ್ನು ಮಾಡಿರುವರು ಎಂದು ಶಿಯಾ ಪಂಗಡದವರಲ್ಲಿ ಯಾವನಾದರೂ ಭಾವಿಸುವನಾದರೆ, ಅವನು ನ್ಯಾಯವನ್ನು ಕೈಬಿಟ್ಟಿರುವನು, ಅತಿರೇಕವನ್ನು ಇಷ್ಟಪಟ್ಟಿರುವನು ಮತ್ತು ದೌರ್ಜನ್ಯಗಾರರ ಮಾರ್ಗವನ್ನು ಕೈಗೊಂಡಿರುವನು. ಖಂಡಿತವಾಗಿಯೂ ಅಲ್ಲಾಹನ ಪ್ರವಾದಿಗಾಗಿ ತಮ್ಮ ಸ್ವದೇಶವನ್ನು, ಸ್ನೇಹಿತರನ್ನು, ಸಂಪತ್ತನ್ನು ಉಪೇಕ್ಷಿಸಿದ ಈ ಖ಼ಲೀಫರಿಗೆ ಸತ್ಯನಿಷೇಧಿಗಳು ಕಷ್ಟತೆಗಳನ್ನು ಕೊಟ್ಟರು. ಆದರೂ ಅವರು ಒಳ್ಳೆಯ ಮತ್ತು ಸಜ್ಜನರಂತೆ ಸಹನೆ ತೋರಿಸಿದರು ಮತ್ತು ಖ಼ಲೀಫರಾದರು. ಹೀಗಿದ್ದರೂ ಅವರು ತಮ್ಮ ಮನೆಗಳನ್ನು ಸಂಪತ್ತು ಮತ್ತು ಬಂಗಾರಗಳಿಂದ ತುಂಬಿಸಲಿಲ್ಲ. ಅವರ ಮಕ್ಕಳನ್ನು ಚಿನ್ನ ಮತ್ತು ಬೆಳ್ಳಿಯ ವಾರಸುದಾರರನ್ನಾಗಿ ಮಾಡಲಿಲ್ಲ. ಬದಲಾಗಿ ಗಳಿಸಿದೆಲ್ಲವನ್ನು ಬೈತುಲ್‌ಮಾಲಿಗೆ ಕೊಟ್ಟರು. ಅವರು ಲೌಕಿಕರ ಮತ್ತು ದಾರಿಗೆಟ್ಟವರ ಹಾಗೆ ತಮ್ಮ ಮಕ್ಕಳನ್ನೇ ಖ಼ಲೀಫರನ್ನಾಗಿ ಮಾಡಲಿಲ್ಲ. ಅವರು ಲೋಕದಲ್ಲಿ ತನ್ನ ಜೀವಿತವನ್ನು ಫಕೀರರಂತೆ ಮತ್ತು ಬಡವರಂತೆ ಸಾಗಿಸಿದರು. ಮುಖಂಡರು ಮತ್ತು ಅಮೀರರಂತೆ ಸಂಪತ್ತಿನ ಕಡೆಗೆ ಆಕರ್ಷಿತಗೊಳ್ಳಲಿಲ್ಲ. ಅಂತಹವರ ಬಗ್ಗೆ ಅವರು ಒತ್ತಾಯದಿಂದ ಜನರ ಸಂಪತ್ತನ್ನು ವಶಪಡಿಸುವವರೆಂದೂ ಹಕ್ಕನ್ನು ಕಸಿದುಕೊಳ್ಳುವವರೆಂದೂ ಲೂಟಿ ಮಾಡುವವರೆಂದೂ ದರೋಡೆ ಮಾಡುವವರೆಂದೂ ಭಾವಿಸಲು ನನಗೆ ಹೇಗೆ ಸಾಧ್ಯ? ಪ್ರಪಂಚದ ಸರದಾರನಾದ

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 06-13 January 2022, Issue No. 01-02

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧ ಸಹವಾಸದ ಪ್ರಭಾವ ಇದಾಗಿತ್ತೇ? ಪ್ರಪಂಚದ ಪ್ರಭುವಾದ ಅಲ್ಲಾಹನು ಅವರನ್ನು ಸ್ತುತಿಸಿಲ್ಲವೇ? ಸತ್ಯವೇನೆಂದರೆ, ಅಲ್ಲಾಹನು ಅವರ ಆತ್ಮಗಳನ್ನು ಪರಿಶುದ್ಧಗೊಳಿಸಿರುವನು. ಅವರ ಹೃದಯುಗಳಿಗೆ ಪರಿಶುದ್ಧಿಯನ್ನು ನೀಡಿದನು. ಅವರ ಅಸ್ತಿತ್ವವನ್ನು ಪ್ರಕಾಶಮಾನವನ್ನಾಗಿ ಮಾಡಿದನು. ನಂತರ ಬರಲಿದ್ದ ಪರಿಶುದ್ಧ ಜನರ ನೇತಾರರನ್ನಾಗಿ ಮಾಡಿದನು. ಅವರಿಗೆ ದುರುದ್ದೇಶವಿತ್ತು ಅಥವಾ ಅವರ ಸಣ್ಣ ತಪ್ಪುಗಳ ಕಡೆಗೆ ಸೂಚನೆ ನೀಡುವ ಯಾವುದೇ ಸಂಗತಿಯ ದುರ್ಬಲವಾದ ಸಾಧ್ಯತೆಯನ್ನು ಕೂಡ ನಾವು ಕಾಣುವುದಿಲ್ಲ. ಹೀಗಿರುವಾಗ ಅವರು ದೌರ್ಜನ್ಯ ಮಾಡಿರುವರು ಎಂದು ಹೇಳಲು ಹೇಗೆ ಸಾಧ್ಯ? ಅಲ್ಲಾಹನಾಣೆ ಅವರು ನ್ಯಾಯಪಾಲನೆ ಮಾಡುವವರಾಗಿದ್ದರು. ಅವರಿಗೆ ನಿಷಿದ್ಧವಾದ ಸಂಪತ್ತಿನ ಕಣಿವೆಯನ್ನೇ ಕೊಟ್ಟರು ಕೂಡ ಅವರು ಅದರ ಕಡೆಗೆ ಕಣ್ಣೆತ್ತಿ ಕೂಡ ನೋಡಲಿಕ್ಕಿಲ್ಲ ಮತ್ತು ಆಸೆಬುರುಕರ ಹಾಗೆ ಅದರ ಕಡೆಗೆ ಆಕರ್ಷಿತರಗೊಳ್ಳಲಿಕ್ಕಿಲ್ಲ. ಬಂಗಾರದ ಪರ್ವತದಷ್ಟು ಇದ್ದರೂ ಏಳು ಭೂಮಿಗಳಷ್ಟು ಇದ್ದರೂ ಸರಿ. ಹೀಗಿರುವಾಗ ಅವರು ಕೆಲವು ಮರಗಳಿಗಾಗಿ ಫಾತಿಮತುಝ್ಝುಹ್ರಾರನ್ನು(ರ) ಕೋಪಗೊಳಿಸಿದರು ಎಂದೂ ಹಝ್ರತ್ ಪೈಗಂಬರರ(ಸ) ಮಕ್ಕಳು ಮತ್ತು ಮೊಮ್ಮಕ್ಕಳಿಗೆ ದುಷ್ಟರ ಹಾಗೆ ಕಷ್ಟತೆಗಳನ್ನು ಕೊಟ್ಟರು ಎಂದು ಭಾವಿಸಲು ಸಾಧ್ಯ? ಬದಲಾಗಿ ಸಜ್ಜರು ಸದುದ್ದೇಶವನ್ನು ಹೊಂದಿದವರಾಗಿರುತ್ತಾರೆ ಮತ್ತು ಅವರು ಸತ್ಯದ ಮೇಲೆ ಸ್ಥಿರವಾಗಿರುತ್ತಾರೆ. ಅಲ್ಲಾಹನ ಕಡೆಯಿಂದ ಅವರಿಗೆ ಕಾರುಣ್ಯಗಳು ಅವತೀರ್ಣವಾಗುತ್ತವೆ. ಅಲ್ಲಾಹನು ಮುತ್ತಖಿಗಳ ಅಂತರಂಗವನ್ನು ಚೆನ್ನಾಗಿ ಬಲ್ಲನು. (ಸಿರ್ರುಲ್ ಖೀಲಾಫ ಉರ್ದು ಅನುವಾದ, ಪುಟ–37–39)

ಸತ್ಯವೇನೆಂದರೆ, ಅಬೂಬಕರ್ ಸಿದ್ದೀಖ್(ರ) ಮತ್ತು ಉಮರ್ ಫಾರೂಖ್(ರ) ಇಬ್ಬರೂ ಕರ್ತವ್ಯ ನಿರ್ವಹಣೆಯಲ್ಲಿ ಎಂದಿಗೂ ಆಲಸಿಗರಾಗಿರಲಿಲ್ಲ. ಕುಂದುಂಟು ಮಾಡಿರಲಿಲ್ಲ. ಅವರು ದೇವಭಕ್ತಿಯನ್ನು ತಮ್ಮ ಮಾರ್ಗವನ್ನಾಗಿ ಮತ್ತು ನೀತಿಯನ್ನು ತಮ್ಮ ಗುರಿಯನ್ನಾಗಿ ಮಾಡಿದ್ದರು. ಅವರು ಸ್ಥಿತಿಗಳ ಬಗ್ಗೆ ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದರು ಮತ್ತು ರಹಸ್ಯಗಳ ಆಳಕ್ಕೆ ತಲುಪುತ್ತಿದ್ದರು. ಲೌಕಿಕ ಅಭಿಲಾಷೆಗಳನ್ನು ಗಳಿಸುವುದು ಎಂದಿಗೂ ಅವರ ಉದ್ದೇಶವಾಗಿರಲಿಲ್ಲ ಹಾಗೂ ತಮ್ಮ ಆತ್ಮಗಳನ್ನು ಅಲ್ಲಾಹನ ಅನುಸರಣೆಯಲ್ಲಿ ಸಮರ್ಪಿಸಿದ್ದರು. ಅನುಗ್ರಹಗಳ ಆಧಿಕ್ಯದಲ್ಲೂ ಇಹಪರ ಲೋಕಗಳ ಪ್ರವಾದಿಯಾದ ಹಝ್ರತ್ ಪೈಗಂಬರರ(ಸ) ಧರ್ಮದ ನೆರವಿನಲ್ಲೂ ಅಬೂಬಕರ್ ಮತ್ತು ಉಮರ್ ರಝಿಯಲ್ಲಾಹು ಅನ್‌ಹುಮ್‌ರಂತೆ ನಾನು ಯಾರನ್ನೂ ಕಂಡಿಲ್ಲ. ಈ ಇಬ್ಬರೂ ಸೂರ್ಯನಾದ ಹಝ್ರತ್ ಪೈಗಂಬರರ(ಸ) ಅನುಸರಣೆಯಲ್ಲಿ ಚಂದ್ರನಿಗಿಂತಲೂ ಹೆಚ್ಚು ವೇಗವಾಗಿ ಚಲಿಸುವವರಾಗಿದ್ದರು. ಪೈಗಂಬರರ(ಸ) ಪ್ರೇಮದಲ್ಲಿ ಲೀನವಾಗಿದ್ದರು. ಅವರು ಸತ್ಯವನ್ನು ಗಳಿಸಲಿಕ್ಕಾಗಿ ಎಲ್ಲ ಕಷ್ಟತೆಗಳನ್ನು ಸಹಿಯೆಂದು ತಿಳಿದುಕೊಂಡರು. ಅತುಲ್ಯರಾದ ಆ ಪೈಗಂಬರರಿಗಾಗಿ ಎಲ್ಲ ರೀತಿಯ ನಿಂದೆಯನ್ನು ಸಂತೃಪ್ತಿ ಮತ್ತು ಸಂತೋಷದೊಂದಿಗೆ ಸಹಿಸಿದರು. ಸತ್ಯನಿಷೇಧಿಗಳ ಸೈನ್ಯಗಳನ್ನು ಮುಖಾಮುಖಿಯಾಗುವಾಗ ಸಿಂಹಗಳ ಹಾಗೆ ಮುಂದಕ್ಕೆ ಬಂದರು. ಹೀಗೆ ಕೊನೆಗೆ ಇಸ್ಲಾಂ ಧರ್ಮ ವಿಜಯಿಸಿತು. ಶತ್ರುಗಳ ಕೂಟ ಸೋಲನ್ನು ಅನುಭವಿಸಿತು. ಬಹುದೇವಾರಾಧನೆ ಇಲ್ಲವಾಯಿತು. ಅದು ಬೇರು ಸಹಿತ ಕಿತ್ತೆಗೆಯಲ್ಪಟ್ಟಿತು. ಧರ್ಮದ ಸೂರ್ಯ ಪ್ರಕಾಶಿಸಲು ತೊಡಗಿತು. ಹೀಗೆ ಅಲ್ಲಾಹನಿಂದ ಸ್ವೀಕಾರಾರ್ಹವಾದ ಸೇವೆಗಳನ್ನು ಮಾಡುತ್ತಾ ಮುಸ್ಲಿಮರಿಗೆ ಔದಾರ್ಯಗಳನ್ನು ಮಾಡುತ್ತಾ ಅವರಿಬ್ಬರ ಗಮ್ಯಸ್ಥಾನ ಮತ್ತು ಅಂತ್ಯ ಪ್ರವಾದಿಗಳಲ್ಲಿ ಶ್ರೇಷ್ಠರಾದ ಹಝ್ರತ್ ಪೈಗಂಬರರ(ಸ) ಜೊತೆಗೆ ಆಯಿತು. ಇದು ಅಲ್ಲಾಹನ ವರದಾನವಾಗಿದೆ. ಅವನ ನೋಟದಿಂದ ಮುತ್ತಖಿ ಮರೆಯಾಗಿರುವುದಿಲ್ಲ. ನಿಸ್ಸಂಶಯವಾಗಿಯೂ ಔದಾರ್ಯ ಅಲ್ಲಾಹನ ಕೈಯಲ್ಲಿದೆ. ಅವನು ಇಷ್ಟಪಡುವವನಿಗೆ ಅವನು ಅದನ್ನು ಕೊಡುತ್ತಾನೆ. ಯಾವನು ಪರಿಪೂರ್ಣ ಆಸಕ್ತಿಯಿಂದ ಅಲ್ಲಾಹನೊಂದಿಗೆ ಸಂಬಂಧವಿರಿಸುತ್ತಾನೋ ಅವನನ್ನು ಅಲ್ಲಾಹನು ವ್ಯರ್ಥಗೊಳಿಸುವುದಿಲ್ಲ. ಲೋಕದ ಎಲ್ಲ ವಸ್ತುಗಳ ಅವನ ಶತ್ರುವಾದರೂ ಸರಿ. ಅಲ್ಲಾಹನನ್ನು ಹುಡುಕುವವನು ಎಂದಿಗೂ ನಷ್ಟ ಮತ್ತು ಕಷ್ಟತೆಯ ಮುಖವನ್ನು ನೋಡುವುದಿಲ್ಲ. ಅಲ್ಲಾಹನು ಸತ್ಯವಂತರನ್ನು ಸಹಾಯ ಮಾಡದೇ ಬಿಡುವುದಿಲ್ಲ.

ಅಲ್ಲಾಹು ಅಕ್ಬರ್, ಅಲ್ಲಾಹನು ಅತ್ಯಂತ ದೊಡ್ಡವನು. ಅಬೂಬಕರ್(ರ) ಮತ್ತು ಉಮರ್‌ರ(ರ) ಸತ್ಯಸಂಧತೆ ಮತ್ತು ನಿಷ್ಠೆಯ ವೈಭವ ಎಷ್ಟು ಉನ್ನತವಾಗಿತ್ತು! ಇಬ್ಬರೂ ಎಷ್ಟು ಅನುಗ್ರಹೀತ ಖಬರಿನಲ್ಲಿ ದಫನ್ ಆದರು ಎಂದರೆ, ಮೂಸಾ(ಅ) ಮತ್ತು ಈಸಾ(ಅ) ಜೀವಂತವಾಗಿರುತ್ತಿದ್ದರೆ, ನೂರುಪಟ್ಟು ಅಭಿಲಾಷೆಯೊಂದಿಗೆ ಅಲ್ಲಿ ದಫನ್ ಆಗಲು ಬಯಸುತ್ತಿದ್ದರು. ಆದರೆ ಈ ಸ್ಥಾನವು ಗೌರವಾನ್ವಿತನಾದ ಅಲ್ಲಾಹನ ಕಡೆಯಿಂದ ಒಂದು ಅನಂತವಾದ ಕೃಪೆಯಾಗಿದೆ. ಯಾರ ಕಡೆಗೆ ಅಲ್ಲಾಹನ ವರದಾನಗಳು ಅನಾದಿ ಕಾಲದಿಂದ ಮುಖಮಾಡಿ ಇವೆಯೋ ಅಂತಹ ಜನರ ಕಡೆಗೆ ಮಾತ್ರ ಅವು ಹೋಗುತ್ತವೆ. ಅಂತಹ ಜನರ ಮೇಲೆ ಕೊನೆಗೆ ಅಲ್ಲಾಹನ ಚಾದರಗಳು ಹೊದಿಸಲ್ಪಡುತ್ತವೆ. (ಸಿರ್ರುಲ್ ಖಿಲಾಫ್, ಉರ್ದು ಅನುವಾದ, ಪುಟ–77–79)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಪೈಗಂಬರರ(ಸ) ನಂತರ ಇಸ್ಲಾಮಿಗೆ ಲಭಿಸಿದ ಎಲ್ಲವೂ ಈ ಮೂವರು ಖಲೀಫರಿಂದಲೇ ಲಭಿಸಿದ್ದುವು. ಹಝ್ರತ್ ಉಮರ್(ರ) ಮಾಡಿದ್ದೆಲ್ಲವೂ ಕಡಿಮೆಯೇನೂ ಅಲ್ಲ. ಆದರೆ ಅವರ ಕೆಲಸಗಳಿಂದ ಹಝ್ರತ್ ಅಬೂಬಕರ್‌ರ ಕೆಲಸ ಕಡಿಮೆಯೆಂದು ಹೇಳುವಂತಿಲ್ಲ ಏಕೆಂದರೆ ವಿಜಯದ ಹಳಿಯನ್ನು ಅಬೂಬಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹುರವರೇ ಹಾಕಿದ್ದರು. ಮಹಾ ಪಿತೂರಿ ಮತ್ತು ಗಲಭೆಯನ್ನು ಅವರೇ ಕೊನೆಗೊಳಿಸಿದ್ದರು. ಹಝ್ರತ್ ಅಬೂಬಕರ್ ಸಿದ್ದೀಖ್‌ರಿಗೆ(ರ) ಎದುರಿಸಬೇಕಾಗಿ ಬಂದಂತಹ ಕಷ್ಟತೆಗಳು ಹಝ್ರತ್ ಉಮರ್‌ರಿಗೆ(ರ) ಎಂದಿಗೂ ಎದುರಿಸಬೇಕಾಗಿ ಬಂದಿರಲಿಲ್ಲ. ಹಝ್ರತ್ ಅಬೂಬಕರ್ ಸಿದ್ದೀಖ್(ರ) ರಸ್ತೆಯನ್ನು ಸ್ವಚ್ಛಗೊಳಿಸಿದ ನಂತರ ಅದರ ಮೇಲೆ ಉಮರ್(ರ) ವಿಜಯಗಳ ಬಾಗಿಲುಗಳನ್ನು ತೆರೆದರು. (ಮಲ್‌ಫೂಝಾತ್, ಸಂಪುಟ–6, ಪುಟ–414–415)

ಹಝ್ರತ್ ಪೈಗಂಬರ್‌ರೊಂದಿಗೆ(ಸ) ಮತ್ತು ಹಝ್ರತ್ ಅಬೂಬಕರ್ ಹಾಗು ಹಝ್ರತ್ ಉಮರ್‌ರೊಂದಿಗೆ(ರ) ಹಝ್ರತ್ ಮಸೀಹ್ ಮೌಊದ್‌ರಿಗೆ(ಅ) ಅವರ ಹೃದಯದಲ್ಲಿ ಇದ್ದ ಪ್ರೀತಿ ಮತ್ತು ಗೌರವದ ಬಗ್ಗೆ ಹಝ್ರತ್ ಮೌಲವಿ ಅಬ್ದುಲ್‌ಕರೀಂ ಸಾಹಿಬ್(ರ) ಹೇಳುತ್ತಾರೆ: ಒಂದು ಬಾರಿ ಹಝ್ರತ್ ಮಸೀಹ್ ಮೌಊದ್‌ರ(ರ) ಪ್ರೇಮದಲ್ಲಿ ಲೀನನಾಗಿದ್ದ ಒಬ್ಬ ಸಹೋದರನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಸನ್ನಿಧಿಯಲ್ಲಿ ಹೀಗೆ ಹೇಳಿದರು: ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರಗಿಂತ ನಿಮ್ಮನ್ನು ನಾವೇಕೆ ಪದವಿಯಲ್ಲಿ ಶ್ರೇಷ್ಠರೆಂದು ಭಾವಿಸಬಾರದು? ಮತ್ತು ನಿಮ್ಮನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನಕ್ಕೆ ಸಮೀಪವಿರುವವರು ಎಂದೇಕೆ ಭಾವಿಸಬಾರದು? ಅಲ್ಲಾಹ್, ಅಲ್ಲಾಹ್, ಈ ಮಾತನ್ನು ಕೇಳಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಣ್ಣಗುಂದಿತು ಮತ್ತು ಅವರ ಪೂರ್ಣ ಶರೀರದಲ್ಲಿ ಆಶ್ಚರ್ಯಕರವಾದ ವ್ಯಾಕುಲತೆ ಮತ್ತು ಕಳವಳ ಪ್ರಕಟವಾಯಿತು. ನಾನು ಪರಿಶುದ್ಧನಾದ ಅಲ್ಲಾಹನ ಮೇಲೆ ಆಣೆ ಹಾಕಿ ಹೇಳುತ್ತೇನೆ. ಆ ಗಳಿಗೆಯು ಮಸೀಹ್ ಮೌಊದ್‌ರೊಂದಿಗೆ ನನಗೆ ಇದ್ದ ವಿಶ್ವಾಸವನ್ನು ಇನ್ನಷ್ಟು ವರ್ಧಿಸಿತು. ಅವರು ನಿರಂತರವಾಗಿ ಆರು ಗಂಟೆಗಳಷ್ಟು ಸಮಯ ಭಾಷಣ ಮಾಡಿದರು. ಅವರು ಭಾಷಣ ಶುರುಮಾಡಿದಾಗ ನಾನು ಗಡಿಯಾರವನ್ನು ನೋಡಿದ್ದೆ. ಅವರು ಭಾಷಣವನ್ನು ಕೊನೆಗೊಳಿಸಿದಾಗಲೂ ನಾನು ಗಡಿಯಾರವನ್ನು ನೋಡಿದೆ. ಆರು ಗಂಟೆಗಳು ಪೂರ್ತಿಯಾಯಿತು. ಒಂದು ನಿಮಿಷದ ವ್ಯತ್ಯಾಸವೂ ಇದ್ದಿರಲಿಲ್ಲ. ಇಷ್ಟು ದೀರ್ಘ ಸಮಯ ಒಂದು ವಿಷಯದ ಬಗ್ಗೆ ಹೇಳುವುದು, ಅದು ಕೂಡ ನಿರಂತರವಾಗಿ ಹೇಳುವುದು ಅದ್ಭುತ ಸಂಗತಿಯಾಗಿದೆ. ಈ ವಿಷಯದಲ್ಲಿ ಅವರು ಪೂರ್ತಿಯಾಗಿ ಹಝ್ರತ್ ಪೈಗಂಬರರ(ಸ) ಸ್ತುತಿಗಾನ ಮತ್ತು ಶ್ರೇಷ್ಠತೆಗಳು ಹಾಗೂ ತನ್ನ ದಾಸ್ಯ ಮತ್ತು ಕೆಳದರ್ಜೆಯ ಬಗ್ಗೆ, ಅದೇ ರೀತಿಯಲ್ಲಿ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರರ(ರ) ಶ್ರೇಷ್ಠತೆಗಳ ಕುರಿತು ವಿವರಿಸುತ್ತಾ ಹೀಗೆ ಹೇಳಿದರು: ನಾನು ಅವರನ್ನು ಸ್ತುತಿಸುತ್ತೇನೆ ಮತ್ತು ನಾನು ಅವರ ಕಾಲುಗಳ ಧೂಳಾಗಿದ್ದೇನೆ ಎಂಬುದೇ ನನಗೆ ಹೆಮ್ಮೆಪಡಲು ಸಾಕು."

ಅವರಿಗೆ ಅಲ್ಲಾಹನು ದಯಪಾಲಿಸಿದ ಆಂಶಿಕ ಅಥವಾ ಭಾಗಿಕ ಶ್ರೇಷ್ಠತೆಯನ್ನು ಕೊನೆಗಾಲದ ವರೆಗೆ ಬೇರೆ ಯಾರೂ ಗಳಿಸಲು ಸಾಧ್ಯವಿಲ್ಲ. ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಯಾವಾಗ ಲೋಕದಲ್ಲಿ ಪುನಃ ಜನಿಸುವರು ಮತ್ತು ಯಾರಿಗೆ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್‌ರಿಗೆ ಸೇವೆಮಾಡಲು ಲಭಿಸಿದಂತಹ ಸಂದರ್ಭಗಳು ಮತ್ತು ಅವಕಾಶಗಳು ಲಭಿಸಲು ಸಾಧ್ಯ? (ಮಲ್‌ಫೂಝಾತ್, ಸಂಪುಟ–1, ಪುಟ–326)

ಈ ಖುತ್ಬಗಳ ಪರಂಪರೆಯಲ್ಲಿ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ಇಲ್ಲಿಗೆ ಸಮಾಪ್ತಿಗೊಂಡಿದೆ. ಇನ್ನು ಮುಂದೆ ಅಲ್ಲಾಹನು ಸೌಭಾಗ್ಯ ನೀಡಿದರೆ ಹಝ್ರತ್ ಅಬೂಬಕರರ(ರ) ಪ್ರಸ್ತಾಪವನ್ನು ಆರಂಭಿಸುತ್ತೇನೆ. ಇನ್‌ಶಾ ಅಲ್ಲಾಹ್.

******************

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.